ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 1 ಶನಿವಾರ 2023

ಸಂಪುಟ: 44 | ಸಂಚಿಕೆ: 76 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೇಕೆದಾಟು ಅಣೆಕಟ್ಟೆ ನಿರ್ಮಾಣ ಪ್ರಕ್ರಿಯೆಗೆ ಚಾಲನೆ

● ದೆಹಲಿಯಲ್ಲಿ ಕಾನೂನು ತಜ್ಞ ಮುಕುಲ್ ರೋಹಟಗಿ, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್ ಭೇಟಿಯಾಗಿ ಚರ್ಚಿಸಿದ ರಾಜ್ಯ ಭಾರೀ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ● 67.14 ಟಿಎಂಸಿ ನೀರು ಸಂಗ್ರಹ, 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಉದ್ದೇಶಿತ 14,500 ಕೋಟಿ ಪರಿಷ್ಕೃತ ಅಂದಾಜು ವೆಚ್ಚದ ಯೋಜನೆ ಇದು ● ಭೂಸ್ವಾಧೀನಕ್ಕಾಗಿ ಜು.3ರಂದು ಉನ್ನತ ಅಧಿಕಾರಿಗಳ ಸಭೆ ಕರೆದಿರುವ ಉಪ ಮುಖ್ಯಮಂತ್ರಿಗಳು

ಬೆಂಗಳೂರು, ಜೂ 30(ಕೆಎಂಶಿ)– ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮನಾಂತರವಾಗಿ ಮೇಕೆದಾಟು ಸಮೀಪ ಬೃಹತ್ ಅಣೆಕಟ್ಟು ನಿರ್ಮಿಸುವ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.

ಭಾರೀ ಜಲಸಂಪನ್ಮೂಲ ಇಲಾಖೆ ಹೊಣೆ ಹೊತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಕೆದಾಟು ಯೋಜನೆ ಅನುಷ್ಠಾನ ಕುರಿತಂತೆ ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ಬಿಡಾರ ಹೂಡಿ, ಕಾನೂನು ತಜ್ಞರು ಮತ್ತು ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡಿದ ನಂತರ ಯೋಜನೆಗೆ ಅಗತ್ಯವಿರುವ ಭೂಮಿಯ ಭೂ ಸ್ವಾಧೀನಕ್ಕೆ ತೀರ್ಮಾನ ಕೈಗೊಂಡಿದ್ದಾರೆ.

ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ವಾದ ಮಾಡುತ್ತಿರುವ ಹಿರಿಯ ನ್ಯಾಯವಾದಿ ಮತ್ತು ಭಾರತದ ಮಾಜಿ ಅಟಾರ್ನಿ ಜನರಲ್ ಮುಕುಲ್ ರೋಹಟಗಿ ಅವರು ನೀಡಿರುವ ಸಲಹೆ, ಸೂಚನೆಯಂತೆ ಶಿವಕುಮಾರ್ ಈ ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಅವರ ಸಲಹೆಯಂತೆ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಸಮಾಲೋಚನೆ ನಡೆಸಲು ಸೋಮವಾರ ಜುಲೈ 3ರಂದು ಮಧ್ಯಾಹ್ನ ಮೂರು ಗಂಟೆಗೆ ಉಪ ಮುಖ್ಯಮಂತ್ರಿಗಳು ಉನ್ನತಮಟ್ಟದ ಅಧಿಕಾರಿಗಳ ಸಭೆ ಕರೆದಿದ್ದಾರೆ. ರೋಹಟಗಿ ಅವರನ್ನು ಭೇಟಿಯಾಗಿ ಯೋಜನೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿದ್ದಲ್ಲದೆ, ಅನುಷ್ಠಾನ ಮಾಡುವ ಸಂಬಂಧ ಕಾನೂನಾತ್ಮಕವಾಗಿ ಅವರಿಂದ ಸಲಹೆ ಪಡೆದರು. ಅಷ್ಟೇ



ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರನ್ನು ಡಿ.ಕೆ.ಶಿವಕುಮಾರ್ ಶುಕ್ರವಾರ ನವದೆಹಲಿಯಲ್ಲಿ ಭೇಟಿ ಮಾಡಿದರು.

ಅಲ್ಲ, ಕೇಂದ್ರ ಜಲಶಕ್ತಿ ಸಚಿವರಿಗೆ ರಾಜ್ಯ ಸರ್ಕಾರದ ಪರವಾಗಿ ಸಲ್ಲಿಸಲು ಮನವಿ ಪತ್ರವನ್ನು ರೋಹಟಗಿ ಅವರೇ ಸಿದ್ಧಪಡಿಸಿ ಕೊಟ್ಟರು. ಕಾನೂನು ತಜ್ಞರು ನೀಡಿದ ಪತ್ರವನ್ನು ಶುಕ್ರವಾರ ಕೇಂದ್ರ ಜಲಸಂಪನ್ಮೂಲ ಸಚಿವ ಗಜೇಂದ್ರಸಿಂಗ್ ಶೇಖಾವತ್ ಅವರನ್ನು ಭೇಟಿಯಾಗಿ ನೀಡಿದ್ದಲ್ಲದೆ, ಯೋಜನೆ ಅನುಷ್ಠಾನಕ್ಕೆ ಅಗತ್ಯ ಸಹಕಾರ ಕೋರಿದರು. ಕರ್ನಾಟಕ ಸರ್ಕಾರದ ಮನವಿಗೆ ಸ್ಪಂದಿಸಿದ

ಕೇಂದ್ರ ಸಚಿವರು, ಕಾವೇರಿ ನ್ಯಾಯಾಧೀಕರಣದ ತೀರ್ಪು ಹಾಗೂ ಸುಪ್ರೀಂಕೋರ್ಟ್‌ನ ನಿರ್ದೇಶನದಂತೆ ಕಾನೂನಾತ್ಮಕವಾಗಿ ಕೈಗೊಳ್ಳುವ ಕುಡಿಯುವ ನೀರು ಯೋಜನೆಗೆ ನಮ್ಮ ಸಹಮತವಿದೆ ಎಂದಿದ್ದಾರೆ. ಮೇಕೆದಾಟು ರಾಮನಗರ ಜಿಲ್ಲೆಯ ಕನಕಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರಲಿದ್ದು, ಅಣೆಕಟ್ಟು ನಿರ್ಮಾಣವಾದರೆ ಅರಣ್ಯ ಭೂಮಿಯೇ ● 9ನೇ ಪುಟಕ್ಕೆ



ಶಿವಕುಮಾರ್ ಈ ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದಾಗಲೇ ಯೋಜನಾ ವರದಿ ಸಿದ್ಧಪಡಿಸಿ, ಅಣೆಕಟ್ಟು ನಿರ್ಮಾಣಕ್ಕೆ ಅಗತ್ಯವಿರುವ 5912 ಕೋಟಿ ರೂ.ಗೆ ಅಂದೇ ಸಂಪುಟದಲ್ಲಿ ಅನುಮತಿ ಪಡೆದಿದ್ದರು. ವಿಸ್ತೃತ ಯೋಜನಾ ವರದಿಯಂತೆ 67.14 ಟಿಎಂಸಿ ನೀರು ಸಂಗ್ರಹ ಹಾಗೂ 400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಸೇರಿದೆ. ಸಮನಾಂತರ ಅಣೆಕಟ್ಟು ಕೇವಲ ವಿದ್ಯುತ್ ಉತ್ಪಾದನೆ, ಕುಡಿಯುವ ನೀರು ಉದ್ದೇಶ ಹೊಂದಿದೆ ಎಂದು ಉಲ್ಲೇಖಿಸಲಾಗಿದೆ. ಇದನ್ನೇ ಕೇಂದ್ರ ಜಲಸಂಪನ್ಮೂಲ ಇಲಾಖೆಗೆ ಸಲ್ಲಿಸಿ, ಅನುಮತಿ ಕೋರಿತ್ತು.

ಇಂದಿನಿಂದ 'ಅನ್ನಭಾಗ್ಯ' ಜಾರಿ

5 ಕೆಜಿ ಅಕ್ಕಿ ಜೊತೆಗೆ ಉಳಿದ 5 ಕೆಜಿಗೆ ಫಲಾನುಭವಿಗಳ ಖಾತೆಗೆ ಹಣ ವರ್ಗಾವಣೆ: ಸಚಿವ ಮುನಿಯಪ್ಪ





ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಬಿಪಿಎಲ್ ಹೊಂದಿರುವವರಿಗೆ 'ಅನ್ನ ಭಾಗ್ಯ' ಯೋಜನೆ ಜುಲೈ 1ರಂದು ಜಾರಿಗೆ ಬರಲಿದೆ.

ಕೇಂದ್ರ ಸರ್ಕಾರ ಬಿಪಿಎಲ್ ಕಾರ್ಡು ಹೊಂದಿರುವವರಿಗೆ ನೀಡುವ 5 ಕೆಜಿ ಅಕ್ಕಿ ಜೊತೆಗೆ ಉಳಿದ 5 ಕೆಜಿ ಅಕ್ಕಿ ಬದಲಿಗೆ ಹಣ ನೀಡುವುದಾಗಿ ರಾಜ್ಯ ಸರ್ಕಾರ ಈಗಾಗಲೇ ಘೋಷಿಸಿದ್ದು, ಅದರಂತೆ ಯೋಜನೆ ಜಾರಿಗೆ ಬರಲಿದೆ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಸಚಿವ ಕೆ.ಹೆಚ್.ಮುನಿಯಪ್ಪ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ 5 ಕೆಜಿ ಅಕ್ಕಿ ವಿತರಣೆ ಜೊತೆ ಉಳಿದ 5 ಕೆಜಿ ಅಕ್ಕಿ ಬದಲಿಗೆ ಸದ್ಯಕ್ಕೆ ಕುಟುಂಬದ ಪ್ರತಿ ವ್ಯಕ್ತಿಗೆ 170 (ಪ್ರತಿ ಕೆ.ಜಿಗೆ 34 ರೂಪಾಯಿಗಳಂತೆ) ನೀಡುತ್ತೇವೆ. 90 ಪರ್ಸೆಂಟ್ ಫಲಾನುಭವಿಗಳಲ್ಲಿ ಬ್ಯಾಂಕ್ ಖಾತೆಗಳಿವೆ. ಅಕೌಂಟ್ ಇಲ್ಲದವರು ಮಾಡಿಸಿಕೊಳ್ಳಬೇಕು. ಒಬ್ಬರಿಗೆ 170 ರೂಪಾಯಿ ಕೊಡುತ್ತೇವೆ. ● 9ನೇ ಪುಟಕ್ಕೆ

ಮಧ್ಯರಾತ್ರಿಯಿಂದಲೇ 'ಗೃಹ ಜ್ಯೋತಿ'

ವಾರ್ಷಿಕ ಬಳಕೆಯ ಸರಾಸರಿ ಆಧರಿಸಿ, ಅದಕ್ಕೆ ಶೇ.10 ಹೆಚ್ಚುವರಿಯೊಂದಿಗೆ ಉಚಿತ ವಿದ್ಯುತ್ ಭಾಗ್ಯ

ಬೆಂಗಳೂರು, ಜೂ.30–ಕಾಂಗ್ರೆಸ್‌ನ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಉಚಿತ ವಿದ್ಯುತ್ ನೀಡುವ 'ಗೃಹ ಜ್ಯೋತಿ' ಯೋಜನೆ ಮಧ್ಯರಾತ್ರಿಯಿಂದಲೇ ರಾಜ್ಯ ಸರ್ಕಾರ ಜಾರಿಗೊಳಿಸಿದೆ.



ಈ ಯೋಜನೆಯಂತೆ ಮಧ್ಯ ರಾತ್ರಿಯಿಂದ 200 ಯೂನಿಟ್ ಒಳಗೆ ವಿದ್ಯುತ್ ಬಳಸುವ ಫಲಾನುಭವಿಗಳು ಬಿಲ್ ಪಾವತಿಸುವ ಹಾಗಿಲ್ಲ. ಜುಲೈ ತಿಂಗಳ ಬಿಲ್ ಆಗಸ್ಟ್‌ನಲ್ಲಿ ಬರಲಿದ್ದು, ಈ ತಿಂಗಳಿಂದ ವಿದ್ಯುತ್ ಉಚಿತವಾಗಿರುತ್ತದೆ. ಜೂನ್ ತಿಂಗಳಲ್ಲಿ ಬಳಸಿರುವ ವಿದ್ಯುತ್ ಬಿಲ್ ಜುಲೈ ತಿಂಗಳಲ್ಲಿ ಬರಲಿದ್ದು, ಈ ಬಿಲ್ ಅನ್ನು ಗ್ರಾಹಕರು ಪಾವತಿಸಲೇಬೇಕಾಗುತ್ತದೆ. ಗೃಹ ಜ್ಯೋತಿ ಯೋಜನೆಗೆ ಸೇವಾ ಸಿಂಧು ಪೋರ್ಟಲ್ ಮೂಲಕ ಆನ್‌ಲೈನ್ ಅರ್ಜಿ ಸಲ್ಲಿಸುವ ಕಾರ್ಯ ಜೂನ್ 18ರಂದು ಆರಂಭವಾಗಿತ್ತು. ರಾಜ್ಯ ಸರ್ಕಾರವು ಒಟ್ಟು 2.41 ಕೋಟಿ ಫಲಾನುಭವಿಗಳಿದ್ದಾರೆ ಎಂದು ನಿರೀಕ್ಷಿಸಿದ್ದು, ಕಳೆದ 11 ದಿನದಲ್ಲಿ 80,99,932 ಅರ್ಜಿಗಳು ಸಲ್ಲಿಕೆಯಾಗಿವೆ. ಇನ್ನು 1,33,00,068 ಮಂದಿ ಅರ್ಜಿ ಸಲ್ಲಿಸಬೇಕಾಗಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ. ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಗೃಹ ಜ್ಯೋತಿ ಯೋಜನೆಯಡಿ 200 ಯೂನಿಟ್ ವರೆಗೆ ಉಚಿತ ವಿದ್ಯುತ್ ನೀಡಲಾಗುವುದು ಎಂದು ತನ್ನ ಗ್ಯಾರಂಟಿಯಲ್ಲಿ ಘೋಷಿಸಿತ್ತು. ಆದರೆ ಈ ಯೋಜನೆಯನ್ನು ಕಾರ್ಯಗತಗೊಳಿಸುವ ವೇಳೆ ಗ್ರಾಹಕರ 1 ವರ್ಷದ ವಿದ್ಯುತ್ ಬಳಕೆಯನ್ನು ಸರಾಸರಿ ಲೆಕ್ಕ ಹಾಕಿ ತಿಂಗಳ ಬಳಕೆ ನಿರ್ಧರಿಸಿ, ● 9ನೇ ಪುಟಕ್ಕೆ

ಕಾಂಗ್ರೆಸ್ ಗ್ಯಾರಂಟಿಗಳ ಅನುಷ್ಠಾನಕ್ಕೆ ಆಗ್ರಹಿಸಿ ವಿಧಾನಸೌಧ ಆವರಣದ ಗಾಂಧಿ ಪ್ರತಿಮೆ ಮುಂದೆ

ಜು.4ರಂದು ಬಿಜೆಪಿ ಧರಣಿ

ಬೆಂಗಳೂರು, ಜೂ 30(ಕೆಎಂಶಿ)– ಕಾಂಗ್ರೆಸ್ ಪಕ್ಷ ನೀಡಿದ್ದ ಗ್ಯಾರಂಟಿಗಳ ಸಮರ್ಪಕ ಅನುಷ್ಠಾನಕ್ಕೆ ಆಗ್ರಹಿಸಿ ವಿಧಾನಸೌಧದ ಮುಂದೆ ಗಾಂಧಿ ಪ್ರತಿಮೆ ಬಳಿಯಲ್ಲಿ ಜುಲೈ 4ರಂದು ನಮ್ಮ ನೂರಾರು ಕಾರ್ಯಕರ್ತರು ಬೆಳಿಗ್ಗೆಯಿಂದ ಸಂಜೆವರೆಗೆ ಒಂದು ದಿನ ಧರಣಿ ಸತ್ಯಾಗ್ರಹ ಮಾಡಲಿದ್ದಾರೆ. ಬಿಜೆಪಿ ಚುನಾಯಿತ ಪ್ರತಿನಿಧಿಗಳು ಸದನದ ಒಳಗೂ ಹೋರಾಟ ಮಾಡಲಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಮನೆಮನೆಗೆ ಹೋಗಿ ಸಿದ್ದರಾಮಯ್ಯ, ಶಿವಕುಮಾರ್ ಅವರು ಸಹಿ ಮಾಡಿಕೊಟ್ಟ ಗ್ಯಾರಂಟಿ ಕಾರ್ಡಿನ ಅಂಶಗಳನ್ನು ಚಾಚೂತಪ್ಪದೆ ಅನುಷ್ಠಾನಕ್ಕೆ ತರಲು ಅವರು ಆಗ್ರಹಿಸಿದರು. ಈ ಕುರಿತು ಪಕ್ಷದ ಮುಖಂಡರ ಸಭೆಯಲ್ಲಿ ಚರ್ಚಿಸಿದ್ದಾಗಿ ಹೇಳಿದ ಅವರು, ಭರವಸೆ ಕೊಟ್ಟಂತೆ 10 ಕೆಜಿ ಅಕ್ಕಿ ● 9ನೇ ಪುಟಕ್ಕೆ

ಎಕ್ಸ್‌ಪ್ರೆಸ್ ವೇನಲ್ಲಿ ಅತೀ ವೇಗ ಚಾಲನೆಗೆ

ದಂಡದ ಜೊತೆಗೆ ಲೈಸನ್ಸ್ ರದ್ದು

ಟೋಲ್‌ಗಳಲ್ಲಿ ಡ್ರಂಕ್ ಆಂಡ್ ಡ್ರೈವ್ ತಪಾಸಣೆ: ಎಡಿಜಿಪಿ ಅಲೋಕ್‌ಕುಮಾರ್



ಮಂಡ್ಯ, ಜೂ.30(ಮೋಹನ್‌ರಾಜ್)– ಬೆಂಗಳೂರು–ಮೈಸೂರು ದಶಪಥ ಹೆದ್ದಾರಿಯಲ್ಲಿ ಅಪಘಾತ ಪ್ರಕರಣ ಹೆಚ್ಚಾಗಿರುವುದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಅತೀ ವೇಗವಾಗಿ ವಾಹನ ಸಂಚಾರ ಮಾಡಿದರೆ ದಂಡ ಹಾಕುವುದರ ಜೊತೆಗೆ ಲೈಸೆನ್ಸ್ ರದ್ದು ಮಾಡುತ್ತೇವೆ ಎಂದು ಎಡಿಜಿಪಿ ಅಲೋಕ್ ಕುಮಾರ್ ಎಚ್ಚರಿಕೆ ನೀಡಿದರು.

ತಾಲೂಕಿನ ಹನಕೆರೆ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯಕ್ಕೆ ಹೈವೇಯಲ್ಲಿ ದ್ವಿಚಕ್ರ ವಾಹನ ಓಡಾಡುತ್ತಿವೆ. ದ್ವಿಚಕ್ರ ವಾಹನ ರದ್ದಿಗೆ ಗೆಜೆಟ್ ನೋಟಿಫಿಕೇಶನ್ ಆಗುತ್ತಿದೆ. ಇದುವರೆಗೆ ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ 64 ಜನರು ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. 58 ಜನರು ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ ಸಾವನ್ನಪ್ಪಿದ್ದಾರೆ. ಟೋಲ್ ಬಳಿ ಇನ್ನೂ ಮುಂದೆ ಡ್ರಂಕ್ ಅಂಡ್ ಡ್ರೈವ್ ಟೆಸ್ಟ್ ಮಾಡಲು ಸೂಚನೆ ನೀಡಿದ್ದೇನೆ ಎಂದರು. ಹೆದ್ದಾರಿ ಪರಿಶೀಲನೆ ಸಂದರ್ಭ ಜನರು ಅವರ ಸಮಸ್ಯೆಗಳನ್ನು ಹೇಳಿದ್ದಾರೆ. ಅಪಘಾತಗಳಿಗೆ ಅತಿಯಾದ ವೇಗ ಕಾರಣವಾಗಿದೆ. ಜನರಲ್ಲಿ ವಾಹನ ಚಾಲಿಸುವ ನೈಪುಣ್ಯತೆ ಕಡಿಮೆ ಇದೆ. ಕಾರು, ಬೈಕಿನ ಚಾಲಕರು ಅತೀ ವೇಗವಾಗಿ ಓಡಿಸುತ್ತಾರೆ. ಬೈಕ್‌ನವರು 140ರ ವೇಗದಲ್ಲಿ ವಾಹನ ಚಾಲನೆ ಮಾಡುತ್ತಾರೆ. ಮಧ್ಯದಲ್ಲಿ ಸಡನ್ ಬ್ರೇಕ್ ಹಾಕಿದಾಗ ಅಪಘಾತಗಳು ಆಗುತ್ತವೆ. ಬಹಳಷ್ಟು ಜನರಿಗೆ ವಾಹನಗಳ ಮೇಲೆ ಕಂಟ್ರೋಲ್ ಇರಲ್ಲ. ಕಡಿಮೆ ವೇಗದಲ್ಲಿ ಹೋದರೆ ಏನು ಆಗಲ್ಲ. ಆರ್‌ಟಿಓ ಅವರು ನೈಪುಣ್ಯತೆ ● 9ನೇ ಪುಟಕ್ಕೆ



ಮೈಸೂರು–ಬೆಂಗಳೂರು ಹೈವೇಯಲ್ಲಿ ಮತ್ತೆ ಸರಣಿ ಅಪಘಾತ

ಓರ್ವನ ಸ್ಥಿತಿ ಗಂಭೀರ, ಐವರಿಗೆ ಸಣ್ಣಪುಟ್ಟ ಗಾಯ

ಅಪಘಾತಕ್ಕೆ ಹೆದ್ದಾರಿಯ ಬೇಜವಾಬ್ದಾರಿ ನಿರ್ವಹಣೆಯೇ ಕಾರಣ: ಜನರ ಆಕ್ರೋಶ

ಮಂಡ್ಯ, ಜೂ.30–ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಸರಣಿ ಅಪಘಾತ ಸಂಭವಿಸಿ, ಐವರು ಗಾಯಗೊಂಡಿದ್ದು, ಅದರಲ್ಲಿ ಓರ್ವನ ಸ್ಥಿತಿ ಗಂಭೀರವಾಗಿದೆ. ಈ ಘಟನೆ ತಾಲೂಕಿನ ತೂಬಿನಕೆರೆ ಬಳಿ ಸಂಭವಿಸಿದ್ದು, ರಸ್ತೆ ವಿಭಜಕದಲ್ಲಿನ ಗಿಡಗಳಿಗೆ ಟ್ಯಾಂಕರ್ ಮೂಲಕ ನೀರು ಹಾಯಿಸುತ್ತಿದ್ದಾಗ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳದ ಸಿಬ್ಬಂದಿಗಳ ನಿರ್ಲಕ್ಷ್ಯತನದಿಂದ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಬೆಂಗಳೂರು ಕಡೆಯಿಂದ ವೇಗವಾಗಿ ಬಂದ ಕಾರು ನೀರಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಆ ಕಾರಿನ ಹಿಂದೆ ಬರುತ್ತಿದ್ದ ಮತ್ತೆರಡು ಕಾರುಗಳು ಡಿಕ್ಕಿ ಹೊಡೆದಿವೆ ಈ ವೇಳೆ ಕಾರಿನಲ್ಲಿದ್ದ ಐವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಮೊದಲ ಕಾರಿನಲ್ಲಿದ್ದ ಓರ್ವನ ಸ್ಥಿತಿ ಗಂಭೀರವಾಗಿದೆ. ಎಲ್ಲರನ್ನು ಮಂಡ್ಯದ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ ಶನಿವಾರ 1 ಜುಲೈ 2023

ಪಲಿಮಾರು ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳಿಂದ ಸಹಸ್ರಾರು ಭಕ್ತರಿಗೆ ಮುದ್ರಾಧಾರಣೆ



ಮೈಸೂರು, ಜೂ.30–ಆಷಾಢ ಮಾಸದ ಪ್ರಥಮ ಏಕಾದಶಿ ಪರ್ವಕಾಲದ ಹಿನ್ನೆಲೆಯಲ್ಲಿ ತಪ್ತ ಮುದ್ರಾಧಾರಣೆ ಕಾರ್ಯಕ್ರಮವನ್ನು ಸರಸ್ವತಿಪುರಂ ಶ್ರೀ ಕೃಷ್ಣಧಾಮ ಮಠದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಹಾಗೂ ಶ್ರೀಕೃಷ್ಣ ಟ್ರಸ್ಟ್ ವತಿಯಿಂದ ಉಡುಪಿ ಪಲಿಮಾರು ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳವರು ಭಕ್ತರಿಗೆ ಶಂಖ ಚಕ್ರಗಳ ಮುದ್ರಾಧಾರಣೆ ನೆರವೇರಿಸಿದರು.

ಬೆಳಗ್ಗಿನಿಂದಲೇ ಮುದ್ರಾಧಾರಣೆ ಮಾಡಿ ಮಾತನಾಡಿದ ಶ್ರೀ ಉಡುಪಿ ಪಲಿಮಾರು ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದಂಗಳು, ಆಷಾಢಮಾಸದ ಶುಕ್ಲ ಪಕ್ಷದ ಏಕಾದಶಿಯನ್ನು ಶಯನಿ ಏಕಾದಶಿ ಎಂದು ಕರೆಯಲಾಗುತ್ತದೆ. ಈ ದಿನದಿಂದ ಉತ್ಥಾನದ್ವಾದಶಿಯ ತನಕ ಶ್ರೀಮನ್ನಾರಯಣನು ಯೋಗನಿದ್ರೆಯಲ್ಲಿ ತೊಡಗುತ್ತಾನೆ ಅನ್ನೋ ನಂಬಿಕೆ ಇದೆ. ಮಳೆಗಾಲದಲ್ಲಿ ಸೊಳ್ಳೆ, ಕ್ರಿಮಿಕೀಟಗಳಿಂದ ಎದುರಾಗುವ ರೋಗರುಜಿನಗಳನ್ನು ಎದುರಿಸಲುಬೇಕಾದ ರೋಗ ನಿರೋಧಕ ಶಕ್ತಿ ಹೆಚ್ಚಳಕ್ಕೂ ತಪ್ತ ಮುದ್ರಾಧಾರಣೆ ಪೂರಕವಾಗಲಿದೆ. ಚಾತುರ್ಮಾಸ್ಯ ಕೂರುವ ಮೊದಲು ಗೃಹಸ್ಥರು ಹಾಗೂ ಯತಿಗಳು ತಪ್ತ ಮುದ್ರಾಧಾರಣೆ ಮಾಡಿಸಿಕೊಳ್ಳಬೇಕು. ಅನುಕೂಲವಾದವರು ಏಕಾದಶಿ ದಿನದ ಹೊರತಾಗಿಯೂ ಮುದ್ರಾಧಾರಣೆ ಮಾಡಿಸಿಕೊಳ್ಳಬಹುದು ಎಂದು ಹೇಳಿದರು.

ಶ್ರೀ ಕೃಷ್ಣಾ ಮಿತ್ರಮಂಡಳಿಯ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ತಂತ್ರಿ ಮಾತನಾಡಿ, ಬೆಳಗ್ಗಿನಿಂದಲೇ ಮಠಕ್ಕೆ ಆಗಮಿಸಿದ ಭಕ್ತರು ಸರತಿ ಸಾಲಿನಲ್ಲಿ ನಿಂತು ತೋಳಿಗೆ, ಎದೆಯ ಭಾಗ ಹಾಗೂ ಹೊಟ್ಟೆಯ ಮೇಲೆ ಶಂಖ ಹಾಗೂ ಚಕ್ರದ ಮುದ್ರೆ ಹಾಕಿಸಿಕೊಂಡರು.

ಪ್ರತಿವರ್ಷವೂ ನಾನಾ ಕಡೆಗಳಿಂದ ಭಕ್ತರು ಆಗಮಿಸಿ ತಪ್ತ ಮುದ್ರೆಯನ್ನು ಹಾಕಿಸಿಕೊಳ್ಳುತ್ತಾರೆ. ಸುದರ್ಶನ ಹೋಮವನ್ನು ನಡೆಸಿ ಅದರಲ್ಲಿ ಕಾಯಿಸಿದ ಶಂಖ, ಚಕ್ರ, ಗದ, ಪದ್ಮ ಚಿಹ್ನೆಯನ್ನು ಎದೆಯ ಭಾಗ, ಎಡ ಮತ್ತು ಬಲ ತೋಳಿಗೆ ಹಾಕುವುದನ್ನು ತಪ್ತ ಮುದ್ರಾಧಾರಣೆ ಎಂದು ಕರೆಯಲಾಗುತ್ತದೆ ಎಂದು ಹೇಳಿದರು. ಕೃಷ್ಣ ಮಿತ್ರ ಮಂಡಳಿಯ ಅಧ್ಯಕ್ಷರಾದ ರಮೇಶ್, ರವಿ ಶಾಸ್ತ್ರಿ, ಎಂ.ಕೆ.ಪುರಾಣಿಕ್, ಶ್ರೀ ವತ್ಸ, ಸುರೇಶ್ ಇನ್ನಿತರರು ಹಾಜರಿದ್ದರು.

ಅಕ್ರಮ ಪಡಿತರ ಅಕ್ಕಿ ಸಾಗಣೆ: ಆಟೋರಿಕ್ಷಾ ವಶಕ್ಕೆ, ಚಾಲಕ ಪರಾರಿ

ಅಪ್ರಾಪ್ತ ಬಾಲಕರ ಮೂಲಕ ಅಕ್ಕಿ ಖರೀದಿ ಸಂಬಂಧ ಪ್ರಕರಣ ದಾಖಲು

ಮೈಸೂರು, ಜೂ.30–ಸರ್ಕಾರದಿಂದ ಬಡವರಿಗೆ ವಿತರಿಸುವ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಪ್ರಕರಣ ಅಶೋಕಪುರಂ ಠಾಣೆಯಲ್ಲಿ ದಾಖಲಾಗಿದೆ. ಈ ಪ್ರಕರಣದಲ್ಲಿ 157.5 ಕೆ.ಜಿ. ಅಕ್ಕಿ ಹಾಗೂ ಅದನ್ನು ಸಾಗಿಸುತ್ತಿದ್ದ ಆಟೋರಿಕ್ಷಾವನ್ನು ವಶಪಡಿಸಿಕೊಳ್ಳಲಾಗಿದ್ದು, ತಪಾಸಣೆ ವೇಳೆ ಚಾಲಕ ಪರಾರಿಯಾಗಿದ್ದಾನೆ.

ಖಿಲ್ಲೆ ಮೊಹಲ್ಲಾ ಆಹಾರ ನಿರೀಕ್ಷಕಿ ಜಿ.ರತ್ನಮ್ಮ ಅವರು ಕೆ.ಆರ್.ಮೊಹಲ್ಲಾ ಆಹಾರ ನಿರೀಕ್ಷಕರಾದ ಬಿ.ಎಸ್.ವೇಣು ಗೋಪಾಲ್ ಅವರೊಡಗೂಡಿ ಜೂ.28 ರಂದು ಸಂಜೆ ಗಸ್ತು ತಿರುಗುತ್ತಿದ್ದ ವೇಳೆ ಜಯನಗರ 2ನೇ ಮುಖ್ಯ ರಸ್ತೆಯಲ್ಲಿ ಆಟೋರಿಕ್ಷಾದಲ್ಲಿ (ಕೆಎ 12 3267) 3 ಮೂಟೆಗಳಲ್ಲಿ ಅಕ್ಕಿ ಸಾಗಿಸುತ್ತಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಆಟೋವನ್ನು ತಡೆದು ಪರಿಶೀಲಿಸಿದಾಗ ಅದರಲ್ಲಿ 157.5 ಕೆ.ಜಿ. ಪಡಿತರ ಅಕ್ಕಿ ಪತ್ತೆಯಾಗಿದೆ. ಈ ವೇಳೆ ಆಟೋ ಚಾಲಕ ಪರಾರಿಯಾಗಿದ್ದಾನೆ. ಈ ಸಂಬಂಧ ಅಶೋಕಪುರಂ ಠಾಣೆಯಲ್ಲಿ ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.


ಪಡಿತರ ಅಕ್ಕಿ ಖರೀದಿ ಪ್ರಕರಣ ದಾಖಲು: ಅಪ್ರಾಪ್ತ ಬಾಲಕರನ್ನು ಬಳಸಿಕೊಂಡು ಪಡಿತರ ಅಕ್ಕಿ ಖರೀದಿಸುತ್ತಿದ್ದ ಬಗ್ಗೆ ವೈರಲ್ ವೀಡಿಯೋ ದೃಶ್ಯಾವಳಿಗಳನ್ನು ಆಧರಿಸಿ ಮೈಸೂರಿನ ಹೆಬ್ಬಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಯು.ಆರ್.ರಮೇಶ್ ಪೊಲೀಸರಿಗೆ ದೂರು ಸಲ್ಲಿಸಿದ್ದು, ಸಾಮಾಜಿಕ ಜಾಲ ತಾಣದಲ್ಲಿ ವೈರಲ್ ಆಗಿದ್ದ ವೀಡಿಯೋ ದೃಶ್ಯಾವಳಿ ಆಧರಿಸಿ ತಾವು ದೂರು ಸಲ್ಲಿಸುತ್ತಿರುವುದಾಗಿ ಹೇಳಿದ್ದಾರೆ.

ಫೇಸ್‌ಬುಕ್‌ನಲ್ಲಿ ಆದರ್ಶ ಅರಸ್ ಎಂಬುವರು ಅಪ್‌ಲೋಡ್ ಮಾಡಿರುವ ವೀಡಿಯೋ ದೃಶ್ಯಾವಳಿಯಲ್ಲಿ ಕೆ.ಎಲ್. 05 ಜೆ 9165 ಸಂಖ್ಯೆಯ ಪ್ರಯಾಣಿಕರ ಆಟೋದಲ್ಲಿ ಮೂವರು ಅಪ್ರಾಪ್ತರು ಪಡಿತರ ಅಕ್ಕಿ ಸಾಗಿಸುತ್ತಿರುವುದು ಸೆರೆಯಾಗಿದೆ. ಆ ಬಾಲಕರನ್ನು ವೀಡಿಯೋ ಮಾಡಿದ ವ್ಯಕ್ತಿ ಪ್ರಶ್ನಿಸಿದಾಗ ಮೂವರಲ್ಲಿ ಇಬ್ಬರು ಅಪ್ರಾಪ್ತರಾಗಿದ್ದು, ಮತ್ತೋರ್ವ ತನಗೆ 19 ವರ್ಷ ವಯಸ್ಸಾಗಿದೆ ಎಂದು ಹೇಳಿದ್ದಾನೆ. ಈ ಬಾಲಕರು ಉದಯಗಿರಿಯ ಸಾಜಿತ್ ಎಂಬಾತನ ಸೂಚನೆ ಮೇರೆಗೆ ಮೈಸೂರಿನ ಹೆಬ್ಬಾಳ್ ಇನ್ನಿತರ ಕಡೆಗಳಲ್ಲಿ ಪಡಿತರ ಅಕ್ಕಿಯನ್ನು ಕೆ.ಜಿ.ಗೆ 13 ರೂ.ಗಳಂತೆ ಖರೀದಿಸಿ ಆತನಿಗೆ ನೀಡುತ್ತಿರುವುದಾಗಿಯೂ, ಇದಕ್ಕೆ ಪ್ರತಿಯಾಗಿ ಆತ ತಮಗೆ 200 ರೂ.ನಿಂದ 300 ರೂ. ನೀಡುತ್ತಿರುವುದಾಗಿಯೂ ಬಾಲಕರು ಹೇಳಿದ್ದಾರೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ.

ಈ ವೀಡಿಯೋದಲ್ಲಿ ಸೆರೆಯಾಗಿದ್ದ ಆಟೋರಿಕ್ಷಾ ಮಾಲೀಕರ ವಿವರವನ್ನು ಆನ್‌ಲೈನ್‌ನಲ್ಲಿ ಪರಿಶೀಲಿಸಲಾಗಿ, ಅದರ ಮಾಲೀಕ ಸತ್ಯನಗರದ ಸಯ್ಯದ್ ಅಕ್ರಮ್ ಎಂಬುದು ತಿಳಿದು ಬಂದಿದೆ ಎಂದು ದೂರಿನಲ್ಲಿ ತಿಳಿಸಿರುವ ರಮೇಶ್ ಅವರು ಪಡಿತರ ಚೀಟಿದಾರರಿಂದ ಕಡಿಮೆ ಬೆಲೆಗೆ ಅಕ್ಕಿ ಖರೀದಿಸಿ ಅದನ್ನು ಕಾಳ ಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದು, ಆಟೋ ಮಾಲೀಕ ಸಯ್ಯದ್ ಅಕ್ರಂ ಮತ್ತು ಅಪ್ರಾಪ್ತ ಬಾಲಕರಿಂದ ಪಡಿತರ ಅಕ್ಕಿ ಖರೀದಿಸುತ್ತಿದ್ದ ಸಾಜಿದ್ ಇನ್ನಿತರರ ವಿರುದ್ಧ ಕ್ರಮ ಕೈಗೊಳ್ಳುವಂತೆ ಅಗತ್ಯ ವಸ್ತುಗಳ ಕಾಯ್ದೆಯಡಿ ಸಲ್ಲಿಸಿರುವ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಇಂದು ದಿ.ಧ್ರುವನಾರಾಯಣ್ ಸ್ಮರಣಾರ್ಥ ವಿಶೇಷ ಕಾರ್ಯಕ್ರಮ

ಮೈಸೂರು, ಜೂ.30(ಸಿಎನ್)–ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದ ದಿವಂಗತ ಧ್ರುವನಾರಾಯಣ್ ಅವರ ಸ್ಮರಣಾರ್ಥ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಐಎನ್‌ಸಿಸಿಡಬ್ಲ್ಯೂಎಫ್ ಘಟಕದಿಂದ 'ಮಕ್ಕಳ ನಡಿಗೆ ಶಾಲೆಯ ಕಡೆಗೆ' ಎಂಬ ಕಾರ್ಯಕ್ರಮವನ್ನು ಶನಿವಾರ ಆಯೋಜಿಸಲಾಗಿದೆ.



ನಗರದ ರೈಲ್ವೆ ನಿಲ್ದಾಣ ಬಳಿಯ ಕಾಂಗ್ರೆಸ್ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶೇಷ ಆಹ್ವಾನಿತರಾಗಿ ಮಾಜಿ ಶಾಸಕ ಯತೀಂದ್ರ ಸಿದ್ದರಾಮಯ್ಯ, ಸಂಸದ ಡಿ.ಕೆ.ಸುರೇಶ್, ನಂಜನಗೂಡು ವಿಧಾನಸಭಾ ಶಾಸಕ ದರ್ಶನ್ ಧ್ರುವನಾರಾಯಣ್ ಆಗಮಿಸಲಿದ್ದಾರೆ. ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಗ್ರಾಮಾಂತರ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಚಿವ ಕೆ. ವೆಂಕಟೇಶ್, ಮಾಜಿ ಸಚಿವ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಶಾಸಕ ಅನಿಲ್ ಚಿಕ್ಕಮಾದು, ಶಾಸಕ ಹರೀಶ್ ಗೌಡ, ಶಾಸಕ ಡಿ.ರವಿಶಂಕರ್, ಮಾಜಿ ಶಾಸಕರಾದ ವಾಸು, ಮಂಜುನಾಥ್, ಸೋಮಶೇಖರ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರ್‌ನಾಥ್ ಹಾಗೂ ಕಾಂಗ್ರೆಸ್ ವಿವಿಧ ಮುಖಂಡರು ಭಾಗಿಯಾಗಲಿದ್ದು, ಕಾರ್ಯಕರ್ತರು, ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕೋರಲಾಗಿದೆ.

ನಿಧನ



ಎಂ.ಸಿ. ಸತ್ಯಪ್ರೇಮಕುಮಾರಿ

ಮೈಸೂರು, ಜೂ. 30– ಮೈಸೂರಿನ ಶ್ರೀರಾಂಪುರದ ನಿವಾಸಿ, ಹಿರಿಯ ವೈದ್ಯ ದಿವಂಗತ ಡಾ.ಎ.ತಿಬ್ಬಯ್ಯ ಅವರ ಪತ್ನಿ ಎಂ.ಸಿ.ಸತ್ಯಪ್ರೇಮಕುಮಾರಿ(84) ಅವರು ಗುರುವಾರ ಸಂಜೆ ನಿಧನರಾದರು.

ನಿವೃತ್ತ ಶಿಕ್ಷಕಿಯಾದ ಶ್ರೀಯುತರು ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೇವೆಯಿಂದ ನಿವೃತ್ತರಾದ ಮೈಸೂರು ಮೆಡಿಕಲ್ ಕಾಲೇಜು ಸಹಾಯಕ ಪ್ರಾಧ್ಯಾಪಕ ಡಾ.ಲಕ್ಷ್ಮೇಗೌಡರಿಗೆ ಅಭಿನಂದನೆ

ವೈದ್ಯ ವೃತ್ತಿ ಸೇವೆಗೆ ನಿವೃತ್ತಿಯೇ ಇಲ್ಲ: ಸಚಿವ ಚಲುವರಾಯಸ್ವಾಮಿ



ಮೈಸೂರು, ಜೂ.30(ಎಸ್‌ಬಿಡಿ)– ವೈದ್ಯರಿಗೆ ನಿವೃತ್ತಿ ಎನ್ನುವುದಿಲ್ಲ, ಜೀವನವಿಡೀ ಸಾರ್ವಜನಿಕರ ಸೇವೆ ಮಾಡುವ ಅವಕಾಶವಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಮೈಸೂರಿನ ವಿಜಯನಗರ ಎರಡನೇ ಹಂತದ ಕೇರಳ ಸಮಾಜ ಭವನದಲ್ಲಿ ಶುಕ್ರವಾರ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸಹ ಪ್ರಾಧ್ಯಾಪಕರಾಗಿ ಸೇವೆಯಿಂದ ನಿವೃತ್ತಿಯಾದ ಡಾ.ಲಕ್ಷ್ಮೇಗೌಡರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರು ಸರ್ಕಾರಿ ಸೇವೆಯಿಂದ ನಿವೃತ್ತಿಯಾಗಬಹುದಷ್ಟೇ. ಅವರ ವೃತ್ತಿ ಸೇವೆ ನಿರಂತರವಾಗಿರುತ್ತದೆ ಎಂದರು.

ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿರುವ ಎಲ್ಲರಿಗೂ ಸನ್ಮಾನ ದಕ್ಕುವುದಿಲ್ಲ. ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದವರನ್ನು ಹೀಗೆ ಗುರುತಿಸಿ ಅಭಿನಂದಿಸಲಾಗುತ್ತದೆ. ಮಂಡ್ಯ ಜಿಲ್ಲೆಯ ಚಿನಕುರುಳಿ ಗ್ರಾಮದ ಡಾ.ಲಕ್ಷ್ಮೇಗೌಡರು, ಒಳ್ಳೆಯ ಹೆಸರು ಸಂಪಾದಿಸಿದ್ದಾರೆ. ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಶಕ್ತಿಯನ್ನು ತಾಯಿ ಚಾಮುಂಡೇಶ್ವರಿ ಕರುಣಿಸಲಿ ಎಂದು ಆಶಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಮಾತನಾಡಿ, ಹಣ, ಐಶ್ವರ್ಯ ಯಾವುದೂ ಶಾಶ್ವತವಲ್ಲ. ಆರೋಗ್ಯವಾಗಿದ್ದರೆ ಮಾತ್ರ ಜೀವನದಲ್ಲಿ ನೆಮ್ಮದಿ ಇರುತ್ತದೆ. ಜೀವಕ್ಕೆ ಆಪತ್ತು ಬಂದಾಗ ಹಣದ ರಾಶಿ ಸುರಿದರೂ ಪ್ರಯೋಜನವಾಗುವುದಿಲ್ಲ. ಆ ಸಂದರ್ಭದಲ್ಲಿ ವೈದ್ಯರೇ ಜೀವ ಉಳಿಸುವ ದೇವರಾಗುತ್ತಾರೆ. ಮೈಸೂರಿನಲ್ಲಿ ಹಿಂದೆ ಅಪರೂಪದ ವೈದ್ಯಕೀಯ ಸೇವೆ ಮೂಲಕ ಡಾ.ಅಂಕೇಗೌಡರು ಪ್ರಸಿದ್ಧರಾಗಿದ್ದರು. ಅವರಂತೆ ಡಾ.ಲಕ್ಷ್ಮೇಗೌಡರೂ ಉತ್ತಮ ಸೇವೆ ಸಲ್ಲಿಸಿದ್ದಾರೆ. ಇವರ ಶ್ರೀಮತಿ ಡಾ.ಸುಮಂಗಲಾ ಅವರೂ ವೈದ್ಯರು. ಇಬ್ಬರು ಮಕ್ಕಳೂ ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದಾರೆ. ಈ ವೈದ್ಯ ಕುಟುಂಬದಿಂದ ಸಮಾಜಕ್ಕೆ ಮತ್ತಷ್ಟು ಉತ್ತಮ ಸೇವೆ ಸಿಗುವಂತಾಗಲಿ ಎಂದು ಆಶಯ ವ್ಯಕ್ತಪಡಿಸಿದರು. ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಂ.ಎ.ಶೇಖರ್ ಮಾತನಾಡಿ, ಡಾ.ಲಕ್ಷ್ಮೇಗೌಡರು 24/7 ಸೇವೆ ಸಲ್ಲಿಸುವ ಶ್ರಮಜೀವಿ. ಹಲವು ಹಂತಗಳಲ್ಲಿ ಸಮರ್ಥವಾಗಿ ಜವಾಬ್ದಾರಿ ನಿರ್ವಹಿಸುವುದರ ಜೊತೆಗೆ, ಪ್ರೀತಿ, ಅಭಿಮಾನ, ಸ್ನೇಹಪರತೆಯಿಂದ ಸೇವೆ ಸಲ್ಲಿಸಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದಿಸುತ್ತೇನೆ. ಇವರು ಇನ್ನೂ 40 ವರ್ಷ ಸೇವೆ ಸಲ್ಲಿಸಲಿ ಎಂದು ಆಶಿಸುತ್ತೇನೆ ಎಂದರು.

ಈ ವೇಳೆ ಡಾ.ಲಕ್ಷ್ಮೇಗೌಡರು ಹಾಗೂ ಡಾ.ಸುಮಂಗಲಾ ದಂಪತಿಯನ್ನು ಡಾ.ಲಕ್ಷ್ಮೇಗೌಡರ ಅಭಿಮಾನಿ ಬಳಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮಾಜಿ ಶಾಸಕ ವಾಸು, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ದಾಕ್ಷಾಯಿಣಿ, ಗೋಪಾಲಸ್ವಾಮಿ, ಮಂಜುನಾಥ್, ಕಿಲಾರ ಜಯರಾಮ್ ಮತ್ತಿತರರು ಉಪಸ್ಥಿತರಿದ್ದರು.

ಭೂರಿ ಭೋಜನದ ಸವಿ, ನಿರಾಸೆಗೊಂಡ ಪ್ರವಾಸಿಗರು, ಪ್ರಸಾದ ವಿತರಣೆಗೆ ಭಕ್ತರ ನಿರಾಸಕ್ತಿ



ಮೈಸೂರು, ಜೂ.30(ಬಿಎಲ್‌ಯು)– ಭಕ್ತರಿಗೆ ಭೂರಿ ಭೋಜನದ ಸವಿ, ಶಕ್ತಿ ದೇವತೆ ದರ್ಶನ ಭಾಗ್ಯವಿಲ್ಲದೆ ನಿರಾಸೆಗೊಂಡ ಪ್ರವಾಸಿಗರು, ಹಿರಿಯ ನಾಗರಿಕರಿಗೆ ಪ್ರವೇಶ ಸಲೀಸು, ಪ್ರಸಾದ ವಿತರಣೆಗೆ ನಿರುತ್ಸಾಹ. ಎರಡನೇ ಆಷಾಢ ಶುಕ್ರವಾರವಾದ ಇಂದು ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಕಂಡು ಬಂದ ಕೆಲ ವಿಶೇಷತೆಗಳಿವು.

ಭೂರಿ ಭೋಜನ: ಪ್ರತಿ ಆಷಾಢ ಶುಕ್ರವಾರದಂತೆ, ಚಾಮುಂಡಿಬೆಟ್ಟದಲ್ಲಿ ಭಕ್ತರಿಗೆ ದಾಸೋಹ ಆಯೋಜಿಸಲಾಗಿತ್ತು. ಕೊಯಮತ್ತೂರಿನ ದುರ್ಗಾ ಏಜೆನ್ಸಿಯವರು ಊಟದ ವ್ಯವಸ್ಥೆ ಮಾಡಿದ್ದರು. ಮಹಿಷಾಸುರ ಪ್ರತಿಮೆ ವೃತ್ತದ ಮುಂಭಾಗದ ಪಾರ್ಕಿಂಗ್ ಸ್ಥಳದಲ್ಲಿ ಈ ವ್ಯವಸ್ಥೆ ಮಾಡಲಾಗಿತ್ತು.

ಶುಕ್ರವಾರ ಬೆಳಗ್ಗೆ ಉಪ್ಪಿಟ್ಟು, ಕೇಸರಿಬಾತ್, ಪೊಂಗಲ್ ಹಾಗೂ ಬೊಂಡ ಬಡಿಸಲಾಯಿತು. ಬೆಳಿಗ್ಗೆ 10 ಗಂಟೆ ನಂತರ ಭೂರಿ ಭೋಜನದ ಸವಿಯನ್ನು ಉಣಬಡಿಸಲಾಯಿತು. ತರಕಾರಿ ಪಲಾವ್, ಚಿತ್ರಾನ್ನ, ಎರಡು ತರಹದ ಪಲ್ಯ, ಕೋಸಂಬರಿ, ಅನ್ನ, ಹುಳಿ, ರಸಂ, ಪಕೋಡ, ಮೊಸರನ್ನ, ಪಾಯಸದ ರುಚಿಯನ್ನು ಭಕ್ತರು ಸವಿದರು. ಈ ವೇಳೆ ಪ್ರತಿಯೊಬ್ಬರಿಗೂ ವಾಟರ್ ಬಾಟಲ್ ಕೂಡ ನೀಡಲಾಯಿತು.

ವಾಪಸಾದ ಪ್ರವಾಸಿಗರು: ಚಾಮುಂಡಿ ಬೆಟ್ಟಕ್ಕೆ ದೇಶ ವಿದೇಶಗಳಿಂದ ಪ್ರವಾಸಿಗರು ಬರುತ್ತಾರೆ. ಅದರಂತೆ ಇಂದು ಬಸ್ಸು, ಕಾರು ಸೇರಿದಂತೆ ಹಲವು ವಾಹನಗಳಲ್ಲಿ ಬೆಟ್ಟದ ಕಡೆ ಹೋಗುತ್ತಿದ್ದರು. ಆದರೆ ಖಾಸಗಿ ವಾಹನಗಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ಚಾಮುಂಡಿ ಬೆಟ್ಟದ ಪಾದದ ತಾವರೆಕಟ್ಟೆ ಹಾಗೂ ಜಾಕಿ ಕ್ವಾರ್ಟರ್ಸ್ ಬಳಿಯೇ ಖಾಸಗಿ ವಾಹನಗಳನ್ನು ಪೊಲೀಸರು ತಡೆದು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಾತ್ರ ಹೋಗುವಂತೆ ಹೇಳಿದರು. ಬೇರೆ ಪ್ರವಾಸಿ ತಾಣಗಳನ್ನು ನೋಡಬೇಕಾದ ಕಾರಣ ಸಮಯದ ಅಭಾವದಿಂದ ಪ್ರವಾಸಿಗರು ಬೆಟ್ಟಕ್ಕೆ ಹೋಗಲು ಸಾಧ್ಯವಾಗದೆ ನಿರಾಸೆಯಿಂದ ವಾಪಸ್ಸಾದರು.

ಇಂದು ಬೆಳಿಗ್ಗೆ 4 ಗಂಟೆಯಿಂದಲೇ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಬೆಟ್ಟಕ್ಕೆ ಹೋಗಲು ಅವಕಾಶ ಕಲ್ಪಿಸಲಾಗಿತ್ತು. ಗಣ್ಯರನ್ನು ಹೊರತುಪಡಿಸಿ ಖಾಸಗಿ ವಾಹನಗಳಿಗೆ ಪ್ರವೇಶವಿರಲಿಲ್ಲ.

ಹಿರಿಯ ನಾಗರಿಕರಿಗೆ ಸುಗಮ ದರ್ಶನ: ಹಿರಿಯ ನಾಗರಿಕರು ಗಂಟೆ ಗಟ್ಟಲೆ ಸರದಿ ಸಾಲಿನಲ್ಲಿ ನಿಲ್ಲುವ ಗೋಜು ಇರಲಿಲ್ಲ. 50 ರೂಪಾಯಿ ಟಿಕೆಟ್ ಕೌಂಟರ್‌ನಲ್ಲಿ ಹೋಗಲು ಅವಕಾಶ ಕಲ್ಪಿಸಲಾಗಿತ್ತು. ಅಲ್ಲದೆ ಮಹಿಷಾಸುರ ಪ್ರತಿಮೆಯಿಂದ ದೇವಸ್ಥಾನದ ಬಾಗಿಲ ತನಕ ಹಿರಿಯ ನಾಗರಿಕರಿಗೆ ಬ್ಯಾಟರಿ ವಾಹನದ ವ್ಯವಸ್ಥೆ ಕೂಡ ಮಾಡಲಾಗಿತ್ತು.

ಪ್ರಸಾದ ವಿತರಣೆಗೆ ನಿರುತ್ಸಾಹ: ಪ್ರತಿ ಆಷಾಢ ಶುಕ್ರವಾರದಂದು ಬಹಳಷ್ಟು ಭಕ್ತರು ಚಾಮುಂಡಿಬೆಟ್ಟದಲ್ಲಿ ಪ್ರಸಾದ ವಿತರಣೆ ಮಾಡುತ್ತಿದ್ದರು. ಆದರೆ ಪ್ರಸಾದವನ್ನು ಫುಡ್ ಇನ್ಸ್‌ಪೆಕ್ಟರ್‌ಗೆ ನೀಡಿ ಅವರಿಂದ ಸರ್ಟಿಫಿಕೇಟ್ ಪಡೆಯಬೇಕೆಂಬ ಕಡ್ಡಾಯ ನಿಯಮದ ಕಾರಣ, ಭಕ್ತರು ಪ್ರಸಾದ ವಿತರಣೆಗೆ ಉತ್ಸುಕತೆ ತೋರಲಿಲ್ಲ.

ತಪಾಸಣಾ ಶಿಬಿರ

ಮೈಸೂರು, ಜೂ. 30– ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಶ್ರೀ ಬೀರೇಶ್ವರ ಸ್ವಾಮಿ ಟ್ರಸ್ಟ್, ರೋಟರಿ ಪಂಚಶೀಲ, ಮೈಸೂರು ರೇಸ್ ಕ್ಲಬ್ ಚಾರಿಟಬಲ್ ಕಣ್ಣಿನ ಆಸ್ಪತ್ರೆ ಮತ್ತು ಮೈಸೂರು ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ ಸಹಯೋಗದೊಂದಿಗೆ ಟಿ.ಕೆ. ಲೇಔಟ್‌ನ ಶ್ರೀ ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಜು. 6 ರಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9972962665, ದೂ. 0821–2472532 ಸಂಪರ್ಕಿಸಬಹುದು.

ವನಮಹೋತ್ಸವಕ್ಕೆ ಇಂದು ಚಾಲನೆ

ಮೈಸೂರು,ಜೂ.30– ಜುಲೈ 1 ರ ಬೆಳಗ್ಗೆ 9.30ಕ್ಕೆ ಜಿಲ್ಲಾಧಿಕಾರಿಗಳ ಹೊಸ ಕಚೇರಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ. ಮಹದೇವಪ್ಪ ಗಿಡ ನೆಡುವ ಮೂಲಕ ವನಮಹೋತ್ಸವ ಸಪ್ತಾಹಕ್ಕೆ ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳು ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.7.2023 ಶನಿವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ: ಅನೂರಾಧ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9ಕ್ಕೆ ಶತಕಲಶಾಭಿಷೇಕ, ಸ್ಥಳ: ಶ್ರೀಶಂಕರ ಪ್ರಾರ್ಥನಾ ಮಂದಿರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆನ್ನು ಮೂಳೆಯ ಅಸ್ವಸ್ಥತೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ.

■ **ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ :** ಆರ್. ಧ್ರುವನಾರಾಯಣ್ ಅವರ ನೆನಪಿನೋತ್ಸವ ಕಾರ್ಯಕ್ರಮದೊಂದಿಗೆ ಮಕ್ಕಳ ನಡಿಗೆ ಶಾಲೆಯ ಕಡೆಗೆ ಕಾರ್ಯಕ್ರಮ, ಅಧ್ಯಕ್ಷತೆ ; ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯಕುಮಾರ್, ವಿಶೇಷ ಆಹ್ವಾನಿತರು : ಸಂಸದ ಡಿ.ಕೆ. ಸುರೇಶ್, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ, ದರ್ಶನ್ ಧ್ರುವನಾರಾಯಣ್, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಸಚಿವ ಕೆ. ವೆಂಕಟೇಶ್, ಶಾಸಕರಾದ ತನ್ವೀರ್ ಸೇಠ್, ಡಾ. ಡಿ. ತಿಮ್ಮಯ್ಯ, ಅನಿಲ್ ಚಿಕ್ಕಮಾದು, ಹರೀಶ್‌ಗೌಡ, ರವಿಶಂಕರ್, ಮಾಜಿ ಶಾಸಕರಾದ ವಾಸು, ಹೆಚ್.ಪಿ. ಮಂಜುನಾಥ್, ಎಂ.ಕೆ. ಸೋಮಶೇಖರ್, ಮಹಿಳಾ ಕಾಂಗ್ರೆಸ್ ರಾಜ್ಯಾಧ್ಯಕ್ಷೆ ಶ್ರೀಮತಿ ಪುಷ್ಪ ಅಮರನಾಥ್, ಸ್ಥಳ:ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣ, ಬೆಳಗ್ಗೆ 10ಕ್ಕೆ.

■ **ಸದ್ವಿದ್ಯಾ ಸಂಯುಕ್ತ ಪದವಿಪೂರ್ವ ಕಾಲೇಜು :** ಪ್ರತಿಭಾ ಪುರಸ್ಕಾರ, ಮುಖ್ಯ ಅಭ್ಯಾಗತರು : ಎಟಿಎಂಇ ಕಾಲೇಜು ಪ್ರಾಂಶುಪಾಲ ಡಾ. ಅನಂತಕೇಶವಮೂರ್ತಿ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು ಅಧ್ಯಕ್ಷ ಪ್ರೊ. ವಿ.ಕೆ.ಗೋಪಾಲಾಚಾರ್, ಉಪಸ್ಥಿತರು : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಸಿ.ಆರ್. ನಾಗರಾಜ್, ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಸಹ ಕಾರ್ಯದರ್ಶಿ ಪ್ರೊ. ಕೆ.ಎಸ್. ಹಿರಿಯಣ್ಣ, ಸ್ಥಳ: ಟಿ.ಪಿ. ಕೈಲಾಸಂ ರಂಗ ಮಂಟಪ, ಸದ್ವಿದ್ಯಾ ಶಿಕ್ಷಣ ಸಂಸ್ಥೆ, ಬೆಳಗ್ಗೆ 10.30ಕ್ಕೆ.

■ **ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶನಾಲಯ, ಬೆಂಗಳೂರು :** ರಂಗಭೂಮಿ ಮತ್ತು ಜಾನಪದ ಕಲಾ ಪ್ರಕಾರಗಳ ತರಬೇತಿ ಶಿಬಿರ, ಸಾನ್ನಿಧ್ಯ : ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಹಿರಿಯ ರಂಗಕರ್ಮಿ ಹೆಚ್. ಜನಾರ್ಧನ್ (ಜನ್ನಿ), ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಜವರಪ್ಪ, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಸ್ನೇಹ ಬಳಗ :** ಅಭಿನಂದನಾ ಸಮಾರಂಭ, ಅಧ್ಯಕ್ಷತೆ : ಕರ್ನಾಟಕ ಕಾವಲು ಪಡೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಂ. ಮೋಹನ್‌ಕುಮಾರ್‌ಗೌಡ, ಅಭಿನಂದಿಸುವವರು : ವಿಚಾರವಾದಿ ಡಾ. ಕೆ. ಕಾಳಚನ್ನೇಗೌಡ, ಅಭಿನಂದಿತರು : ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಸಾಹಿತಿ ಟಿ. ಸತೀಶ್ ಜವರೇಗೌಡ, ಉಪಸ್ಥಿತರು : ಪಿ. ನಾಗೇಂದ್ರ, ಜಿ. ನವೀನ್, ಬಳಗದ ಅಧ್ಯಕ್ಷ ಪಿ. ಬಂದಿಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಮಯೂರಿ :** ಅಧ್ಯಕ್ಷೆ ಲಯನ್ ಎನ್.ವಿ. ವಾಣಿಶ್ರೀ ಮತ್ತು ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ವಿಶೇಷ ಆಹ್ವಾನಿತರು : ರೀಜನ್ ಛೇರ್ಮನ್ ಲಯನ್ ಬಿ. ಬಸವೇಗೌಡ, ಜೋನ್ ಛೇರ್ಮನ್ ಲಯನ್ ಡಾ. ಹೆಚ್.ವಿ. ಉದಯಕುಮಾರ್, ಅಧ್ಯಕ್ಷತೆ : ಲಯನ್ ವತ್ಸಲ ನಂಜುಂಡಸ್ವಾಮಿ, ಸ್ಥಳ: ರಾಹುಲ್ ಕನ್ವೆನ್ಷನ್ ಹಾಲ್, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ

■ **ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್:** ರಾಷ್ಟ್ರೀಯ ವೈದ್ಯರ ದಿನಾಚರಣೆ ಹಾಗೂ ವೈದ್ಯರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಡಾ.ಬಿ.ಸಿ.ರಾಯ್ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಶಾಸಕ ಟಿ.ಎಸ್.ಶ್ರೀವತ್ಸ, ಭಾನವಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎನ್.ವಿಜಯಚೆಲುವರಾಜ್ ಅವರಿಂದ ವೈದ್ಯರ ದಿನಾಚರಣೆ ಮಹತ್ವ ಕುರಿತು ಭಾಷಣ, ಮುಖ್ಯ ಅತಿಥಿಗಳು: ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ – ಪ್ರಾಯೋಜಿತ ಕಾರ್ಯ ಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ. ಭಾಗವಹಿಸುವವರು ಡಾ. ರಂಗನಾಥ್ ಮಾಸ್ತರ್, ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 11.00 "ಸ್ವರಾಜ್"–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ. 6.50 ಕೃಷಿರಂಗ–ತೋರಣ ಹೂರಣ–ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, 8.00 ಯುವವಾಣಿ, 9.30 ಗಿಡ ನೆಡುವ ಮೊದಲು–ಉಪ ಅರಣ್ಯ ಸಂರಕ್ಷಣಾಧಿಕಾರಿ ಬಸವರಾಜ್ ಅವರೊಡನೆ ಸಂದರ್ಶನ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ –ಪಂಡಿತ್ ನರೇಶ್ ಮಲ್ಹೋತ್ರ–ಗಾಯನ

■ **ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ –2015:** ಏಳನೇ ಆವೃತ್ತಿಯ ಮೈಸೂರು ಲಿಟರೇಚರ್ ಫೆಸ್ಟಿವಲ್, ಉದ್ಘಾಟನೆ: ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಗೌರವ ಅತಿಥಿಗಳು: ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಕೌನ್ಸಿಲ್ ಅಧ್ಯಕ್ಷ ಡಾ. ಬಿಬೇಕ್ ದೆಬ್ರಾಯ್, ಕನ್ನಡದ ಖ್ಯಾತ ಕವಿ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ ಕಂಬಾರ, ಉಪಸ್ಥಿತರು: ಎಂಜಿಬಿ ಗ್ರೂಪ್ ಅಧ್ಯಕ್ಷ ಡಾ. ಜಗನ್ನಾಥ್ ಶೆಣೈ, 'ದಿ ಬುಕ್ ಲೀಫ್' ನ್ಯೂಸ್‌ಲೆಟರ್ ಬಿಡುಗಡೆ: ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸಿಇಓ ಸುಧನ್ವ ಧನಂಜಯ, ದಿ ಬುಕ್ ಲೀಫ್ ಸ್ವೀಕಾರ: ರಘುಲಾಲ್ ಅಂಡ್ ಕಂಪನಿ ಮಾಲೀಕ ಎನ್.ರಾಘವನ್, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಮಧ್ಯಾಹ್ನ 2ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಬೇ.ನಾ. ವಿಜಯೇಂದ್ರಾಚಾರ್ ಅವರಿಂದ ಮಹಾಭಾರತದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಪ್ರವಚನಕಾರರಾದ ಶ್ರೀಮತಿ ಸ್ವಪ್ನ ಲಕ್ಷ್ಮೀಶ್ ಬಾಬು ಅವರಿಂದ ವಿಷಯ : ಗಾಥ : 701 ರಿಂದ 725 ಕುರಿತು ಉಪನ್ಯಾಸ, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45 ರಿಂದ.

ಯಶೋಧರಪುರದಲ್ಲಿಂದು, ಹುಣಸೂರು ತಾಲೂಕು

■ **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆ :** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪದಪ ವ್ಯಕ್ತಿ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ಉದ್ಘಾಟನೆ : ಕರ್ನಾಟಕ ಉಚ್ಚ ನ್ಯಾಯಾಲಯ ನ್ಯಾಯಮೂರ್ತಿ ಶ್ರೀಮತಿ ಕೆ.ಎಸ್. ಮುದಗಲ್, ಯಶೋಧರಮ್ಮ ಭಾವಚಿತ್ರ ಅನಾವರಣ : ಪ್ರಧಾನ ಜಿಲ್ಲಾ ನ್ಯಾಯಾಧೀಶ ಬಿ.ಎಸ್. ಸಂಗ್ರೇಶಿ, ಯಶೋಧರಪುರ ಮಹಾದ್ವಾರ ಶಂಕುಸ್ಥಾಪನೆ : ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ವಿಶೇಷ ಆಹ್ವಾನಿತರು : ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಜಿ. ದಿನೇಶ್, ತಾಲೂಕು ಕಾನೂನು ಸೇವೆಗಳ ಸಮಿತಿ ಅಧ್ಯಕ್ಷರಾದ ಶ್ರೀಮತಿ ಶಿರಿನ್ ಜಾವಿದ್ ಅನ್ಸಾರಿ, ಅಧ್ಯಕ್ಷತೆ : ಮಾಜಿ ಶಾಸಕ ವಾಸು, ಆಶಯ ನುಡಿ : ಹುಬ್ಬಳ್ಳಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ ಕುಲಪತಿ ಡಾ. ಸಿ. ಬಸವರಾಜು, ಮುಖ್ಯ ಅತಿಥಿಗಳು : ಗಾಂಧಿ ಭವನ ಅಧ್ಯಕ್ಷ ನಾಡೋಜ ಡಾ. ವೂಡೇ ಪಿ. ಕೃಷ್ಣ, ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಮತಿ ಸೀಮಾ, ಮಾಜಿ ಮೇಯರ್ ಪಿ. ವಿಶ್ವನಾಥ್, ವಿಶ್ರಾಂತ ಕಾರ್ಯದರ್ಶಿ ಎ.ಸಿ. ಲಕ್ಷ್ಮಣ್, ಶ್ರೀಮತಿ ಸರೋಜಮ್ಮ ತುಳಸಿದಾಸ್, ಪ್ರತಾಪ ಲಿಂಗಯ್ಯ, ಸ್ಥಳ: ಯಶೋಧರಪುರ, ಹುಣಸೂರು ತಾ., ಸಂಜೆ 4ಕ್ಕೆ.


ತಿ. ನರಸೀಪುರದಲ್ಲಿಂದು

■ **ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತಾಲೂಕು ಶರಣ ಸಾಹಿತ್ಯ ಪರಿಷತ್, ತಿ. ನರಸೀಪುರ, ಗ್ರಾಮ ವಿದ್ಯೋದಯ ಸಂಘ :** ದತ್ತಿ ಉಪನ್ಯಾಸ ಸಮಾರಂಭ, ಸಾನ್ನಿಧ್ಯ : ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ವಿಶ್ರಾಂತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ, ಪ್ರಾಸ್ತಾವಿಕ ನುಡಿ : ಗ್ರಾಮ ವಿದ್ಯೋದಯ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಪಿ. ಮಹಾದೇವಸ್ವಾಮಿ, ಅಧ್ಯಕ್ಷತೆ : ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಹೆಳವರಹುಂಡಿ ಸಿದ್ದಪ್ಪ, ಆಶಯ ನುಡಿ : ಜಿಲ್ಲಾ ಕಸಾಪ ಮಜಿ ಅಧ್ಯಕ್ಷ ಎಂ. ಚಂದ್ರಶೇಖರ್, ಉಪಸ್ಥಿತರು : ತಾಲೂಕು ಶಸಾಪ ಅಧ್ಯಕ್ಷ ತೋಂಟೇಶ್, ಸ್ಥಳ: ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜು ಸಭಾಂಗಣ, ತಿ. ನರಸೀಪುರ, ಬೆಳಗ್ಗೆ 11ಕ್ಕೆ.

ಎಂಜಿ ರಸ್ತೆಯಲ್ಲಿ ಸಂಚಾರ ಸಂಕಷ್ಟ

ವಾಹನ ಸವಾರರಿಗೆ, ಆ್ಯಂಬುಲೆನ್ಸ್‌ಗಳಿಗೆ ಶಾಪವಾಗಿರುವ ತರಕಾರಿ ಮಾರುಕಟ್ಟೆ ಭಾಗ

ಆಡಳಿತ ವರ್ಗದ ಬಳಿ ಈ ಸಮಸ್ಯೆಗೆ ಪರಿಹಾರವೇ ಇಲ್ಲವೆ







ಮೈಸೂರು, ಜೂ.30–ನಗರದ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಿಂದ ನಂಜನಗೂಡು ರಸ್ತೆ ಕೆಳಸೇತುವೆಯವರೆಗೆ ಎಂ.ಜಿ. ರಸ್ತೆಯಲ್ಲಿ ಸಂಚರಿಸಲು ವಾಹನ ಸವಾರರು ತೀವ್ರ ಪರದಾಡುವಂತಾಗಿದೆ. ಕಾರಣ, ಇಲ್ಲಿರುವ ಮಾರುಕಟ್ಟೆಗೆ ವಿವಿಧೆಡೆಯಿಂದ ತರಕಾರಿ, ಹಣ್ಣು, ಸೊಪ್ಪು ತರುವ ಸರಕು ಸಾಗಣೆ ವಾಹನಗಳನ್ನು ಈ ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ, ಎಲ್ಲೆಂದರಲ್ಲಿ ನಿಲ್ಲಿಸಲಾಗುತ್ತಿದೆ.

ಪ್ರತಿದಿನ ಬೆಳಗ್ಗೆ 6ರಿಂದ 11 ಗಂಟೆಯವರೆಗೆ ಕಚೇರಿಗೆ ಹೋಗುವವರು, ಶಾಲಾ ಮಕ್ಕಳನ್ನು ಕರೆದೊಯ್ಯುವ ಆಟೋಗಳು ಹಾಗೂ ನಾನಾ ಕಾರಣಗಳಿಂದ ತುರ್ತು ತೆರಳುವವರಿಗೆ, ಇಲ್ಲಿ ಸರಕು ಸಾಗಣೆ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುವುದು ಮತ್ತು ತರಕಾರಿ, ಹಣ್ಣು ಖರೀದಿಗೆ ಬರುವವರು ಸಹ ಇದೇ ರಸ್ತೆಯಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುವುದರಿಂದ ಭಾರೀ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿದ್ದು, ತಮ್ಮ ಉದ್ದೇಶಿತ ಸ್ಥಳಗಳಿಗೆ ನಿಗದಿತ ಸಮಯಕ್ಕೆ ತಲುಪಲು ಸಾಕಷ್ಟು ಪ್ರಯಾಸ ಪಡುವಂತಾಗಿದೆ.

ಮತ್ತೆ ಸಂಜೆ 6ರಿಂದ ಮಧ್ಯರಾತ್ರಿ 1 ಗಂಟೆಯವರೆಗೂ ಇಲ್ಲಿ, ಇದೇ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು, ಪ್ರವಾಸಿಗರ ವಾಹನಗಳು, ಬಸ್‌ಗಳು ಸೇರಿದಂತೆ ಅಧಿಕ ಸಂಖ್ಯೆಯಲ್ಲಿ ವಾಹನಗಳನ್ನು ಈ ರಸ್ತೆಯಲ್ಲಿ ನಿಲ್ಲಿಸಲಾಗುತ್ತಿದೆ. ತರಕಾರಿ ಮಾರುಕಟ್ಟೆ ಸಮೀಪದಲ್ಲೇ ಇರುವ ಜೆಎಸ್‌ಎಸ್ ಆಸ್ಪತ್ರೆಯ ಆಂಬುಲೆನ್ಸ್‌ಗಳು ಇಲ್ಲಿ ಗಂಟೆಗಟ್ಟಲೆ ಟ್ರಾಫಿಕ್‌ನಲ್ಲಿ ಸಿಲುಕಿಕೊಂಡಿರುವುದು ಉಂಟು.

"ರ್‍ಯಾಡಿಸನ್ ಬ್ಲೂ ಹೋಟೆಲ್‌ನಿಂದ ಜೆಎಸ್‌ಎಸ್ ಆಸ್ಪತ್ರೆ ಕೇವಲ ಒಂದು ಕಿಲೋ ಮೀಟರ್ ದೂರದಲ್ಲಿದೆ, ಆದರೆ ವಾಹನಗಳು, ಮಾರು ಕಟ್ಟೆ ಭಾಗದಲ್ಲಿ ಗೂಡ್ಸ್ ಆಟೋಗಳು, ತರಕಾರಿ ವ್ಯಾಪಾರಿಗಳು, ಜಾನುವಾರುಗಳು ಮತ್ತು ಚಹಾ ಮಾರಾಟಗಾರರನ್ನು ಹರಸಾಹಸಪಟ್ಟು ಹಾದುಹೋಗಬೇಕಾಗುತ್ತದೆ. ಇದಕ್ಕೆ ಸುಮಾರು 20 ರಿಂದ 30 ನಿಮಿಷ ತೆಗೆದುಕೊಳ್ಳುತ್ತದೆ" ಎಂದು ಪ್ರತಿದಿನ ಇದೇ ಮಾರ್ಗದಲ್ಲಿ ಚಲಿಸುವ ವಾಹನ ಚಾಲಕರೊಬ್ಬರು ತಿಳಿಸಿದ್ದಾರೆ.

"ಕೆಲವೊಮ್ಮೆ ತರಕಾರಿಗಳನ್ನು ಇಳಿಸಲು ಇಲ್ಲಿ ನಿಲ್ಲುವಂತಹ ವಾಹನಗಳು, ರಸ್ತೆಯ ಬಹುಭಾಗ ಆವರಿಸಿಕೊಂಡಿರುತ್ತವೆ. ಇದರಿಂದ ಅನೇಕ ವೇಳೆ ನಾವು ನೆಲಸಮವಾಗಿರುವ ಡಿವೈಡರ್ ಹಾದು ಪಕ್ಕದ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ತೆರಳಬೇಕಾಗುತ್ತದೆ" ಎಂದು ಅವರು ಬೇಸರದಿಂದೇಳಿದರು.

ಅತೀ ಮುಖ್ಯವಾಗಿ, ಈ ರಸ್ತೆಯು ಜೆಎಸ್‌ಎಸ್ ಆಸ್ಪತ್ರೆಗೆ ಸಂಪರ್ಕ ಕಲ್ಪಿಸುತ್ತದೆ ಮತ್ತು ಅನೇಕ ಬಾರಿ ಆಂಬುಲೆನ್ಸ್‌ಗಳು ಈ ಸಂಚಾರ ಅಸ್ತವ್ಯಸ್ತಗೊಂಡ ರಸ್ತೆ ಭಾಗದಲ್ಲಿ ಸಿಲುಕಿಕೊಂಡಿರುತ್ತವೆ. ಇದರಿಂದಾಗಿ ರೋಗಿಯ ಅಮೂಲ್ಯವಾದ ಜೀವ ಉಳಿಸುವ ಸಮಯವೇ ಕಳೆದು ಹೋಗುತ್ತಿದೆ.

ನಾವಿಲ್ಲಿ ದೂರದ ಊರುಗಳಿಂದ ತರಕಾರಿ, ಹಣ್ಣು, ಸೊಪ್ಪುಗಳನ್ನು ತರುವ ರೈತರನ್ನು ದೂಷಿಸುವಂತಿಲ್ಲ. ಏಕೆಂದರೆ ಅವರು ತಮ್ಮ ಉತ್ಪನ್ನಗಳನ್ನು ಇಳಿಸಲು ಹೆಚ್ಚು ಸಮಯ ಬೇಕಾಗುತ್ತದೆ. ಮತ್ತು ಅವರಿಗೆ ಇಳಿಸಲು ಸೂಕ್ತ ಹಾಗೂ ಅದಕ್ಕೆ ಮೀಸಲಾದ ಸ್ಥಳಾವಕಾಶ ಕೂಡ ಇಲ್ಲ. ಅವರು ತಮ್ಮ ಉತ್ಪನ್ನಗಳನ್ನು ಇಳಿಸುವವರೆಗೂ ಸರಕು ಸಾಗಣೆ ವಾಹನಗಳು ರಸ್ತೆಯಲ್ಲಿಯೇ ನಿಂತಿರುತ್ತವೆ.

ಕೆಲವು ವರ್ಷಗಳ ಹಿಂದೆ ತರಕಾರಿ ಮಾರುಕಟ್ಟೆಯನ್ನು ಈ ಸ್ಥಳಕ್ಕೆ ಸ್ಥಳಾಂತರಿಸಿದಾಗಿನಿಂದ ಈ ಸಮಸ್ಯೆ ಉದ್ಭವಿಸಿದೆ.

ಈ ರಸ್ತೆಯಲ್ಲಿ ಸಂಚಾರ ಅಸ್ತವ್ಯಸ್ತವಾಗಿರುವ ವಿಚಾರ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಗೊತ್ತಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಮತ್ತು ಪೊಲೀಸ್ ಇಲಾಖೆ ಈ ಸಮಸ್ಯೆಗೆ ಇಷ್ಟರಲ್ಲೆ ಪರಿಹಾರ ಕಂಡುಕೊಳ್ಳಬೇಕಿತ್ತು. ಆದರೆ ಸ್ಥಳೀಯ ಆಡಳಿತ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಇದರಿಂದ ಜನಸಾಮಾನ್ಯರು ಸಂಕಷ್ಟಪಡುವಂತಾಗಿದೆ.

ಈ ಜಾಗವನ್ನು ಮೈಸೂರು ಅರಸರು 1950ರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ದಾನ ಮಾಡಿದ್ದರು. ಆದರೆ ಮಾರುಕಟ್ಟೆ ಭೂಮಿಯನ್ನು ಕೆಲವು ವರ್ಷಗಳ ಹಿಂದೆ ಆದಾಯ ತೆರಿಗೆ ಇಲಾಖೆ ಹರಾಜು ಮಾಡಿತು ಮತ್ತು ಅದನ್ನು ಖಾಸಗಿ ವ್ಯಕ್ತಿಯೊಬ್ಬರು ಖರೀದಿಸಿದ್ದರು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಉಸ್ತುವಾರಿಯೂ ಆಗಿದ್ದ ಜಿಲ್ಲಾಧಿಕಾರಿ ಪಿ.ಮಣಿವಣ್ಣನ್ ಅವರು ತರಕಾರಿ ಮಾರಾಟ ಗಾರರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ಇಲ್ಲಿ ಜಿಂಕ್ ಶೀಟ್‌ಗಳ ಶೆಲ್ಟರ್ ನಿರ್ಮಾಣಕ್ಕೆ ಮುಂದಾದಾಗ ಈ ಜಾಗ ಖರೀದಿಸಿದ ವ್ಯಕ್ತಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ಬಹಳ ಹಿಂದೆ ಮುಡಾ ಕೂಡ ಇಲ್ಲಿ ಸೂರು ನಿರ್ಮಾಣಕ್ಕೆ 25 ಲಕ್ಷ ರೂ. ಅನುದಾನ ಒದಗಿಸಿತ್ತು. ಅದರಲ್ಲಿ 20 ಲಕ್ಷ ರೂ. ಬಳಕೆಯಾಗಿದೆ, ಆದರೆ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ಟ್ರೆಂಚ್ ಸೇರಿದಂತೆ ಹಲವು ಕಾಮಗಾರಿಗಳು ಬಾಕಿ ಉಳಿದಿವೆ. ಆದಾಗ್ಯೂ, ಆಸ್ತಿಯ ಸ್ವರೂಪ, ಭೂಮಿಯ ಹಕ್ಕಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ನ್ಯಾಯಾ ಲಯ ಆದೇಶ ನೀಡಿದ ಹಿನ್ನೆಲೆಯಲ್ಲಿ ನಿರ್ಮಾಣ ಕಾಮಗಾರಿಗಳನ್ನು ಸ್ಥಗಿತ ಗೊಳಿಸಲಾಯಿತು. ತರಕಾರಿ ಖರೀದಿಸಲು ಗ್ರಾಹಕರು ಮಾರುಕಟ್ಟೆ ಒಳಗೆ ಬರುವುದಿಲ್ಲ ಎಂಬ ಕಾರಣಕ್ಕೆ ತರಕಾರಿ ವ್ಯಾಪಾರಿಗಳು ಹಿಂದೆ ಸಾಕಷ್ಟು ಜಾಗವಿದ್ದರೂ ಹೋಗಲು ನಿರಾಕರಿಸಿದ್ದು, ರಸ್ತೆಬದಿಯಲ್ಲೇ ವ್ಯಾಪಾರ ವಹಿವಾಟು ಮಾಡಲು ಪ್ರಾರಂಭಿಸಿದರು. ಇದು ಈಗ ತೀವ್ರ ಟ್ರಾಫಿಕ್ ಸಮಸ್ಯೆಗೆ ಕಾರಣವಾಗಿದೆ.

ತರಕಾರಿ ಮಾರಾಟಗಾರರು ತಮ್ಮ ವ್ಯಾಪಾರವನ್ನು ರಸ್ತೆಯಿಂದ ನಿಗದಿತ ಸ್ಥಳಕ್ಕೆ ಸ್ಥಳಾಂತರಿಸಲು ಪಾಲಿಕೆಯು ಅವರ ಮನವೊಲಿಸಲಿದೆಯೇ ಇಲ್ಲ ವಾಹನ ಸಂಚಾರಕ್ಕೆ ಅಡ್ಡಿಯಾಗದಂತೆ ಮತ್ತು ಜನರಿಗೆ ತೊಂದರೆಯಾಗದಂತೆ ರೈತರು ತಮ್ಮ ಉತ್ಪನ್ನಗಳನ್ನು ವಾಹನಗಳಿಂದ ಇಳಿಸಲು ಪರ್ಯಾಯ ಸ್ಥಳವನ್ನು ಒದಗಿಸಬಹುದೇ ಎಂಬುದನ್ನು ಕಾದು ನೋಡಬೇಕು. ಸದ್ಯಕ್ಕೆ ಸಂಚಾರಿ ಪೊಲೀಸರನ್ನು ಹೆಚ್ಚಿನ ಸಂಖ್ಯೆಯಲ್ಲಿ ಈ ಜಾಗದಲ್ಲಿ ನಿಯೋಜಿಸಿ ಬೆಳಗ್ಗೆ 6 ರಿಂದ 11 ಮತ್ತು ಸಂಜೆ 6 ರಿಂದ 1 ರವರೆಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವ ಬಗ್ಗೆ ನಿಗಾ ವಹಿಸಬೇಕಿದೆ.



ಸಮಸ್ಯೆ ಇತ್ಯರ್ಥಕ್ಕೆ ಸದ್ಯಕ್ಕೆ ಸರ್ಕಾರ ಏನು ಮಾಡಬಹುದು?

ಸಾರ್ವಜನಿಕ ಉದ್ದೇಶಕ್ಕಾಗಿ ಖಾಸಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶ ಇದೆ. ಈಗ ನ್ಯಾಯಾಲಯದಲ್ಲಿರುವ ಈ ಸಮಸ್ಯೆಯನ್ನು ಪರಿಹರಿಸಲು ಉತ್ತಮ ಮಾರ್ಗವೆಂದರೆ ರಾಜೀ ಮಾಡಿಕೊಳ್ಳುವ ಮೂಲಕ ಇಲ್ಲವೇ ಸಾರ್ವಜನಿಕ ಉದ್ದೇಶಕ್ಕಾಗಿ ತುರ್ತು ವಿಚಾರಣೆ ಕೈಗೆತ್ತಿಕೊಳ್ಳುವಂತೆ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬಹುದು. ಒಂದು ವೇಳೆ ಖಾಸಗಿ ವ್ಯಕ್ತಿ (ಐಟಿ ಇಲಾಖೆ ಹರಾಜಿನಲ್ಲಿ ಈ ಭೂಮಿಯನ್ನು ಖರೀದಿಸಿದವರು) ಪ್ರಕರಣದಲ್ಲಿ ಗೆದ್ದರೆ, ಕಾನೂನು ಪ್ರಕಾರ ಪರಿಹಾರವನ್ನು ಪಾವತಿಸಿ, ಸರ್ಕಾರವು ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಬೇಕಿದೆ.

ಆಸಿಡ್ ದಾಳಿಗೀಡಾಗಿದ್ದ ಯುವತಿಗೆ ಮುಖ್ಯಮಂತ್ರಿ ಸಚಿವಾಲಯದಲ್ಲಿ ಉದ್ಯೋಗ

ಬೆಂಗಳೂರು, ಜೂ 30(ಕೆಎಂಶಿ)–



ಆಸಿಡ್ ದಾಳಿಗೆ ಒಳಗಾಗಿ ಸಂಕಷ್ಟಕ್ಕೆ ತುತ್ತಾಗಿದ್ದ ಸಂತ್ರಸ್ತೆ ಸ್ನಾತಕೋತ್ತರ ಪದವೀಧರೆಗೆ ತಮ್ಮ ಸಚಿವಾಲಯದಲ್ಲಿ ಉದ್ಯೋಗ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದ್ದಾರೆ. ತಮ್ಮ ನಿವಾಸದಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸುತ್ತಿದ್ದ ಮುಖ್ಯಮಂತ್ರಿಗಳು ಸಂತ್ರಸ್ತೆಯ ಅಹವಾಲನ್ನು ಕೇಳಿ, ಸ್ಥಳದಲ್ಲೇ ಉದ್ಯೋಗ ನೀಡುವ ಭರವಸೆ ನೀಡಿದರು. 2022ರ ಏಪ್ರಿಲ್ 28 ರಂದು ಆಸಿಡ್ ದಾಳಿಗೆ ತುತ್ತಾಗಿದ್ದ ಸಂತ್ರಸ್ತೆ ಎಂ.ಕಾಂ ಪದವೀಧರೆ ಆಗಿದ್ದಾರೆ. ತಂದೆ ಮತ್ತು ತಾಯಿಯ ಜತೆ ಜನತಾ ದರ್ಶನಕ್ಕೆ ಬಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಂಡರು.

ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರಲ್ಲೂ ಉದ್ಯೋಗದ ಮನವಿ ಮಾಡಿದ್ದೆವು. ಅವರು ಭರವಸೆ ನೀಡಿದ್ದರು. ಆದರೆ ಉದ್ಯೋಗ ಮಾತ್ರ ಕೊಡಲಿಲ್ಲ ಎಂದು ಅಳಲು ತೋಡಿಕೊಂಡರು. ಅಹವಾಲು ಸ್ವೀಕರಿಸಿದ ಮುಖ್ಯಮಂತ್ರಿಗಳು ತಮ್ಮ ಸಚಿವಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಆಸಿಡ್ ದಾಳಿ ಸಂಬಂಧ ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ತನಿಖೆಗೆ ಇಳಿದ ಪೊಲೀಸರು, ಆರೋಪಿ ಸ್ವಾಮಿ ವೇಷದಲ್ಲಿ ತಿರುವಣ್ಣಾಮಲೈ ಆಶ್ರಮದಲ್ಲಿ ತಲೆ ಮರೆಸಿಕೊಂಡಿರುವುದನ್ನು ಪತ್ತೆ ಹಚ್ಚಿದ್ದರು. ಬಳಿಕ ಭಕ್ತರ ವೇಷದಲ್ಲಿ ಹೋಗಿ ಆರೋಪಿಯನ್ನು ಬಂಧಿಸಿದ್ದರು. ಸದ್ಯ ಆರೋಪಿ ಬೆಂಗಳೂರು ಜೈಲಿನಲ್ಲಿದ್ದಾನೆ. ಸಂತ್ರಸ್ತೆ ಚಿಕಿತ್ಸೆ ಪಡೆದು, ಚೇತರಿಸಿಕೊಳ್ಳುತ್ತಿದ್ದಾರೆ. ಚಿಕಿತ್ಸೆಗೆ ಸಿಎಂ ಪರಿಹಾರ ನಿಧಿಯಿಂದ ನೆರವು ನೀಡಲಾಗಿದೆ.

ತಪಾಸಣಾ ಶಿಬಿರ

ಮೈಸೂರು, ಜೂ. 30– ಮೈಸೂರಿನ ಯೂಥ್ ಹಾಸ್ಟೆಲ್ ಅಸೋಸಿಯೇಷನ್ ಆಫ್ ಇಂಡಿಯಾ, ಗಂಗೋತ್ರಿ ಘಟಕದ ವತಿಯಿಂದ ವೈದ್ಯರ ದಿನಾಚರಣೆ ಅಂಗವಾಗಿ ಜು. 2 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ವಿದ್ಯಾರಣ್ಯಪುರಂನ ಸಾರ್ವಜನಿಕ ಹಾಸ್ಟೆಲ್ ಸಮೀಪದಲ್ಲಿರುವ ಶ್ರೀ ಹೇರಂಬ ಮೆಡಿಕಲ್ಸ್ ಹಿಂಭಾಗ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ನುರಿತ ವೈದ್ಯರಿಂದ ತಪಾಸಣೆ ಮತ್ತು ಸಲಹೆಗಳನ್ನು ನೀಡಲಾಗುವುದು. ಮಾಹಿತಿಗೆ ಮೊ.9449047132, 7624876800 ಸಂಪರ್ಕಿಸಬಹುದು.

ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ದಿನಾ ಹೋಟ್ಲಲ್ಲಿ ತಿನ್ನಬೇಡಿ ಅಲ್ಸರ್ ಆಗುತ್ತೆ.
ಗಂಡ : ಹಾಗಾದ್ರೆ ದಿನಾ ಪಾರ್ಸೆಲ್ ತಂದು ಮನೆಲೇ ತಿನ್ನಾ.

ಮೈಸೂರು ಮಿತ್ರ
ಶನಿವಾರ, 1 ಜುಲೈ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಈ ಕಾರ್ಯ ಕಷ್ಟಕರವಾದುದ್ದೆಂದು ಕರ್ತವ್ಯದಿಂದ ವಿಮುಖವಾಗುವುದು ಅರಿವಿನ ಕೊರತೆ ಲಕ್ಷಣ, ಆದರೆ ಸಾಹಸಗೈಯದೆ ಶ್ರೇಯಸ್ಸು ದೊರೆಯುವುದಿಲ್ಲ –ಹರಿಹರ ಸುಭಾಷಿತ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಗೆ ಹೋದರೆ ಮಜ್ಜಿಗೆ ಕೊಡದೋರು ಹೇಳಿ ಕಳಿಸಿದರೆ ಮೊಸರು ಕೊಡುವರೇ?

ನಿಮ್ಮ ಪತ್ರಗಳು

■ ನಗರ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಯದುವಂಶದ ರಾಜರ ಭಾವಚಿತ್ರ ಅಳವಡಿಸಿ

ಮಾನ್ಯರೆ,

ಸರ್ಕಾರ ಮತ್ತು ಮೈಸೂರು ನಗರ ಪಾಲಿಕೆ ವತಿಯಿಂದ ಹೊಸದಾಗಿ ನಿರ್ಮಾಣ ಮತ್ತು ನವೀಕರಣಗೊಳ್ಳುವ ನಗರ ಸಾರಿಗೆ ಬಸ್ ನಿಲ್ದಾಣಗಳಲ್ಲಿ ಈ ದೇಶ ಮತ್ತು ಈ ರಾಜ್ಯಕ್ಕೆ ಯಾವುದೇ ಕೊಡುಗೆಗಳು, ಅಭಿವೃದ್ಧಿಗಳನ್ನು ನೀಡದಂತಹ ಅನಾಮಧೇಯರ ಫೋಟೋಗಳನ್ನು ಹಾಕುವ ಬದಲು ಮೈಸೂರು ಸಂಸ್ಥಾನದ ಜನತೆಯ ಅನುಕೂಲಕ್ಕಾಗಿ ವೈದ್ಯಕೀಯ ಸಂಸ್ಥೆಗಳು, ವಿದ್ಯಾಸಂಸ್ಥೆಗಳು, ಬಸ್ ನಿಲ್ದಾಣಗಳು, ಕಾಗದ, ಶ್ರೀಗಂಧ, ರೇಷ್ಮೆ, ಬಟ್ಟೆ ಮತ್ತು ಸಕ್ಕರೆ ತಯಾರಿಸುವ ಕಾರ್ಖಾನೆಗಳು, ವಿದ್ಯುತ್ ಯೋಜನೆಗಳು, ವಾಣಿ ವಿಲಾಸ ವಾಟರ್ ವರ್ಕ್ಸ್ ಮತ್ತು ಕೃಷ್ಣರಾಜ ಜಲಾಶಯ ಹಾಗೂ ಇನ್ನೂ ಮರೆಯಲಾಗದಂತಹ ಕೊಡುಗೆಗಳನ್ನು ನೀಡಿದಂತಹ 10ನೇ ಜಯಚಾಮರಾಜೇಂದ್ರ ಒಡೆಯರ್, ನಂಜಮ್ಮಣ್ಣಿ, ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಫೋಟೋಗಳನ್ನು ಹಾಕುವ ಮೂಲಕ ಇಂದಿನ ಪೀಳಿಗೆಗೆ ಮೈಸೂರು ರಾಜರ ಇತಿಹಾಸ ಮತ್ತು ಪರಂಪರೆಯನ್ನು ಸಾರುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಮನವಿ.

– ಎಂ. ರಾಜಣ್ಣ, ಅಶೋಕಪುರಂ, ಮೈಸೂರು.

■ ಬೆಂಗಳೂರು–ಮೈಸೂರು ಹೈವೆಯಲ್ಲಿ ಹೆಚ್ಚುತ್ತಿರುವ ಅಪಘಾತಗಳು

ಮಾನ್ಯರೆ,

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ ಇತ್ತೀಚೆಗೆ ಅಪಘಾತಗಳು ಹೆಚ್ಚುತ್ತಿವೆ. ಇಂತಹ ರಸ್ತೆಗಳಲ್ಲೂ ಅಪಘಾತಗಳು ಸಂಭವಿಸಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಅಂದರೆ ಅದಕ್ಕೆ ಮುಖ್ಯ ಕಾರಣ ಅತೀಯಾದ ವೇಗ. ತೊಂಬತ್ತರಿಂದ ನೂರು ಕಿ.ಮೀ. ವೇಗದಲ್ಲಿ ಚಲಿಸಿದರೂ ಒಂದೂವರೆಯಿಂದ ಒಂದು ಮುಕ್ಕಾಲು ಘಂಟೆಯೊಳಗೆ ಬೆಂಗಳೂರಿನಿಂದ ಮೈಸೂರಿಗೆ ತಲುಪಬಹುದು. ಮೊದಲಿಗಿಂತ ಹೆಚ್ಚು ಕಡಿಮೆ ಒಂದೂ ಕಾಲು ಘಂಟೆ ಪ್ರಯಾಣದ ಅವಧಿ ಕಡಿಮೆಯಾಗಿದೆ. ಆದರೂ ಅತಿಯಾದ ವೇಗದಿಂದ, ಅಜಾಗರೂಕತೆಯಿಂದ ವಾಹನ ಚಲಾಯಿಸಿ ಇನ್ನೂ ಬೇಗ ಹೋಗುವ ತವಕ ಏಕೆ? ಜೀವ ಕಳೆದುಕೊಳ್ಳುವುದೇಕೆ?

ತುಂಬಾ ವರ್ಷಗಳ ನಂತರ ಬಹುಜನರ ನಿರೀಕ್ಷೆಯಂತೆ ಬೆಂಗಳೂರು, ಮೈಸೂರು ಪ್ರಯಾಣಿಕರಿಗೆ ಅನುಕೂಲವಾಗುವಂತಹ ಉತ್ತಮ ರಸ್ತೆ ನಿರ್ಮಾಣಗೊಂಡಿದೆ. ವಾಹನ ಸವಾರರು ಅತಿಯಾದ ವೇಗದಿಂದ ವಾಹನ ಚಲಾಯಿಸದೇ, ಎಚ್ಚರಿಕೆಯಿಂದ ವಾಹನ ಚಲಾಯಿಸಿ ಸುರಕ್ಷತೆ ಕಾಪಾಡಿಕೊಳ್ಳ ಬೇಕು. ಈ ರಸ್ತೆಯ ಸದುಪಯೋಗ ಪಡೆದುಕೊಳ್ಳಬೇಕು.

–ರಾಘವೇಂದ್ರ ಜೋಯಿಸ್, ಮೈಸೂರು

■ ದಟ್ಟಗಳ್ಳಿಯಲ್ಲಿ ಬೀದಿ ನಾಯಿಗಳ ಹಾವಳಿ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿ ಪಂಚಮುಖಿ ಗಣಪತಿ ದೇವಸ್ಥಾನದ ಸುತ್ತಮುತ್ತ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದ್ದು, ನಿವಾಸಿಗಳು ನೆಮ್ಮದಿಯಿಂದ ವಾಸ ಮಾಡಲಾಗದ ಪರಿಸ್ಥಿತಿ ತಲೆದೋರಿದೆ.

ಇಲ್ಲಿ ನಾಯಿಗಳ ಹಿಂಡೇ ಇದೆ. ಹಗಲು ಹೊತ್ತಿನಲ್ಲಿ ದ್ವಿಚಕ್ರ ವಾಹನ, ಕಾರುಗಳು ಮತ್ತು ನಡೆದುಕೊಂಡು ಹೋಗುವವರ ಮೇಲೆ ಬೊಗಳಿಕೊಂಡು ಅಟ್ಟಾಡಿಸುತ್ತವೆ. ಕೆಲವು ವೇಳೆ ಇದರಿಂದ ತಪ್ಪಿಸಿಕೊಳ್ಳಲು ಯತ್ನಿಸಿ ದ್ವಿಚಕ್ರ ವಾಹನ ಸವಾರರು ಮತ್ತು ಪಾದಚಾರಿಗಳು ಬಿದ್ದು ಗಾಯಗಳಾಗಿದ್ದು ಉಂಟು.

ಇನ್ನು ರಾತ್ರಿ ವೇಳೆಯಂತೂ, ಒಂದೇ ಸಮನೆ ಬೊಗಳುತ್ತ ಇಡೀ ಬೀದಿ ಬೀದಿಗಳಲ್ಲಿ ಓಡಾಡುತ್ತಿರುವುದರಿಂದ ವಯಸ್ಸಾದವರು, ಅನಾರೋಗ್ಯ ಪೀಡಿತರು ನೆಮ್ಮದಿಯಿಂದ ವಿಶ್ರಾಂತಿ ಪಡೆಯದಂತಹ ಪರಿಸ್ಥಿತಿ ತಲೆದೋರಿದೆ. ಈ ನಾಯಿಗಳು ಓಡಿಸಲು ಯತ್ನಿಸಿದವರ ಮೇಲೂ ತಿರುಗಿ ಅಟ್ಯಾಕ್ ಮಾಡುತ್ತಿರುವುದು ಆತಂಕದ ವಿಷಯವಾಗಿದೆ.

ಶಾಲಾ ಮಕ್ಕಳಂತೂ ಶಾಲೆಗಳಿಗೆ ಹೋಗಲು ಹಿಂದೇಟು ಹಾಕುತ್ತಿದ್ದಾರೆ. ಬೀದಿ ನಾಯಿಗಳ ಹಾವಳಿ ಬಗ್ಗೆ ಸಂಬಂಧಪಟ್ಟ ಸ್ಥಳೀಯ ಪಾಲಿಕೆ ಸದಸ್ಯರು ಮತ್ತು ನಗರ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗದೇ ಇರುವುದು ನೋವಿನ ಸಂಗತಿ.

ಇನ್ನು ಮುಂದಾದರೂ ಬೀದಿ ನಾಯಿಗಳ ಹಾವಳಿಯಿಂದ ನಮಗೆ ಮುಕ್ತಿ ಕೊಡಿ. ಅವುಗಳ ಉಪಟಳವನ್ನು ತಪ್ಪಿಸಿ. ಇದು ನಮ್ಮ ಕಳಕಳಿಯ ಮನವಿ. ಇಲ್ಲದಿದ್ದರೆ ಸ್ಥಳೀಯ ಕಾರ್ಪೋರೇಟರ್ ಮನೆ ಮುಂದೆ ಇಲ್ಲವೆ ನಗರ ಪಾಲಿಕೆ ಮುಂದೆ ಹೋರಾಟ ಅನಿವಾರ್ಯವಾಗುತ್ತದೆ.

–ನೊಂದ ನಿವಾಸಿಗಳು, ದಟ್ಟಗಳ್ಳಿ, ಮೈಸೂರು.

■ ಅಕ್ಕಿ ಬದಲು ಹಣದ ಮಾರ್ಗ

ಮಾನ್ಯರೆ,

ಕಾಂಗ್ರೆಸ್ ಸರ್ಕಾರ ಚುನಾವಣಾ ಸಂದರ್ಭದಲ್ಲಿ ಘೋಷಣೆ ಮಾಡಿದ ಶಕ್ತಿ ಯೋಜನೆ, ಗೃಹ ಲಕ್ಷ್ಮಿ ಯೋಜನೆ, ಯುವ ನಿಧಿ ಯೋಜನೆ, ಗೃಹ ಜ್ಯೋತಿ ಯೋಜನೆ, ಅನ್ನಭಾಗ್ಯ ಯೋಜನೆಯಲ್ಲಿ ತಲಾ ಹತ್ತು ಕೆಜಿ ನೀಡುವುದಾಗಿ ಕಾಂಗ್ರೆಸ್ ಘೋಷಣೆ ಮಾಡಿತ್ತು. ಅಗತ್ಯವಾದ ಅಕ್ಕಿ ಸಿಕ್ಕಿಲ್ಲದ ಕಾರಣ, ಬೇರೆ ಮಾರ್ಗವನ್ನು ಹಿಡಿದಿದೆ.

ಗ್ಯಾರಂಟಿ ಈಡೇರಿಸಲು ಹೆಣಗಾಡುತ್ತಿರುವ ಸರ್ಕಾರ ಪ್ರತಿಪಕ್ಷಗಳ ಮುಂದೆ ತನ್ನ ಸಾಮರ್ಥ್ಯ ತೋರಿಸಲು ಶಕ್ತಿ ಯೋಜನೆ ಜಾರಿ ಮಾಡಿದ ನಂತರ ಅನ್ನಭಾಗ್ಯ ಜಾರಿ ಮಾಡಬೇಕಾಗಿದೆ.

ತೆಲಂಗಾಣ, ಛತ್ತೀಸ್‌ಗಢ, ಪಂಜಾಬ್ ರಾಜ್ಯಗಳನ್ನು ವಿಚಾರಿಸಿದರೂ ಸಮರ್ಪಕವಾದ ಅಕ್ಕಿ ಸಿಕ್ಕಿಲ್ಲದ ಕಾರಣ ಕಾಂಗ್ರೆಸ್ ನೇತೃತ್ವದ ಸರ್ಕಾರ ಈಗ ಬೇರೆ ಮಾರ್ಗವನ್ನು ಅನುಸರಿಸಲು ಮುಂದಾಗಿ ಈಗ 5 ಕೆಜಿ ಅಕ್ಕಿ ಬದಲು ಹಣ ಕೊಡಲು ಮುಂದಾಗಿದೆ. ಪ್ರತಿ ಕೆಜಿಗೆ ತಲಾ ಮೂವತ್ತು ನಾಲ್ಕು ರೂಪಾಯಿಯಂತೆ ಒಬ್ಬ ವ್ಯಕ್ತಿಗೆ 170 ರೂ. ನೀಡಲಾಗುತ್ತದೆ ಹಾಗೂ ಕುಟುಂಬದ ಎಲ್ಲಾ ಅರ್ಹ ಸದಸ್ಯರ ಹಣವನ್ನು ಯಜಮಾನಿ ಖಾತೆಗೆ ನೇರವಾಗಿ ಜಮಾ ಮಾಡಲು ಸರ್ಕಾರ ನಿರ್ಧರಿಸಿರುವುದು ಹಾಗೂ ಮುಂದೆ ಇನ್ನೂ ಯಾವ ಯಾವ ಗ್ಯಾರಂಟಿ ಯೋಜನೆ ಬದಲಿಗೆ ಬೇರೆ ಬೇರೆ ಮಾರ್ಗ ಅನುಷ್ಠಾನಕ್ಕೆ ತರುವುದೆಂದೂ ಕಾದು ನೋಡಬೇಕಾಗಿದೆ.

–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು



ಕಾರ್ಕಳ ಆನಂದ ಭಟ್
ಮೊ : 7676554198
ಕಾರ್ಕಳ – 574 104,
ಉಡುಪಿ ಜಿಲ್ಲೆ

ದಿಕ್ಕುದೆಸೆ

ಬಲ್ಲಿರಾ! ಭಾರತದ ಡಿಜಿಟಲ್ ಆರ್ಥಿಕತೆಯ ನಾಗಲೋಟವಾ...



> "ಮೊದಲ ಬಾರಿ ದೇಶದಲ್ಲಿ ಡಿಜಿಟಲ್ ವ್ಯವಹಾರದ ಬಗ್ಗೆ ಪ್ರಸ್ತಾಪವಾದಾಗ ದಿನಾಂಕ 9.2.2017 ರಲ್ಲಿ ಮಾಜಿ ವಿತ್ತ ಮಂತ್ರಿಗಳಾದ ಪಿ.ಚಿದಂಬರಂ ಭಾರತದಲ್ಲಿ ಸಾಧ್ಯವಿಲ್ಲವೆಂದಿದ್ದರು. 70 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ದೇಶದಲ್ಲಿ ಹೊಸ ಪ್ರಯೋಗಗಳು ಆಗಲೇ ಇಲ್ಲ. ಭಾರತೀಯರು ಅಪ್ರಬುದ್ಧರು, ಹೊಸ ಆವಿಷ್ಕಾರಗಳನ್ನು ಸ್ವೀಕರಿಸುವಷ್ಟು ಬುದ್ಧಿ ಭಾರತೀಯರಲ್ಲಿಲ್ಲ ಎಂದು ಕತ್ತಲೆಯಲ್ಲೇ ಇಟ್ಟಿದ್ದರು. ಆದರೆ ದೇಶದ ಆರ್ಥಿಕತೆ ಡಿಜಿಟಲ್ ಯುಗಕ್ಕೆ ತೆರೆದುಕೊಳ್ಳುತ್ತಿದ್ದಂತೆ ಜಗತ್ತೆ ಬೆರಗಾಗುವ ರೀತಿಯಲ್ಲಿ ಭಾರತದ ಜನಸಾಮಾನ್ಯರು ಅದನ್ನು ಸ್ವೀಕರಿಸಿದ್ದಾರೆ.

21ನೇ ಶತಮಾನದಲ್ಲಿ ತ್ವರಿತ ತಂತ್ರಜ್ಞಾನ ದಲ್ಲಾಗುತ್ತಿರುವ ಉನ್ನತೀಕರಣವು ಮಾನವನ ಜೀವನ ಶೈಲಿ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮಹತ್ತರ ಪರಿವರ್ತನೆ ತರುವ ಮೂಲಕ ಸುಸ್ಥಿರ ಆರ್ಥಿಕ ಅಭಿವೃದ್ಧಿ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಆರ್ಥಿಕ ವಿಕಾಸಕ್ಕೆ ಡಿಜಿಟಲೀಕರಣ ಮೂಲಭೂತ ಅವಶ್ಯಕತೆಯಾಗಿದೆ. ಆರ್ಥಿಕ ಯೋಜನೆಗಳ ಪ್ರಯೋಜನ ನಾಗರಿಕರಿಗೆ ಅತಿ ವೇಗದಲ್ಲಿ ನೀಡಬೇಕೆಂಬ ಉದ್ದೇಶದಿಂದ ವಿಶ್ವಾಸಾರ್ಹ, ಸರಳ ಹಾಗೂ ಪಾರದರ್ಶಕ ವಾದ ಡಿಜಿಟಲ್ ಆರ್ಥಿಕ ವ್ಯವಸ್ಥೆ ನಿರ್ಮಿಸಲು ಸರಕಾರ ಆಸಕ್ತಿ ತೋರಿತು. ಅದಕ್ಕೆ ಆದ್ಯತೆ ನೀಡಿತು. ದೇಶವು ಡಿಜಿಟಲ್ ವ್ಯವಹಾರದಲ್ಲಿ ಅದ್ಭುತ ಸಾಧಿಸುವ ಮೊದಲ ಹಂತವಾಗಿ Jam(Trinity) ಅಂದರೆ ಎಲ್ಲರಿಗೂ ಜನ್‌ಧನ್ ಉಳಿತಾಯ ಖಾತೆ, ಆಧಾರ್ ಕಾರ್ಡ್ ಹಾಗೂ ಮೊಬೈಲ್ ಸಂಪರ್ಕವೆಂಬ ತ್ರಿಮೂರ್ತಿಗಳನ್ನು ಯೋಜನಾಬದ್ಧವಾಗಿ ಅನುಷ್ಠಾನಗೊಳಿಸಲಾಯಿತು. ಜನ್‌ಧನ್ ಯೋಜನೆ ಜಗತ್ತಿನಲ್ಲಿ ಅತೀ ಬೃಹತ್ ಆರ್ಥಿಕ ಸೇರ್ಪಡೆ (Financial Inclusion) ಯ ಯಶಸ್ವಿ ಅಭಿಯಾನವಾಗಿದೆ. ದೇಶದಲ್ಲಿಂದು 47.84 ಕೋಟಿ ಜನ್‌ಧನ್ ಖಾತೆಗಳಿವೆ. ಇದರಲ್ಲಿ (26.54 ಕೋಟಿ ಮಹಿಳೆಯರಿದ್ದಾರೆ). ಕಳೆದ ವರ್ಷಾಂತ್ಯಕ್ಕೆ ಈ ಖಾತೆಗಳಲ್ಲಿ ಉಳಿತಾಯವಾಗಿರುವ ಮೊತ್ತ 180857 ಕೋಟಿ ರೂ. ಆಗಿದೆ. ಆಗಸ್ಟ್ 2022ರ ಅಂತ್ಯಕ್ಕೆ ಶೂನ್ಯ ಬ್ಯಾಲೆನ್ಸ್ ಖಾತೆಗಳು ಕೇವಲ 8.2% ರಷ್ಟಿದೆ. ಈ ಆರ್ಥಿಕ ಸೇರ್ಪಡೆ ಯೋಜನೆಯ ಯಶಸ್ವಿ ಅನುಷ್ಠಾನದಿಂದ ಭಾರತ ಇಂದು ವಿಶ್ವದಲ್ಲೇ ಅತಿ ಹೆಚ್ಚು ಡಿಜಿಟಲ್ ಹಣಕಾಸು ವ್ಯವಹಾರ ನಡೆಸುವ ಅಗ್ರಗಣ್ಯ ರಾಷ್ಟ್ರವೆನಿಸಿದೆ.

ಡಿಜಿಟಲ್ ಯೋಜನೆಯ ಪರಿಣಾಮ

2014–19ರ ಅವಧಿಯಲ್ಲಿ ದೇಶದಲ್ಲಿ ತಳ ಮಟ್ಟದಲ್ಲಿ ಡಿಜಿಟಲ್ ಆರ್ಥಿಕತೆಯ ಒಟ್ಟು ಮೌಲ್ಯವರ್ಧನೆಯು(ಜಿವಿಎ) ಶೇ.5.4 ರಿಂದ ಶೇ.8.5ಕ್ಕೆ ನೆಗೆಯಿತು. ಇದೇ ಅವಧಿಯಲ್ಲಿ ದೇಶದ ಒಟ್ಟಾರೆ ಆರ್ಥಿಕತೆಗಿಂತ ಡಿಜಿಟಲ್ ಆರ್ಥಿಕತೆಯು 2.4 ಪಟ್ಟು ವೇಗದಲ್ಲಿ ಬೆಳವಣಿಗೆ ದಾಖಲಿಸಿತು. ಆರ್‌ಬಿಐ ಪ್ರಕಟಣೆಯಂತೆ 2019ರಲ್ಲಿ ಒಟ್ಟು ಆರ್ಥಿಕತೆಯಲ್ಲಿ ಡಿಜಿಟಲ್ ಪ್ರಮಾಣ ಶೇ.22 ರಷ್ಟಾಗಿತ್ತು. ಈ ರೀತಿಯ ಬೆಳವಣಿಗೆ ಗಮನಿಸಿದ ಸರಕಾರವು ಡಿಜಿಟಲ್ ಕ್ಷೇತ್ರದಲ್ಲಿ ಸಾರ್ವಜನಿಕ ಮೂಲ ಸೌಕರ್ಯಗಳ ಅಭಿವೃದ್ಧಿಗೆ ಉತ್ತೇಜನ ನೀಡಿತು. ಇದರಿಂದಾಗಿ ಡಿಜಿಟಲ್ ಕ್ಷೇತ್ರದ ಬಿಡಿಭಾಗಗಳನ್ನು ತ್ವರಿತವಾಗಿ ಪೂರೈಸುವ ವ್ಯವಸ್ಥೆ, ಮಾರುಕಟ್ಟೆ ಆಧಾರಿತ ಆವಿಷ್ಕಾರಗಳಿಗೆ ಉತ್ತೇಜನ ನೀಡುವ ಮೂಲಕ ಪಾರದರ್ಶಕತೆ ಮತ್ತು ವಿಶ್ವಾಸಾರ್ಹತೆಯನ್ನು ವೃದ್ಧಿಗೊಳಿಸಲಾಯಿತು. ಡಿಜಿಟಲ್ ಇಂಡಿಯಾದಿಂದ ಸಣ್ಣ ರೀತಿಯಲ್ಲಿ ಆರಂಭವಾದ ಡಿಜಿಟಲ್ ಹಣಕಾಸು ವರ್ಗಾವಣೆಯು ಇಂದು ದೇಶಾದ್ಯಂತ ದೊಡ್ಡ ಪ್ರಮಣದಲ್ಲಿ ನಡೆಯುತ್ತಿದೆ.

ಆಧಾರ್ ಕಾರ್ಡ್ ಡಿಜಿಟಲ್ ಆರ್ಥಿಕತೆಯ ಆಧಾರ

ಡಿಜಿಟಲ್ ಮೂಲ ಸೌಕರ್ಯದ ಪ್ರಮುಖ ಸಾಧನವಾಗಿರುವ 'ಆಧಾರ್' ತನ್ನಲ್ಲಿರುವ ವಿಶೇಷತೆಗಳಿಂದ ಡಿಜಿಟಲ್ ವ್ಯವಹಾರಗಳಿಗೆ ಮೂಲಾಧಾರವಾಗಿದೆ. ದೇಶದಲ್ಲಿರುವ ಸುಮಾರು 1700ಕ್ಕೂ ಜನೋಪಯೋಗಿ ಸೌಲಭ್ಯಗಳು ಮತ್ತು ಕೇಂದ್ರ, ರಾಜ್ಯ ಸರಕಾರಗಳ ಯೋಜನೆಗಳ ಲಾಭ ಪಡೆಯಲು ಆಧಾರ್ ಅನಿವಾರ್ಯವಾಗಿದೆ. ಹಿಂದೆ ದಿವಂಗತ ರಾಜೀವ್ ಗಾಂಧಿಯವರು ಯಾವುದೇ ಜನಕಲ್ಯಾಣ ಯೋಜನೆಯಲ್ಲಿ ಕೇಂದ್ರದಿಂದ ಬಿಡುಗಡೆಯಾಗುವ ಒಂದು ನೂರು ರೂಪಾಯಿಗಳಲ್ಲಿ ಕಟ್ಟಕಡೆಯ ಫಲಾನುಭವಿಗೆ ಕೇವಲ ಹದಿನೈದು ರೂ. ಮಾತ್ರ ದೊರೆಯುತ್ತಿತ್ತು ಎಂದು ಒಮ್ಮೆ ಹೇಳಿದ್ದರು. ಆಧಾರ್‌ನಿಂದ ಈ ಸಮಸ್ಯೆ ನಿವಾರಣೆಯಾಗಿದೆ. ಯೋಜನೆಗಳ ಪೂರ್ಣ ಲಾಭ ಮಧ್ಯವರ್ತಿಗಳಿಲ್ಲದ ಕಾರಣ ಫಲಾನುಭವಿಗಳಿಗೆ ಸಂಪೂರ್ಣವಾಗಿ ದೊರೆಯುತ್ತಿದೆ. ಆಧಾರ್‌ನಿಂದಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ (ಪಿಡಿಎಸ್) ಆಹಾರ ಧಾನ್ಯಗಳ ವಿತರಣೆಯಲ್ಲಾಗುತ್ತಿದ್ದ ಅಕ್ರಮಗಳಲ್ಲಿ ಭಾರೀ ಇಳಿಕೆಯಾಗಿದೆ. ಈ ವ್ಯವಸ್ಥೆ ಗಣಕೀಕರಣವಾದ ನಂತರ 4.7 ಮಿಲಿಯನ್ ಬೋಗಸ್ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. ದೇಶದಲ್ಲಿರುವ 750 ಮಿಲಿಯನ್ ರೇಷನ್ ಕಾರ್ಡ್‌ಗಳನ್ನು ಆಧಾರ್‌ನೊಂದಿಗೆ ಲಿಂಕ್‌ಗೊಳಿಸಿದ ನಂತರ ಮತ್ತು ನ್ಯಾಯಬೆಲೆ ಅಂಗಡಿಗಳ ಗಣಕೀಕರಣದ ನಂತರ ದೇಶಕ್ಕೆ 12 ಬಿಲಿಯನ್ ಡಾಲರ್‌ನಷ್ಟು ಉಳಿತಾಯವಾಗಿದೆ. ಅಡುಗೆ ಅನಿಲ ಸಬ್ಸಿಡಿಯಲ್ಲಿ 8.5 ಮಿಲಿಯನ್ ಡಾಲರ್ ಉಳಿತಾಯ ರೈತರಿಗೆ ಲಾಭ ನೀಡುವ ಯೋಜನೆಗಳಲ್ಲಿ 12 ಮಿಲಿಯನ್ ಮೆಟ್ರಿಕ್ ಟನ್ ರಸಗೊಬ್ಬರದ ಉಳಿತಾಯದಿಂದ 1.2 ಬಿಲಿಯನ್ ಡಾಲರ್ ಸರಕಾರಕ್ಕೆ ಉಳಿದಿದೆ.

ಡಿಜಿಟಲ್ ಸತರ್ಕತೆಯಲ್ಲಿ ವೃದ್ಧಿ

ದೇಶದ 140 ಕೋಟಿ ಜನಸಂಖ್ಯೆಯಲ್ಲಿ 1.17 ಬಿಲಿಯನ್ ಮೊಬೈಲ್ ಟೆಲಿಕಾಂನ ಗ್ರಾಹಕರಿದ್ದಾರೆ. ಸುಮಾರು 600 ಮಿಲಿಯನ್ ಸ್ಮಾರ್ಟ್ ಫೋನ್ ಬಳಕೆದಾರರು ಹಾಗೂ ವಿಶ್ವದಲ್ಲಿ ಅತೀ ಹೆಚ್ಚು ಇಂಟರ್‌ನೆಟ್ ಸಂಪರ್ಕ ಹೊಂದಿರುವ ದೇಶಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ (840 ಮಿಲಿಯನ್) ಮೊಬೈಲ್ ಗ್ರಾಹಕರಲ್ಲಿ ಪ್ರತಿಯೊಬ್ಬರು ತಿಂಗಳಿಗೆ ಸರಾಸರಿ 16 ಜಿಬಿ+ ಡಾಟಾ ಉಪಯೋಗಿಸುತ್ತಿದ್ದಾರೆ. ಇದು 2014 ರಿಂದ 266 ಪಟ್ಟು ಏರಿಕೆ ದಾಖಲಿಸಿದೆ. 2015–21ರ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಇಂಟರ್‌ನೆಟ್ ಗ್ರಾಹಕರ ಪ್ರಮಾಣದಲ್ಲಿ ಶೇ.200 ಏರಿಕೆಯಾಗಿದೆ. ಇದೇ ಅವಧಿಯಲ್ಲಿ ನಗರ ಪ್ರದೇಶಗಳಲ್ಲಿ ಶೇ.158 ಏರಿಕೆ ದಾಖಲಿಸಿದೆ. ಮೊಬೈಲ್ ಸೇವೆಯಲ್ಲಿ ನಗರ–ಗ್ರಾಮೀಣ ಪ್ರದೇಶಗಳ ಮಧ್ಯೆ ಇರುವ ಡಿಜಿಟಲ್ ಅಂತರ ಕಡಿಮೆ ಮಾಡಲಾಗುತ್ತಿದೆ. ಹೆಚ್ಚು ಸಾಮರ್ಥ್ಯವುಳ್ಳ ಕಡಿಮೆ ಬೆಲೆಯ ಮೊಬೈಲ್ ಫೋನ್‌ಗಳ ತಯಾರಿಕೆಗೆ ಸರಕಾರ ಉತ್ತೇಜನ ನೀಡುತ್ತಿದೆ. ಈ ಮೂಲಕ ಡಿಜಿಟಲ್ ಆರ್ಥಿಕತೆಯಲ್ಲಿ ಎಲ್ಲರನ್ನೂ ಸೇರಿಸಿಕೊಳ್ಳುವ ಮಹತ್ವಾಕಾಂಕ್ಷೆ ಹೊಂದಿದೆ. ಇತ್ತೀಚೆಗೆ ಪ್ರಾರಂಭಿಸಿರುವ 'ಡಿಜಿಟಲ್ ಇಂಡಿಯಾ ಭಾಷಿಣಿ' ಮೂಲಕ ಜನರು ತಮ್ಮ ಪ್ರಾಂತೀಯ ಭಾಷೆಗಳಲ್ಲಿ ಡಿಜಿಟಲ್ ಮತ್ತು ಇಂಟರ್‌ನೆಟ್ ಸೇವೆಗಳನ್ನು ಸುಲಭವಾಗಿ ದೊರೆಯುವಂತೆ ಮಾಡಲಾಗುವುದು.

ಡಿಜಿಟಲ್ ಸೇರ್ಪಡೆ–ಆರ್ಥಿಕತೆಗೆ ಉತ್ತೇಜಕ

ಡಿಜಿಟಲೀಕರಣದ ಮೂಲಕ ಆರ್ಥಿಕ ಸೇರ್ಪಡೆಯು ಹೆಚ್ಚಿನ ಕಾರ್ಯದಕ್ಷತೆ ಮತ್ತು ಹೊಸ ಅವಕಾಶಗಳಿಗೆ ಉತ್ತೇಜನ ನೀಡಲಿದೆ. ಡಿಜಿಟಲ್ ವ್ಯವಹಾರಗಳಿಗೆ ಅತ್ಯಾವಶ್ಯಕವೆನಿಸಿರುವ ಆಧಾರ್ ಕಾರ್ಡ್ ದೇಶದ ಜನಸಂಖ್ಯೆಯ ಶೇ.94.5 ರಷ್ಟು ಜನರು ಹೊಂದಿದ್ದು, ಪ್ರತಿ ತಿಂಗಳು 2.2 ಬಿಲಿಯನ್ ಆಧಾರ್ ದೃಢೀಕರಣವಾಗುತ್ತಿವೆ. ಅದೇ ರೀತಿ ಪ್ರತಿ ತಿಂಗಳು 5.5 ಬಿಲಿಯನ್ ಹಣಕಾಸು ಪಾವತಿ ವ್ಯವಹಾರ ನಡೆಯುತ್ತಿದ್ದು, ಕಳೆದ ಐದು ವರ್ಷಗಳಲ್ಲಿ 75 ಪಟ್ಟು ಏರಿಕೆ ದಾಖಲಿಸಿದೆ. 1.1 ಬಿಲಿಯನ್ ಕೊ. ವಿನ್ ನೋಂದಣಿಯಾಗಿದ್ದು, 140 ಮಿಲಿಯನ್ ಗ್ರಾಹಕರು ಡಿಜಿ ಲಾಕರ್ ಖಾತೆ ಹೊಂದಿದ್ದಾರೆ. ಇ–ಶ್ರಮ ಪೋರ್ಟಲ್‌ನಲ್ಲಿ 286 ಮಿಲಿಯನ್ ಅಸಂಘಟಿತ ವಲಯದ ಕಾರ್ಮಿಕರ ನೋಂದಣಿಯಾಗಿದೆ. ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಲ್ಲಿ 4.4 ಮಿಲಿಯನ್ ಬೀದಿ ಬದಿ ವ್ಯಾಪಾರಿಗಳು, ಉದ್ಯಮ ಪೋರ್ಟಲ್‌ನಲ್ಲಿ 12.7 ಮಿಲಿಯನ್ ಉದ್ಯಮಿಗಳು ಸೇರ್ಪಡೆಯಾಗಿದ್ದಾರೆ. 2017–22ರ ಅವಧಿಯಲ್ಲಿ ಜಿಎಸ್‌ಟಿ ಪಾವತಿಸುವವರ ಸಂಖ್ಯೆ 7 ಮಿಲಿಯನ್‌ನಿಂದ 14 ಮಿಲಿಯನ್‌ಗೆ ಏರಿಕೆಯಾಗಿದೆ.

ಮೊದಲ ಬಾರಿ ದೇಶದಲ್ಲಿ ಡಿಜಿಟಲ್ ವ್ಯವಹಾರದ ಬಗ್ಗೆ ಪ್ರಸ್ತಾಪವಾದಾಗ ದಿನಾಂಕ 9.2.2017 ರಲ್ಲಿ ಮಾಜಿ ವಿತ್ತ ಮಂತ್ರಿಗಳಾದ ಪಿ.ಚಿದಂಬರಂ ಭಾರತದಲ್ಲಿ ಸಾಧ್ಯವಿಲ್ಲವೆಂದಿದ್ದರು. 70 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ದೇಶದಲ್ಲಿ ಹೊಸ ಪ್ರಯೋಗಗಳು ಆಗಲೇ ಇಲ್ಲ. ಭಾರತೀಯರು ಅಪ್ರಬುದ್ಧರು, ಹೊಸ ಆವಿಷ್ಕಾರಗಳನ್ನು ಸ್ವೀಕರಿಸುವಷ್ಟು ಬುದ್ಧಿ ಭಾರತೀಯರಲ್ಲಿಲ್ಲ ಎಂದು ಕತ್ತಲೆಯಲ್ಲೇ ಇಟ್ಟಿದ್ದರು. ಆದರೆ ದೇಶದ ಆರ್ಥಿಕತೆ ಡಿಜಿಟಲ್ ಯುಗಕ್ಕೆ ತೆರೆದುಕೊಳ್ಳುತ್ತಿದ್ದಂತೆ ಜಗತ್ತೆ ಬೆರಗಾಗುವ ರೀತಿಯಲ್ಲಿ ಭಾರತದ ಜನಸಾಮಾನ್ಯರು ಅದನ್ನು ಸ್ವೀಕರಿಸಿದ್ದಾರೆ. ಭಾರತ ಆವಿಷ್ಕರಿಸಿದ ಭೀಮ್ ಯುಪಿಐ ಸರಳವಾದ ಡಿಜಿಟಲ್ ವ್ಯವಹಾರಗಳ ಸಶಕ್ತ ಮಾಧ್ಯಮವಾಗಿದೆ ಎಂದು ಪ್ರಧಾನಿ ಮೋದಿಯವರು ಕಳೆದ ಜುಲೈಯಲ್ಲಿ ಹೆಮ್ಮೆಯಿಂದ ಹೇಳಿದ್ದರು. ಜಗತ್ತಿನ ಒಟ್ಟು ಡಿಜಿಟಲ್ ವ್ಯವಹಾರದ ಶೇ.40 ರಷ್ಟು ಭಾರತದಲ್ಲಾಗುತ್ತಿದೆ. ಈ ವ್ಯವಹಾರದಲ್ಲಿ ಭಾರತವು ಅಮೇರಿಕ, ಚೀನ, ಜರ್ಮನಿ, ಬ್ರಿಟನ್‌ಗಳನ್ನು ಹಿಂದಿಕ್ಕಿದೆ.

ದೇಶದಲ್ಲಿ ಕಳೆದ ವರ್ಷ ಒಟ್ಟು ಆರ್ಥಿಕ ವ್ಯವಹಾರದ ಶೇ.46 ರಷ್ಟು ಅಂದರೆ 89.5 ಮಿಲಿಯನ್ ವ್ಯವಹಾರಗಳು ಡಿಜಿಟಲ್ ಮಾಧ್ಯಮಗಳ ಮೂಲಕ ಆಗಿವೆ. ಪ್ರಧಾನಿ ಮೋದಿಯವರು ನೀಡಿದ ಮಾಹಿತಿಯಂತೆ ಈ ವರ್ಷ ಮೇಯಲ್ಲಿ ದೇಶದಲ್ಲಿ ಪ್ರತಿನಿಮಿಷಕ್ಕೆ 1.30 ಲಕ್ಷ ಡಿಜಿಟಲ್ ವ್ಯವಹಾರಗಳಾಗಿವೆ. ಕಳೆದ ವರ್ಷ 29.5 ಮಿಲಿಯನ್ ಡಿಜಿಟಲ್ ವ್ಯವಹಾರ ನಡೆಸಿದ ಬ್ರೆಜಿಲ್ 2ನೇ ಸ್ಥಾನ ಹಾಗೂ 17.6 ಮಿಲಿಯನ್ ವ್ಯವಹಾರವಾದ ಚೀನಾ ಮೂರನೇ ಸ್ಥಾನದಲ್ಲಿದೆ. ಥೈಲ್ಯಾಂಡ್ (16.5 ಮಿಲಿಯನ್) ಹಾಗೂ ದಕ್ಷಿಣ ಕೊರಿಯಾ (8 ಮಿಲಿಯನ್) ಅನುಕ್ರಮವಾಗಿ ನಂತರದ ಸ್ಥಾನಗಳಲ್ಲಿವೆ.

ಡಿಜಿಟಲ್ ತಂತ್ರಜ್ಞಾನದ ಮಹತ್ವ ತಿಳಿದ ಭಾರತವು ಎಲ್ಲಾ ಕ್ಷೇತ್ರಗಳನ್ನು ಡಿಜಿಟಲ್ ಕ್ರಾಂತಿಯ ವ್ಯಾಪ್ತಿಗೆ ತರುವಲ್ಲಿ ಸಕ್ರಿಯವಾಗಿದೆ. ಈ ಮೂಲಕ ದೇಶದಲ್ಲಿನ ಎಲ್ಲಾ ಕ್ಷೇತ್ರಗಳಲ್ಲಿ ಪಾರದರ್ಶಕತೆಯನ್ನು ತರಬೇಕೆಂಬ ಇಚ್ಛಾಶಕ್ತಿಯೊಂದಿಗೆ ಮುಂದುವರಿಯುತ್ತಿದೆ.

ಭಾರತದ ರಾಷ್ಟ್ರೀಯ ಪಾವತಿ ನಿಗಮವು (ಎನ್‌ಪಿಸಿಐ) ಅಭಿವೃದ್ಧಿಪಡಿಸಿದ ಹಣಕಾಸು ವರ್ಗಾಯಿಸುವ ವ್ಯವಸ್ಥೆಯಾದ ಯೂನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ಅನ್ನು ಸೌದಿ ಅರೇಬಿಯಾ, ಬಹ್ರೈನ್ ಸಹಿತ 23 ದೇಶಗಳು ತಮ್ಮ ದೇಶಗಳ ಆರ್ಥಿಕ ವ್ಯವಸ್ಥೆಯಲ್ಲಿ ಅಳವಡಿಸಲು ಆಸಕ್ತಿ ತೋರಿವೆ. ಇದು ಭಾರತ ಅಭಿವೃದ್ಧಿಗೊಳಿಸಿದ ಆರ್ಥಿಕ ವ್ಯವಹಾರಗಳ ಸಾಧನೆಗೆ ಸಂದ ಗೌರವವಾಗಿದೆ.

ನಾಳೆ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಮಹತ್ವದ ಸಭೆ

ಬೆಂಗಳೂರು: ಕರ್ನಾಟಕ ವಿಧಾನಸಭೆ ಚುನಾವಣೆಯ ಫಲಿತಾಂಶ ಬಂದು ಹಲವಾರು ದಿನಗಳ ನಂತರ ಇದೀಗ ಬಿಜೆಪಿಯು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಮುಂದಾಗಿದೆ. ಭಾನುವಾರ ದಂದು (ಜುಲೈ 2) ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಸಭೆಯಲ್ಲಿ ಪಕ್ಷದ ಕರ್ನಾಟಕ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಮತ್ತು ರಾಜ್ಯ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್ ಭಾಗವಹಿಸುವ ಸಾಧ್ಯತೆಯಿದೆ.

ಜುಲೈ 3 ರಂದು ಬಜೆಟ್ ಅಧಿವೇಶನ ಆರಂಭವಾಗಲಿದ್ದು, ಬಿಜೆಪಿ ಇನ್ನೂ ವಿರೋಧ ಪಕ್ಷದ ನಾಯಕನನ್ನು ನಾಮ ನಿರ್ದೇಶನ ಮಾಡಿಲ್ಲ. ಬಿಜೆಪಿ ಮೂಲಗಳ ಪ್ರಕಾರ, ಶಾಸಕಾಂಗ ಪಕ್ಷದ ಹೊಸ ನಾಯಕರನ್ನು ಆಯ್ಕೆ ಮಾಡಲು ಭಾನುವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ ಎಂದು ಹೇಳಲಾಗಿದೆ. ಸಭೆಯಲ್ಲಿ ಆಯ್ಕೆಯಾಗುವವರು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಪಕ್ಷದ ಹಲವು ಹಿರಿಯ ನಾಯಕರು ಈ ಹುದ್ದೆಯ ಮೇಲೆ ಕಣ್ಣಿಟ್ಟಿದ್ದು, 2024ರ ಲೋಕಸಭೆ ಚುನಾವಣೆಗೆ ಮುನ್ನ ಬಿಜೆಪಿಗೆ ಈ ನಿರ್ಧಾರ ನಿರ್ಣಾಯಕವಾಗಲಿದೆ ಎಂದೇ ಹೇಳಲಾಗುತ್ತಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಆರ್. ಅಶೋಕ, ಕೇಂದ್ರದ ಮಾಜಿ ಸಚಿವ ಬಸನಗೌಡ ಪಾಟೀಲ್ ಯತ್ನಾಳ್ ಅವರು ಈ ಸ್ಥಾನಕ್ಕೆ ಆಕಾಂಕ್ಷಿಗಳಾಗಿದ್ದು, ಮುಂಚೂಣಿಯಲ್ಲಿದ್ದಾರೆ ಎನ್ನಲಾಗಿದೆ.

ಈ ಮಧ್ಯೆ, ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಸಂಬಂಧಿಸಿ ರಾಜ್ಯ ಮತ್ತು ರಾಷ್ಟ್ರೀಯ ನಾಯಕರ ವಿರುದ್ಧ ಬಹಿರಂಗ ಹೇಳಿಕೆ ನೀಡಿದ 11 ಮಂದಿ ಮುಖಂಡರಿಗೆ ರಾಜ್ಯ ಬಿಜೆಪಿ ಘಟಕ ಸಮನ್ಸ್ ನೀಡಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಮಾಜಿ ಮುಖ್ಯಮಂತ್ರಿಗಳಾದ ಬಿಎಸ್ ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ಈ ನಾಯಕರಿಂದ ಸ್ಪಷ್ಟನೆ ಕೇಳಿದ್ದಾರೆ.

ಸಮನ್ಸ್ ದೊರೆತ 11 ಮಂದಿಯಲ್ಲಿ ಮಾಜಿ ಸಚಿವ ಎಂಪಿ ರೇಣುಕಾಚಾರ್ಯ ಸೇರಿದಂತೆ ಐವರು ಬೆಂಗಳೂರಿನಲ್ಲಿದ್ದರೂ ಶುಕ್ರವಾರದ ಬಿಜೆಪಿ ಸಭೆಗೆ ಗೈರಾಗಿದ್ದಾರೆ. ಸಭೆಗೆ ಗೈರಾದ ರೇಣುಕಾಚಾರ್ಯ ಹಾಗೂ ಇತರರೊಂದಿಗೆ ಖುದ್ದು ಮಾತನಾಡುತ್ತೇನೆ ಎಂದು ಯಡಿಯೂರಪ್ಪ ಹೇಳಿದ್ದಾರೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ, ಸಂಸದ ಪ್ರತಾಪಸಿಂಹ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಕೆಲವು ನಾಯಕರು ಬಿಜೆಪಿ ನಾಯಕರ ಮುಂದೆ ಸಮನ್ಸ್‌ಗೆ ಉತ್ತರಿಸಿದ್ದಾರೆ. ಪಕ್ಷಕ್ಕೆ ಮುಜುಗರ ಉಂಟು ಮಾಡುವ ಬಹಿರಂಗ ಹೇಳಿಕೆಗಳನ್ನು ನೀಡಬೇಡಿ ಎಂದು ರಾಜ್ಯಾಧ್ಯಕ್ಷ ಹಾಗೂ ಯಡಿಯೂರಪ್ಪ ಪಕ್ಷದ ಮುಖಂಡರಿಗೆ ಸೂಚಿಸಿದ್ದಾರೆ.

6 ಲಕ್ಷ ಬಿಪಿಎಲ್ ಕಾರ್ಡ್‌ಗಳಿಗೆ ಆಧಾರ್, ಬ್ಯಾಂಕ್ ಖಾತೆ ಸಮಸ್ಯೆ

ನಾಳೆಯಿಂದಲೇ ಅಕ್ಕಿ ಹಣ ಹಾಕೋಕೆ ಸಾಧ್ಯವೇ ಇಲ್ಲ

ಆಹಾರ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜ್ಞಾನೇಂದ್ರ

ಬೆಂಗಳೂರು: ಅನ್ನಭಾಗ್ಯ ಯೋಜನೆಯಡಿ 5 ಕೆಜಿ ಅಕ್ಕಿ ಬದಲಿಗೆ ಫಲಾನುಭವಿಗಳಿಗೆ ನೀಡಲು ಉದ್ದೇಶಿಸಿರುವ ಹಣವನ್ನು ನಾಳೆಯಿಂದಲೇ ಖಾತೆಗೆ ಜಮೆ ಮಾಡಲು ಸಾಧ್ಯವಿಲ್ಲ. ಇನ್ನು 10–15 ದಿನಗಳ ಕಾಲ ಸಮಯ ಬೇಕಾಗುತ್ತದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕ ಜ್ಞಾನೇಂದ್ರ ಹೇಳಿದ್ದಾರೆ.


ಮೊದಲಿಗೆ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಸಮಗ್ರವಾಗಿ ದಾಖಲೆಗಳನ್ನು ಸಂಗ್ರಹಿಸಬೇಕಿದೆ. ನಮ್ಮಲ್ಲಿ ಒಟ್ಟು 1.78 ಕೋಟಿ ರೇಷನ್ ಕಾರ್ಡ್‌ಗಳಿವೆ. ಅವುಗಳಲ್ಲಿ 1.28 ಕೋಟಿ ಬಿಪಿಎಲ್ ಕಾರ್ಡ್‌ದಾರರ ಇದ್ದಾರೆ. ಈ ಪೈಕಿ 1.22 ಕೋಟಿ ಕಾರ್ಡ್‌ಗಳಲ್ಲಿ ಕನಿಷ್ಠ ಕುಟುಂಬದ ಒಬ್ಬರಾದರೂ ಬ್ಯಾಂಕ್ ಖಾತೆ ಹೊಂದಿದ್ದಾರೆ. ಇನ್ನುಳಿದ 6 ಲಕ್ಷ ಕಾರ್ಡ್‌ಗಳಲ್ಲಿ ಸಮಸ್ಯೆಯಾಗಿದೆ. ಕೆಲವರು ಬ್ಯಾಂಕ್ ಖಾತೆ ಹೊಂದಿದ್ದರೆ, ಆಧಾರ್ ಲಿಂಕ್ ಆಗಿಲ್ಲ. ಆಧಾರ್ ಲಿಂಕ್ ಆಗಿದ್ದರೆ ಬ್ಯಾಂಕ್ ಖಾತೆ ಆಕ್ಟೀವ್ ಆಗಿಲ್ಲ. ಈ ರೀತಿಯ ಸಮಸ್ಯೆಗಳು ಕಂಡುಬಂದಿವೆ. ಆದ್ದರಿಂದ ನಾಳೆಯೇ ಎಲ್ಲರ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡೋದು ಕಷ್ಟ ಎಂದು ತಿಳಿಸಿದ್ದಾರೆ.

ಇದೀಗ ಹೋಬಳಿ ಮಟ್ಟದಲ್ಲಿ ಹಾಗೂ ಪೋಸ್ಟ್ ಆಫೀಸ್‌ಗಳಲ್ಲೂ ಬ್ಯಾಂಕಿಂಗ್ ವ್ಯವಸ್ಥೆಯಿದೆ. ಫಲಾನುಭವಿಗಳು ಬೇಗನೇ ಖಾತೆ ಮಾಡಿಕೊಳ್ಳಬಹುದು. ಖಾತೆ ಹೊಂದಿದವರು ಶೀಘ್ರವೇ ಆಕ್ಟೀವ್ ಮಾಡಿಸಿಕೊಂಡರೆ, ಮುಂದಿನ ತಿಂಗಳಿಂದಲೇ ಹಣ ಜಮೆಯಾಗಲಿದೆ. ನಾಳೆ ಯೋಜನೆ ಜಾರಿಯಾದರೆ ಸಾಂಕೇತಿಕವಾಗಿ ಖಾತೆಗೆ ಹಣ ಹಾಕಬಹುದು ಎಂದು ಹೇಳಿದ್ದಾರೆ.

1.78 ಕೋಟಿ ರೇಷನ್ ಕಾರ್ಡ್‌ಗಳಲ್ಲಿ ನೊಂದಾಯಿತ ಅವುಗಳಲ್ಲಿ ಬ್ಯಾಂಕ್ ಖಾತೆ ಹೊಂದಿರುವವರನ್ನು ಪ್ರತ್ಯೇಕಿಸಬೇಕಾಗುತ್ತದೆ. ನಂತರ ಪ್ರೂಫ್ ದಾಖಲೆ ಇದೆಯೇ. ಆಧಾರ್ ಲಿಂಕ್ ಆಗಿರುವ ಖಾತೆಗಳು ನಿಷ್ಕ್ರಿಯವಾಗಿದ್ದಾ, ಎಲ್ಲವನ್ನೂ ನೋಡಬೇಕು. ಜೊತೆಗೆ ಆರ್ಥಿಕ ಸ್ಥಿತಿಯನ್ನೂ ಅಂದಾಜಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವಸಂತ ತಿಲಕಾ ಶತಕಮ್, ಶಿವೋಹಮ್ ಪುಸ್ತಕ ಬಿಡುಗಡೆ



ಮೈಸೂರು, ಜೂ.30 (ಎಸ್‌ಪಿಎನ್)– ವಿದ್ವಾನ್ ಡಾ.ಎಚ್.ವಿ. ನಾಗರಾಜ ರಾವ್ ವಿರಚಿತ 'ವಸಂತತಿಲಕಾ–ಶತಕಮ್' ಮತ್ತು 'ಸುಭಾಷಿತ–ಶತಕಮ್' ಹಾಗೂ ಲೇಖಕಿ ತಾರಾಮೂರ್ತಿಯವರ ಆಂಗ್ಲಾನುವಾದ 'ಶಿವೋಹಮ್' ಪುಸ್ತಕವನ್ನು ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಡಾ.ಟಿ.ಎನ್.ಪ್ರಭಾಕರ ಶುಕ್ರವಾರ ಬಿಡುಗಡೆ ಮಾಡಿದರು.

ಮೈಸೂರು ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು ಆವರಣದ ಮಾಧ್ವಮಾಂಗಣದಲ್ಲಿ ಮೈಸೂರು ಸಂಸ್ಕೃತಿ ಪ್ರತಿಷ್ಠಾನ ವತಿಯಿಂದ ಆಯೋಜಿಸಿದ್ದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

ವೀರ ಸಾವರ್ಕರ್ ಸೇರಿದಂತೆ ಹಲವು ಸ್ವಾತಂತ್ರ್ಯ ಹೋರಾಟಗಾರರು ಈ ನೆಲದಲ್ಲಿ ಹುಟ್ಟಿಬಂದಿದ್ದರು. ಅವರ ತ್ಯಾಗ–ಬಲಿದಾನವನ್ನು ಈ ದೇಶ ಮರೆತಿದೆ. ಇವರ ಸಾಧನೆಯನ್ನು ಬೇರೆ ದೇಶದಲ್ಲಿ ಮಾಡಿದ್ದರೆ, ಇಷ್ಟೊತ್ತಿಗೆ ಅವರನ್ನು ಅಲ್ಲಿನ ಜನ ತಲೆ ಮೇಲೆ ಹೊತ್ತು ಕೊಂಡು ಮೆರೆಸುತ್ತಿದ್ದರು. ಆದ್ಯಾಕೋ ನಮ್ಮ ಜನ, ಇವರನ್ನು ಮರೆತಿರುವುದು ಬೇಸರ ಸಂಗತಿ ಎಂದು ತಿಳಿಸಿದರು.

ವಿದ್ವಾನ್ ಡಾ.ಎಚ್.ವಿ.ನಾಗರಾಜ ರಾವ್ ರಚಿತ 'ವಸಂತತಿಲಕಾ–ಶತಕಮ್' 'ಸುಭಾಷಿತ–ಶತಕಮ್' ಪುಸ್ತಕಗಳು ಸಂಸ್ಕೃತ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಕೃತಿಯಾಗಿವೆ. ಈ ಪುಸ್ತಕಗಳನ್ನು ಖರೀದಿಸಿ ಪ್ರತಿಯೊಬ್ಬರು ಓದಬೇಕು. ಹಿರಿಯ ಸಾಹಿತಿ ನಾಗರಾಜ ರಾವ್ ಅವರು, ತಮ್ಮ ಅನುಭವದ ಮೂಲಕ ಈ ಪುಸ್ತಕವನ್ನು ರಚಿಸಿದ್ದು, ಒಂದೊಂದು ಪುಸ್ತಕವೂ ಉತ್ತಮ ಕೃತಿಯಾಗಿವೆ ಎಂದು ವಿಶ್ಲೇಷಿಸಿದರು.

'ಸುಭಾಷಿತ–ಶತಕವಮ್' ಕೃತಿಯಲ್ಲಿ ಛಂದಸ್ಸಿನಲ್ಲಿ 100ಕ್ಕೂ ಹೆಚ್ಚು ಸಂಸ್ಕೃತ ಪದ್ಯಗಳನ್ನೊಳಗೊಂಡಿದೆ. ಈ ಕೃತಿಯಲ್ಲಿರುವ 'ಸುಭಾಷಿತ' ರೂಪವಾದ ಪದ್ಯಗಳು ಸಮಕಾಲೀನ ರಾಜಕೀಯ, ಶೈಕ್ಷಣಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಅಂಶಗಳನ್ನು ಪ್ರತಿಪಾದಿಸುವುದರ ಜೊತೆಗೆ ಪರಾಮರ್ಶಿಸುವ ಕಾರ್ಯ ಇದಾಗಿದೆ ಎಂದು ತಿಳಿಸಿದರು.

'ವಸಂತತಿಲಕಾ ಶತಕಮ್' ಕೃತಿಯು ಸಂಸ್ಕೃತ ಸಾಹಿತ್ಯದ ಪ್ರಧಾನ ಅಂಗವಾದ ಕಾವ್ಯ ಶರೀರವಾದ ಶಬ್ದ–ಅರ್ಥಗಳು ಹಾಗೂ ಆತ್ಮಗಳೆಂದು ಪರಿಗಣಿಸಬಹುದಾಗಿದೆ ಧ್ವನಿ–ರೀತಿ–ರಸ ವಕ್ರೋಕ್ತಿ ವಿಮರ್ಶಿಸಿರುವ 'ವಸಂತತಿಲಕ' ಎಂಬ ಸುಂದರವಾದ ವೃತ್ತದಲ್ಲಿಯೇ 100 ಪದ್ಯಗಳನ್ನು ರಚಿಸಿದ್ದಾರೆ.

ಸಂಸ್ಕೃತದಲ್ಲಿ ಆಸಕ್ತಿ ಹೊಂದಿರುವ ಎಲ್ಲಾ ಸಂಶೋಧಕರು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯ ಓದುಗರಿಗೂ ಅತ್ಯುಪಯುಕ್ತ ಸಂಪನ್ಮೂಲಗಳಾಗಿರುತ್ತವೆ. ಈ ಲೇಖಕರಿಗೆ ಪ್ರಸ್ತುತ ವಿಷಯಗಳಲ್ಲಿರುವ ಅಪಾರವಾದ ಜ್ಞಾನ, ಅಪ್ರತಿಮ ಪಾಂಡಿತ್ಯ ಮತ್ತು ವಿಷಯದ ಮೇಲಿನ ಪ್ರೀತಿ–ಶ್ರದ್ಧೆಗಳು ಇದರಲ್ಲಿ ಅಡಕವಾಗಿದೆ ಎಂದರು.

ಲೇಖಕಿ ತಾರಾ ಮೂರ್ತಿ ಅನುವಾದಿತ 'ಶಿವೋಹಮ್' ಕೃತಿ ಶಿವನ ಕುರಿತು ಭಕ್ತಶ್ರೇಷ್ಠನಾದ ಪುಷ್ಪದಂತಕವಿ ವಿರಚಿತ 'ಶಿವಮಹಿಮ್ನ ಸ್ತೋತ್ರ'ಕ್ಕೆ ಅಮೂಲ್ಯವಾದ ಆಂಗ್ಲಭಾಷೆಗೆ ಅನುವಾದ ಮಾಡಿದ್ದು ಇದು ವೇದ ವಿಜ್ಞಾನವನ್ನು ಸೌಮ್ಯ ಮತ್ತು ಸ್ವರ್ಗೀಯವಾದ ರೀತಿಯಲ್ಲಿ ಹಂಚುವಂಥ ಕಾವ್ಯಾತ್ಮಕ ಗ್ರಂಥವಾಗಿದೆ. ಈ ಪುಸ್ತಕವು ಸಮಾಜದಲ್ಲಿ ಸಾರ್ಥಕ ಜೀವನ ನಡೆಸಿ ಆಧ್ಯಾತ್ಮಿಕ ಸಾಧನೆ ಮತ್ತು ಚಿಂತನೆಯನ್ನು ಹೇಗೆ ಅನುಸರಿಸಬೇಕೆಂಬುದನ್ನು ಒತ್ತಿ ಹೇಳುತ್ತದೆ. ಇದು ಅಧ್ಯಾತ್ಮಿಕ ಅನ್ವೇಷಕರಿಗೆ ಮತ್ತು ತತ್ತ್ವಶಾಸ್ತ್ರ ಜಿಜ್ಞಾಸುಗಳಿಗೆ ಜ್ಞಾನಸಂಪನ್ಮೂಲವಾದ ಪುಸ್ತಕ ಎಂದರೆ ತಪ್ಪಾಗಲಾರದು ಎಂದು ಹೇಳಿದರು.

ಈ ವೇಳೆ ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತ ವಿದ್ವಾನ್.ಎಚ್.ವಿ.ನಾಗರಾಜರಾವ್, ಲೇಖಕಿ ತಾರಾ ಮೂರ್ತಿ, ಮಹಾರಾಜ ಸರ್ಕಾರಿ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಡಾ.ಪಿ.ಸತ್ಯನಾರಾಯಣ್, ಉಪನ್ಯಾಸಕರಾದ ಡಾ.ಗುರುಪ್ರಸಾದ್, ಡಾ.ಎಂ.ವಿ.ವಿಶ್ವನಾಥ್, ಡಾ.ಎಂ.ಎ.ಆಳ್ವಾರ್ ಉಪಸ್ಥಿತರಿದ್ದರು.

ಪಾಕಿಸ್ತಾನದ ಪ್ರಸಿದ್ಧ ಯುವ ಸ್ನೂಕರ್ ಆಟಗಾರ ಮಜೀದ್ ಅಲಿ ಆತ್ಮಹತ್ಯೆ

ಕರಾಚಿ: ಪಾಕಿಸ್ತಾನದ ಖ್ಯಾತ ಸ್ನೂಕರ್ ಆಟಗಾರ ಹಾಗೂ ಏಷ್ಯನ್ ಅಂಡರ್–21 ಸ್ಪರ್ಧೆಯಲ್ಲಿ ಬೆಳ್ಳಿ ಪದಕ ವಿಜೇತ ಮಜೀದ್ ಅಲಿ ಪಂಜಾಬ್ ನ ಫೈಸಲಾಬಾದ್ ಬಳಿಯ ತನ್ನ ಹುಟ್ಟೂರಿನಲ್ಲಿ ಗುರುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಲಿಗೆ 28 ವರ್ಷ ವಯಸ್ಸಾಗಿತ್ತು. ಖಿನ್ನತೆಯಿಂದ ಬಳಲುತ್ತಿದ್ದ ಅಲಿ ಮರ ಕಡಿಯುವ ಯಂತ್ರದಿಂದ ತನ್ನ ಜೀವನವನ್ನು ಕೊನೆಗೊಳಿಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಮಜೀದ್ ಅಲಿ ಹಲವಾರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಪಾಕಿಸ್ತಾನವನ್ನು ಪ್ರತಿನಿಧಿಸಿದರು. ರಾಷ್ಟ್ರೀಯ ಮಟ್ಟದಲ್ಲಿ ಅಗ್ರ ಶ್ರೇಯಾಂಕದ ಆಟಗಾರರಾಗಿದ್ದರು. ಒಂದು ತಿಂಗಳಲ್ಲಿ ಸಾವನ್ನಪ್ಪಿದ ಎರಡನೇ ಸ್ನೂಕರ್ ಆಟಗಾರ ಮಜೀದ್ ಅಲಿ. ಕಳೆದ ತಿಂಗಳು, ಅಂತರರಾಷ್ಟ್ರೀಯ ಸ್ನೂಕರ್ ಆಟಗಾರ ಮುಹಮ್ಮದ್ ಬಿಲಾಲ್ ಹೃದಯ ಸ್ತಂಭನದಿಂದ ನಿಧನರಾಗಿದ್ದರು. ಮಜೀದ್ ತನ್ನ ಹದಿಹರೆಯದಿಂದಲೂ ಖಿನ್ನತೆಯಿಂದ ಬಳಲುತ್ತಿದ್ದ. ಇದು ನಮಗೆ ಭಯಾನಕ ಸಂಗತಿಯಾಗಿದೆ. ಏಕೆಂದರೆ ಅತ ತನ್ನ ಪ್ರಾಣವನ್ನು ಕಳೆದುಕೊಳ್ಳುತ್ತಾನೆ ಎಂದು ನಾವು ಎಂದಿಗೂ ನಿರೀಕ್ಷಿಸಿರಲಿಲ್ಲಎಂದು ಸಹೋದರ ಉಮರ್ ಹೇಳಿದರು.

ಸಿಎಂ ಗೃಹ ಕಚೇರಿಯಲ್ಲಿ ಹೈಡ್ರಾಮ: ರಾಜೀನಾಮೆ ವಿಷಯದಲ್ಲಿ ಮಣಿಪುರ ಸಿಎಂ ಯು–ಟರ್ನ್!

ಗುವಾಹಟಿ: ಮಣಿಪುರದಲ್ಲಿ ಹಿಂಸಾಚಾರ ನಿಯಂತ್ರಣಕ್ಕೆ ಬಾರದ ಹಿನ್ನೆಲೆಯಲ್ಲಿ ಸಿಎಂ ಬಿರೇನ್ ಸಿಂಗ್ ರಾಜೀನಾಮೆ ನೀಡಲಿದ್ದಾರೆ ಎಂಬ ವರದಿಗಳ ಬೆನ್ನಲ್ಲೇ ರಾಜೀನಾಮೆ ನೀಡುವುದಿಲ್ಲ ಎಂದು ಸಿಎಂ ಯು–ಟರ್ನ್ ಹೊಡೆದಿದ್ದಾರೆ. ಮಣಿಪುರ ಸಿಎಂ ಗೃಹ ಕಚೇರಿಯ ಹೊರಭಾಗದಲ್ಲಿ ಹೈಡ್ರಾಮ ನಡೆದಿದ್ದು, ನೂರಾರು ಮಹಿಳೆಯರು ರಸ್ತೆ ತಡೆದಿದ್ದಾರೆ.

ಮಧ್ಯಾಹ್ನ 1 ಗಂಟೆಗೆ ರಾಜಭವನಕ್ಕೆ ತೆರಳಬೇಕಿದ್ದ ಸಿಎಂ ಬಿರೇನ್ ಕಾರ್ಯಕ್ರಮ ನಂತರ 3 ಗಂಟೆಗೆ ಮುಂದೂಡಲ್ಪಟ್ಟಿತ್ತು. ಮಧ್ಯಾಹ್ನ 2:20 ಗಂಟೆ ವೇಳೆಗೆ ಮನೆಯಿಂದ ಹೊರಬಂದ ಬೆನ್ನಲ್ಲೇ ನೂರಾರು ಮಹಿಳೆಯರು ಅವರಿಗೆ ರಸ್ತೆ ಅಡ್ಡಗಟ್ಟಿ, ಬೆಂಗಾವಲುಪಡೆಯ ವಾಹನಗಳನ್ನು ರಾಜಭವನ ತಲುಪುವುದರಿಂದ ತಡೆಗಟ್ಟಿ, ರಾಜೀನಾಮೆ ನೀಡದಂತೆ ಸಿಂಗ್ ಅವರನ್ನು ಒತ್ತಾಯಿಸಿ, ಅವರ ಪರ ಬೆಂಬಲ ಘೋಷಣೆಗಳನ್ನು ಕೂಗಿದರು. ಈ ಬಳಿಕ ನಂತರ ಸಿಂಗ್ ಅವರು ರಾಜೀನಾಮೆ ನೀಡದೆ ತಮ್ಮ ನಿವಾಸಕ್ಕೆ ಮರಳಿದರು.

ಸ್ವಲ್ಪ ಸಮಯದ ನಂತರ. ಕೆಲವು ಸಚಿವರು ಹೊರಬಂದು ಸಿಂಗ್ ಅವರ ರಾಜೀನಾಮೆ ಪತ್ರವನ್ನು ಓದಿದರು. ಪತ್ರವನ್ನು ನೀಡಿದ ನಂತರ ಮಹಿಳೆಯರ ಒಂದು ವಿಭಾಗವು ಅದನ್ನು ಹರಿದು ಹಾಕಿತು. ನಂತರ, ಸಿಂಗ್ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡದೇ ಇರಲು ನಿರ್ಧರಿಸಿರುವುದಾಗಿ ಬಿರೇನ್ ಸಿಂಗ್ ಘೋಷಿಸಿದ್ದಾರೆ. ಆದರೆ ಬಿರೇನ್ ಸಿಂಗ್ ತಮ್ಮ ಖುರ್ಚಿ ಉಳಿಸಿಕೊಳ್ಳುವುದಕ್ಕಾಗಿ ಈ ನಾಟಕವಾಡಿದ್ದಾರೆ ಎಂಬ ಟೀಕೆಗಳೂ ವ್ಯಕ್ತವಾಗತೊಡಗಿವೆ.

ಮೈಸೂರು ಮಿತ್ರ 44 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ನಿರಂತರ ಅಪಘಾತ ಪ್ರಕರಣ ಹಿನ್ನೆಲೆ

ಮಂಡ್ಯ ವಿಭಾಗದಲ್ಲಿ ಎಡಿಜಿಪಿ ಅಲೋಕ್‌ಕುಮಾರ್ ಪರಿಶೀಲನೆ

ನಿಡಘಟ್ಟದಿಂದ ಶ್ರೀರಂಗಪಟ್ಟಣದವರೆಗೂ ಪರಿಶೀಲನೆ, ಸಾರ್ವಜನಿಕರಿಂದ ದೂರುಗಳ ಸುರಿಮಳೆ

ಮಂಡ್ಯ, ಜೂ.30– ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್‌ವೇ ಉದ್ಘಾಟನೆ ಬಳಿಕ ನೂರಾರು ಅಪಘಾತಗಳು ಸಂಭವಿಸಿದ ಹಿನ್ನೆಲೆಯಲ್ಲಿ ಎಡಿಜಿಪಿ ಅಲೋಕ್ ಕುಮಾರ್ ಶುಕ್ರವಾರ ಮಂಡ್ಯ ಜಿಲ್ಲೆಯ ಗಡಿ ಗ್ರಾಮ ಮದ್ದೂರು ತಾಲೂಕಿನ ನಿಡಘಟ್ಟದಿಂದ ಶ್ರೀರಂಗಪಟ್ಟಣದವರೆಗೆ ಹೆದ್ದಾರಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಸಾರ್ವಜನಿಕರು ಸರಣಿ ದೂರುಗಳನ್ನು ನೀಡಿದರು.

ಶುಕ್ರವಾರ ಮಧ್ಯಾಹ್ನ 12.30ರ ಸಮಯದಲ್ಲಿ ಮದ್ದೂರು ತಾಲೂಕಿನ ನಿಡಘಟ್ಟ ಗ್ರಾಮಕ್ಕೆ ಆಗಮಿಸಿದ ಎಡಿಜಿಪಿ ಅಲೋಕ್ ಕುಮಾರ್, ಬೆಂಗಳೂರು– ಮೈಸೂರು ಎಕ್ಸ್‌ಪ್ರೆಸ್ ವೇ ಪರಿಶೀಲನೆ ಆರಂಭಿಸಿದರು. ನಿಡಘಟ್ಟ ಬಳಿ ಈವರೆಗೆ ಹಲವು ಅಪಘಾತ ಪ್ರಕರಣಗಳು ಸಂಭವಿಸಿರುವುದರಿಂದ ಅಲ್ಲಿಂದಲೇ ಪರಿಶೀಲನೆ ಆರಂಭವಾಯಿತು. ನಿಡಘಟ್ಟ ಗ್ರಾಮದ ಫ್ಲೈ ಓವರ್‌ನಲ್ಲಿ ನಿಂತು ಪರಿಶೀಲಿಸುವಾಗ ಅಲೋಕ್ ಕುಮಾರ್ ಅವರಿಗೆ ಹತ್ತಾರು ಗ್ರಾಮಸ್ಥರು ದೂರುಗಳ ಸರಮಾಲೆಯನ್ನೇ ನೀಡಿದರು.

ಗ್ರಾಮಸ್ಥ ಸುನೀಲ್, ಫ್ಲೈ ಓವರ್ ಕೆಳಗೆ ಸರ್ವೀಸ್ ರಸ್ತೆಗೆ ಅಂಡರ್ ಪಾಸ್ ನಿರ್ಮಿಸಿದ್ದಾರೆ. ಆದರೆ ಇಲ್ಲಿ ಸಮರ್ಪಕ ಲೈಟ್ ವ್ಯವಸ್ಥೆ ಇಲ್ಲ. ಫುಟ್‌ಪಾತ್ ಸಮಸ್ಯೆ ಇದೆ. ನಿಡಘಟ್ಟ ಗ್ರಾಮದ ಅಂಡರ್‌ಪಾಸ್ ಕನಿಷ್ಟ ನೂರಕ್ಕೂ ಹೆಚ್ಚು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗವಾಗಿದ್ದು, ಇದು ಅವೈಜ್ಞಾನಿಕ ಕಾಮಗಾರಿಯಾಗಿದೆ. ಜೊತೆಗೆ ಫ್ಲೈ ಓವರ್‌ನಲ್ಲಿ ಕಲ್ಲು– ಮಣ್ಣು ಹರಡಿದ್ದು, ಇದನ್ನು ತೆರವುಗೊಳಿಸುವ ಕೆಲಸವನ್ನು ಪ್ರಾಧಿಕಾರ ಮಾಡುತ್ತಿಲ್ಲ. ಈ ಬಗ್ಗೆ ಹೆದ್ದಾರಿ ಪ್ರಾಧಿಕಾರಕ್ಕೆ ಎಷ್ಟೇ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇನ್ನು ಇದಕ್ಕೆ ಧನಿಗೂಡಿಸಿದ ಗ್ರಾಮದ ಹಿರಿಯ ನಾಗರಿಕರು, ಸಾರ್ವಜನಿಕರು ಓಡಾಡಲು ಬಹಳ ಸಮಸ್ಯೆಯಾಗುತ್ತಿದೆ. ಹೆದ್ದಾರಿ ಪ್ರಾಧಿಕಾರಕ್ಕೆ ನಮ್ಮ ಸಮಸ್ಯೆ ಬಗೆಹರಿಸುವಂತೆ ಹೇಳಿ ಎಂದು ಅಲೋಕ್‌ಕುಮಾರ್‌ಗೆ ಮನವಿ ಮಾಡಿದರು.

ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅಲೋಕ್ ಕುಮಾರ್: ಸಾರ್ವಜನಿಕರ ನಿರಂತರ ದೂರಿನಿಂದ ಹೈರಾಣಾದ ಅಲೋಕ್‌ಕುಮಾರ್, ರಸ್ತೆ ಅಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಸೇರಿದಂತೆ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಂಡರು. ಸಾರ್ವಜನಿಕರು ಇಷ್ಟು ದೂರು ಕೊಟ್ಟರೂ ಅವರಿಗೆ ಏಕೆ ಸ್ಪಂದಿಸಿಲ್ಲ? ಅಪಘಾತಗಳು ಈ ಪರಿ ನಡೆಯುತ್ತಿವೆ. ಆದರೂ ಕೈಕಟ್ಟಿ ಏಕೆ ಕುಳಿತಿದ್ದೀರಿ. ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಲು ನಿಮ್ಮಿಂದ ಸಾಧ್ಯವಿಲ್ಲವೇ? ಎಂದು ಪ್ರಶ್ನಿಸಿದರು.

ಅಲೋಕ್ ಕುಮಾರ್ ತರಾಟೆಗೆ ಬೆಚ್ಚಿದ ಪ್ರಾಧಿಕಾರದ ಸಿಬ್ಬಂದಿ ನಾವು ಈ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಅವರು ಅನುಮತಿ ನೀಡಿದರೆ, ಸಣ್ಣಪುಟ್ಟ ಲೋಪದೋಷಗಳನ್ನು ಸರಿಪಡಿಸಲು ಸಿದ್ಧರಿದ್ದೇವೆ ಎಂದು ಉತ್ತರಿಸುವಾಗ ಮೇಲಾಧಿಕಾರಿಗಳಿಗೆ ಸ್ಥಳದಲ್ಲೇ ಮೊಬೈಲ್‌ನಲ್ಲಿ ಮಾತನಾಡಿದ ಅಲೋಕ್ ಕುಮಾರ್, ಸಮಸ್ಯೆಗಳ ಬಗ್ಗೆ ವಿವರಿಸಿದರು. ಕೂಡಲೇ ಸಣ್ಣಪುಟ್ಟ ದೋಷವಿರುವ ಕಾಮಗಾರಿಗಳನ್ನು ಸರಿಪಡಿಸುವಂತೆ ಸೂಚಿಸಿದರು.

ಮಳೆ ನೀರಿನ ಸಮಸ್ಯೆ ಬಗೆಹರಿಸುವಂತೆ ಮನವಿ: ಬಳಿಕ ರುದ್ರಾಕ್ಷಿಪುರದ ಬಳಿ ಫ್ಲೈ ಓವರ್‌ನಲ್ಲಿ ನೀರು ತುಂಬಿಕೊಳ್ಳುವುದರಿಂದ ರಸ್ತೆಯಲ್ಲಿ ಸಂಚರಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ಅಂಡರ್ ಪಾಸ್‌ನಲ್ಲೂ ನೀರು ನಿಲ್ಲುತ್ತದೆ ಎಂದು ಗ್ರಾಮಸ್ಥರು ದೂರು ನೀಡಿದರು. ಈ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದ ಎಡಿಜಿಪಿ, ರಸ್ತೆ ಕಾಮಗಾರಿ ಮುಗಿದಿರುವುದರಿಂದ ಇದೀಗ ಮಳೆ ನೀರು ಸಮರ್ಪಕವಾಗಿ ಹೋಗಲು ಫ್ಲೈ ಓವರ್‌ನ ಅಲ್ಲಲ್ಲಿ ಪೈಪ್‌ಗಳನ್ನು ಅಳವಡಿಸಿ, ರಸ್ತೆಯಲ್ಲೇ ನೀರು ಭರ್ತಿಯಾದರೆ ಅಪಘಾತವಾಗುವ ಸಾಧ್ಯತೆ ಇರುತ್ತದೆ. ಪೈಪ್ ಮೂಲಕ ನೀರು ಸರಾಗವಾಗಿ ಹೊರ ಹೋದರೆ, ಫ್ಲೈಓವರ್ ನಲ್ಲಿ ಸಂಚರಿಸುವವರಿಗೆ ಜೊತೆಗೆ ಸರ್ವೀಸ್ ರಸ್ತೆಯಲ್ಲಿ ಸಂಚರಿಸುವವರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಪ್ರಾಧಿಕಾರದ ಅಧಿಕಾರಿಗಳಿಗೆ ಸಲಹೆ ನೀಡಿದರು.

ಅಪಘಾತ ಸ್ಥಳ ಪರಿಶೀಲನೆ: ರುದ್ರಾಕ್ಷಿಪುರದಿಂದ ಮದ್ದೂರು ಪಟ್ಟಣದ ಬಸ್ ನಿಲ್ದಾಣದ ಬಳಿಯ ಫ್ಲೈಓವರ್ ಬಳಿಗೆ ಆಗಮಿಸಿದ ಅಲೋಕ್‌ಕುಮಾರ್, ಈ ಸ್ಥಳದಲ್ಲಿ ಇತ್ತೀಚೆಗೆ ನಡೆದ ಸರಣಿ ಅಪಘಾತಗಳ ಸ್ಥಳ ಪರಿಶೀಲಿಸಿದರು. ಅಪಘಾತ ವೇಳೆ ರಕ್ತದ ಕಲೆಗಳು ತಡೆಗೋಡೆಗೆ ಅಂಟಿರುವುದನ್ನು ವೀಕ್ಷಿಸಿದರು. ಮದ್ದೂರು ಸಂಚಾರ ವಿಭಾಗದ ಪಿಎಸ್‌ಐ ಅಯ್ಯನ್‌ಗೌಡ ಮದ್ದೂರಿನ ಎಕ್ಸ್‌ಪ್ರೆಸ್ ವೇನಲ್ಲಿ ಆಗಿರುವ ಅಪಘಾತದ ಬಗ್ಗೆ ಎಡಿಜಿಪಿಗೆ ವಿವರಣೆ ನೀಡಿದರು. ಇದಾದ ನಂತರ ಗೆಜ್ಜಲಗೆರೆ ಗ್ರಾಮದ ಬಳಿ ಪರಿಶೀಲಿಸಿದ ಅಲೋಕ್ ಕುಮಾರ್, ಇಲ್ಲಿಯೂ ಸರಣಿ ಅಪಘಾತಗಳು ಸಂಭವಿಸುತ್ತಿರುವುದಕ್ಕೆ ಏನು ಕಾರಣ ಎಂಬ ಬಗ್ಗೆ ಪೊಲೀಸರು ಹಾಗೂ ಪ್ರಾಧಿಕಾರದ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಂಡರು.

ಪುಂಡರಿಂದ ಮೊಬೈಲ್ ಬಾರ್‌ಗಳ ಬಗ್ಗೆ ದೂರು: ಮದ್ದೂರು ಪಟ್ಟಣದ ಬಸ್ ನಿಲ್ದಾಣದ ಫ್ಲೈ ಓವರ್ ಬಳಿ ಎಡಿಜಿಪಿಗೆ ದೂರು ನೀಡಿದ ಬಳಿಕ ಮಾತನಾಡಿದ ಸ್ಥಳೀಯರು, ಈ ಭಾಗದಲ್ಲಿ ನಿಂತಿದ್ದ ವಾಹನಗಳಿಗೆ ಅತೀ ಹೆಚ್ಚು ವಾಹನಗಳು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿವೆ. ನೂತನ ಹೆದ್ದಾರಿ ನಿರ್ಮಾಣವಾಗಿರುವುದು ನಮಗೆ ಸಂತಸ ತಂದಿದ್ದರೂ ಅಪಘಾತ ಪ್ರಕರಣಗಳು ಬೇಸರವನ್ನುಂಟು ಮಾಡಿದೆ. ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳು ನಿಲ್ಲದಂತೆ ಸ್ಥಳೀಯ ಪೊಲೀಸರು ಕ್ರಮ ವಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ರಸ್ತೆಯಲ್ಲಿ ಸಂಚರಿಸುವ ಕೆಲ ಪುಂಡರು ಹೆದ್ದಾರಿಯನ್ನು ಮೊಬೈಲ್ ಬಾರ್‌ಗಳನ್ನಾಗಿ ಮಾಡಿಕೊಂಡಿದ್ದು, ರಸ್ತೆಯಲ್ಲೇ ವಾಹನಗಳನ್ನು ನಿಲ್ಲಿಸಿಕೊಂಡು ಡಿಜೆ ಹಾಕಿಕೊಂಡು ನೃತ್ಯ ಮಾಡುತ್ತಾ ಮದ್ಯಪಾನ ಮಾಡುವುದು ಹೆಚ್ಚಾಗಿದೆ. ಈ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಹನಕೆರೆ, ಇಂಡುವಾಳು ಬಳಿ ರಸ್ತೆ ವೀಕ್ಷಣೆ: ಮಂಡ್ಯ ತಾಲೂಕಿನ ಹನಕೆರೆ ಅಂಡರ್ ಪಾಸ್ ಸಮಸ್ಯೆ ಬಗ್ಗೆ ಪ್ರತಿಭಟನೆಗಳು ನಡೆದಿದ್ದ ಹಿನ್ನೆಲೆಯಲ್ಲಿ ಎಡಿಜಿಪಿ ಅಲೋಕ್‌ಕುಮಾರ್ ಹನಕೆರೆ ಅಂಡರ್‌ಪಾಸ್ ಪರಿಶೀಲನೆ ನಡೆಸಿದರು. ಬಳಿಕ ಮಂಡ್ಯ ತಾಲೂಕಿನ ಇಂಡುವಾಳು ಬಳಿ ಅವೈಜ್ಞಾನಿಕ ಕಾಮಗಾರಿ ಆರೋಪ ಕೇಳಿ ಬಂದಿದ್ದ ಹಿನ್ನೆಲೆಯಲ್ಲಿ ಅದನ್ನು ಪರಿಶೀಲಿಸಿ, ಬಳಿಕ ಶ್ರೀರಂಗಪಟ್ಟಣದ ಗಣಂಗೂರು ಬಳಿಯ ಟೋಲ್ ಕೇಂದ್ರ ಪರಿಶೀಲಿಸಿ, ನಂತರ ಮೈಸೂರು ಕಡೆಗೆ ತೆರಳಿದರು.

ಇದಕ್ಕೂ ಮುನ್ನ ಹನಕೆರೆ ಬಳಿ ಸ್ಥಳೀಯ ಪೊಲೀಸರು ಹಾಗೂ ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿಯೊಂದಿಗೆ ಮಾತನಾಡಿದ ಅವರು, ಕೆಲ ತಪ್ಪುಗಳಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಜನರು ನಿಮ್ಮ ಜೊತೆಗೆ ಪೊಲೀಸ್ ಇಲಾಖೆಗೆ ಬೈಯ್ಯುತ್ತಾರೆ. ಆಗಿರುವ ತಪ್ಪುಗಳನ್ನು ಶೀಘ್ರವೇ ಸರಿಪಡಿಸಬೇಕು. ತಿರುವು ಇರುವ ಕಡೆ ಸಿಗ್ನಲ್ ಫಲಕ ಹಾಕಬೇಕು. ಸರ್ವಿಸ್ ರಸ್ತೆಯಲ್ಲಿ ಲೋಪಗಳನ್ನು ಸರಿ ಪಡಿಸಿ. ಅಪಘಾತ ಪ್ರಕರಣಗಳನ್ನು ತಡೆಯುವುದು ಹೆದ್ದಾರಿ ಪ್ರಾಧಿಕಾರ ಹಾಗೂ ಪೊಲೀಸ್ ಇಲಾಖೆಯ ಕರ್ತವ್ಯ ಎಂದು ಸೂಚನೆ ನೀಡಿದರು.

ರಸ್ತೆ ಪರಿಶೀಲನೆ ಸಂದರ್ಭ ಎಸ್ಪಿ ಎನ್.ಯತೀಶ್, ಎಎಸ್ಪಿ ತಿಮ್ಮಯ್ಯ, ಮದ್ದೂರು ಸಿಪಿಐ ಸಂತೋಷ್‌ಕುಮಾರ್, ಮದ್ದೂರು ಸಂಚಾರಿ ಠಾಣೆ ಪಿಎಸ್‌ಐ ಅಯ್ಯನ್‌ಗೌಡ, ರಸ್ತೆ ಅಭಿವೃದ್ಧಿ ಪ್ರಾಧಿಕಾರದ ಯೋಜನಾ ನಿರ್ದೇಶಕ ರಾಹುಲ್ ಸೇರಿದಂತೆ ಪೊಲೀಸ್ ಹಾಗೂ ಪ್ರಾಧಿಕಾರದ ಸಿಬ್ಬಂದಿ ಭಾಗವಹಿಸಿದ್ದರು.



ರುದ್ರಾಕ್ಷಿಪುರ ಗೇಟ್‌ನಲ್ಲಿ ಅಳಲು ತೋಡಿಕೊಂಡ ವೃದ್ಧೆ

ನಿಡಘಟ್ಟ ಬಳಿಕ ಮದ್ದೂರು ತಾಲೂಕಿನ ರುದ್ರಾಕ್ಷಿಪುರ ಗೇಟ್‌ಗೆ ಆಗಮಿಸಿದ ಅಲೋಕ್‌ಕುಮಾರ್, ಫ್ಲೈ ಓವರ್‌ನಲ್ಲಿ ನಿಂತು ಅಂಡರ್‌ಪಾಸ್ ವೀಕ್ಷಿಸುವಾಗ ಗ್ರಾಮಸ್ಥರು, ಅವರಿಗೆ ದೂರು ನೀಡಲು ಮುಂದಾದರು. ಗ್ರಾಮದ ವೃದ್ಧೆಯೊಬ್ಬರು ಮಾತನಾಡುತ್ತಾ, ಇಲ್ಲಿನ ಅವೈಜ್ಞಾನಿಕ ಕಾಮಗಾರಿಯಿಂದ ಸರ್ವೀಸ್ ರಸ್ತೆಯ ಅಂಡರ್‌ಪಾಸ್ ಬಳಿ ಬಹಳ ಅಪಘಾತವಾಗುತ್ತಿವೆ. ತಿರುವಿನ ಬಳಿ ರಸ್ತೆ ಡುಬ್ಬಗಳನ್ನು ಹಾಕದ ಪರಿಣಾಮ ಅಪಘಾತವಾಗಿ ವಾಹನಗಳು ರಸ್ತೆ ಪಕ್ಕದಲ್ಲೇ ಇರುವ ನಮ್ಮ ಮನೆ ಬಳಿಗೆ ನುಗ್ಗಿದ ಉದಾಹರಣೆಗಳಿವೆ. ಇದರಿಂದ ನಮ್ಮ ಕುಟುಂಬಕ್ಕೆ ಹೆಚ್ಚು ಕಡಿಮೆಯಾದರೆ ಯಾರು ಹೊಣೆ ಎಂದು ಪ್ರಶ್ನಿಸಿದ ಅವರು, ಈ ಬಗ್ಗೆ ಪ್ರಾಧಿಕಾರ ಯಾವ ಕ್ರಮವನ್ನು ಕೈಗೊಂಡಿಲ್ಲ. ಅಪಘಾತ ತಡೆಯುವ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಸೂಚನೆ ನೀಡಿ ಎಂದು ಅಲೋಕ್‌ಕುಮಾರ್‌ಗೆ ಕೈ ಮುಗಿದು ಅಳಲು ತೋಡಿಕೊಂಡರು.

ಗ್ರಾಮದ ಹಿರಿಯ ಮುಖಂಡ ರವಿಕಿರಣ್ ಮಾತನಾಡಿ, ಅಂಡರ್ ಪಾಸ್ ಬಳಿ ಪ್ರಾಧಿಕಾರ ಸರ್ವೀಸ್ ರಸ್ತೆಯಲ್ಲಿ ಅರ್ಧ ಫುಟ್‌ಪಾತ್ ನಿರ್ಮಿಸಿ, ಇನ್ನರ್ಧವನ್ನು ಹಾಗೆಯೇ ಬಿಟ್ಟಿದ್ದಾರೆ. ಪ್ರಾಧಿಕಾರಕ್ಕೆ ಇಲ್ಲಿನ ಜಮೀನು ಮಾಲೀಕರು ಜಾಗವನ್ನು ಬಿಟ್ಟುಕೊಟ್ಟಿದ್ದರೂ ಇದುವರೆಗೆ ಫುಟ್‌ಪಾತ್ ನಿರ್ಮಿಸಿಲ್ಲ. ಇಲ್ಲಿನ ಅಂಡರ್‌ಪಾಸ್ ಬಳಿ ನಿತ್ಯ ನೂರಾರು ಮಕ್ಕಳು ಬಸ್ ಹತ್ತುವುದು ಇಳಿಯುವುದು ಮಾಡುತ್ತಾರೆ. ಫುಟ್‌ಪಾತ್ ಇಲ್ಲದ ಕಾರಣ ರಸ್ತೆಯಲ್ಲೇ ಮಕ್ಕಳು ಹಾಗೂ ಸಾರ್ವಜನಿರಕು ನಡೆದುಕೊಂಡು ಬರಬೇಕು. ಹಲವು ಬಾರಿ ಅಪಘಾತಗಳು ಸಹ ಆಗಿ ಮಕ್ಕಳು ಗಾಯಗೊಂಡಿದ್ದಾರೆ. ಇದಕ್ಕೆಲ್ಲಾ ಯಾರು ಹೊಣೆ ಎಂದು ಪ್ರಶ್ನಿಸಿದ ಅವರು, ಕೆಲವಡೆಗೆ ಸರ್ವೀಸ್ ರಸ್ತೆ ಕಾಮಗಾರಿ ಪೂರ್ಣಗೊಳಿಸಿಲ್ಲ ಎಂದು ದೂರಿದರು.



ಮಾಜಿ ರೌಡಿಶೀಟರ್ ಹತ್ಯೆ ಪ್ರಕರಣ: ಮತ್ತೋರ್ವ ಆರೋಪಿ ಬಂಧನ

ಶ್ರೀರಂಗಪಟ್ಟಣ, ಜೂ.30– ಮಾಜಿ ರೌಡಿಶೀಟರ್ ಸುಧೀರ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿದ್ದ ಮತ್ತೋರ್ವ ಆರೋಪಿಯನ್ನು ಬಂಧಿಸುವಲ್ಲಿ ಕೆಆರ್‌ಎಸ್ ಪೊಲೀಸರು ಯಶಸ್ವಿಯಾಗಿದ್ದಾರೆ.



ಪೂರ್ಣಚಂದ್ರ

ಪೂರ್ಣಚಂದ್ರ(31) ಬಂಧಿತ ಆರೋಪಿ. ಈತ ಹಾಗೂ ಇನ್ನುಳಿದ ಮೂವರು ಆರೋಪಿಗಳಾದ ಚಲುವರಾಜು, ಕುಮಾರ್, ವಿನೋದ್ ಅಲಿಯಾಸ್ ಡಿಸ್ಕೊ ವಿನಿ ಗುರುವಾರ ಮಧ್ಯಾಹ್ನ ಕ್ಷುಲ್ಲಕ ಕಾರಣಕ್ಕೆ ತಮ್ಮ ಸ್ನೇಹಿತನಾದ ಹುಲಿಕೆರೆ ಗ್ರಾಮದ ಮಾಜಿ ರೌಡಿಶೀಟರ್ ಸುಧೀರ್‌ನನ್ನು ಹತ್ಯೆ ಮಾಡಿ ಪರಾರಿಯಾಗಿದ್ದರು. ಈ ವೇಳೆ ಕಾರ್ಯ ಪ್ರವೃತ್ತರಾದ ಪೊಲೀಸರು ಗುರುವಾರವೇ ಚಲುವರಾಜು, ಕುಮಾರ್, ವಿನೋದ್‌ನನ್ನು ಬಂಧಿಸಿದ್ದರು. ತಲೆಮರೆಸಿಕೊಂಡಿದ್ದ ಪೂರ್ಣಚಂದ್ರನಿಗಾಗಿ ಹುಡುಕಾಟ ನಡೆಸಿದ್ದ ಪೊಲೀಸರು ಶುಕ್ರವಾರ ಬೆಳಗ್ಗೆ ಮೈಸೂರು ಮುಖ್ಯ ಬಸ್ ನಿಲ್ದಾಣದಲ್ಲಿ ಆತನನ್ನು ಬಂಧಿಸಿದ್ದಾರೆ. ಇವರಿಂದ ಕೃತ್ಯಕ್ಕೆ ಬಳಸಿದ್ದ ಲಾಂಗ್, ಬೈಕ್ ವಶಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಕಾಮಗಾರಿ ಮುಗಿಯುವವರೆಗೆ

ಶ್ರೀರಂಗಪಟ್ಟಣ ಬಳಿ ಟೋಲ್ ಶುಲ್ಕ ನಿರ್ಬಂಧಕ್ಕೆ ಶಾಸಕತ್ರಯರ ಒತ್ತಾಯ

ಮಂಡ್ಯ, ಜೂ.30– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಡುವಿನ ಶ್ರೀರಂಗಪಟ್ಟಣ ಬಳಿ ಟೋಲ್ ಶುಲ್ಕ ವಿಧಿಸಿರುವ ಸಂಬಂಧ ರಾಜ್ಯ ಸರ್ಕಾರ ಮಧ್ಯ ಪ್ರವೇಶಿಸಿ, ಇದಕ್ಕೆ ತಡೆ ನೀಡಬೇಕು. ಸರ್ವಿಸ್ ರಸ್ತೆಗಳು ಇನ್ನಿತರ ಕಾಮಗಾರಿಗಳು ಪೂರ್ಣಗೊಳ್ಳುವವರೆಗೆ ಟೋಲ್ ಸಂಗ್ರಹ ಮಾಡದಂತೆ ತಡೆ ನೀಡಲು ಕೇಂದ್ರ ಸರ್ಕಾರದ ಗಮನ ಸೆಳೆಯಬೇಕು ಎಂದು ಶಾಸಕರಾದ ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ ಹಾಗೂ ರಮೇಶ್ ಬಂಡಿಸಿದ್ದೇಗೌಡ ಮುಖ್ಯಮಂತ್ರಿ ಸಿದ್ದರಾಮಯ್ಯ, ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅಪರ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ.

ಈಗಾಗಲೇ ಬೆಂಗಳೂರು ಅಥವಾ ಮೈಸೂರಿನಿಂದ ಹೊರಡಬೇಕಾದರೆ ಒಂದು ಬಾರಿ ಟೋಲ್ ಶುಲ್ಕ ಕಟ್ಟಿಸಿಕೊಳ್ಳಲಾಗುತ್ತದೆ. ಈಗ ಶ್ರೀರಂಗಪಟ್ಟಣದಲ್ಲಿಯೂ ಟೋಲ್ ಕಟ್ಟಿಸಿಕೊಳ್ಳುವುದರಿಂದ ಸಾರ್ವಜನಿಕರಿಗೆ ಡಬಲ್ ಹೊರೆಯಾಗಲಿದೆ. ಅಲ್ಲದೇ ಇನ್ನೂ ಕಾಮಗಾರಿಗಳೇ ಪೂರ್ಣಗೊಂಡಿಲ್ಲ. ಹೀಗಾಗಿ ಮುಖ್ಯಮಂತ್ರಿಗಳು ಈ ಸಂಬಂಧ ಕೇಂದ್ರ ಸರ್ಕಾರದ ಗಮನಕ್ಕೆ ತಂದು ಸಮಸ್ಯೆ ಬಗೆಹರಿಸಬೇಕು. ಸರ್ವಿಸ್ ರಸ್ತೆ ಸೇರಿದಂತೆ ಇನ್ನಿತರ ಕಾಮಗಾರಿ ಮುಗಿಯುವವರೆಗೂ ಶ್ರೀರಂಗಪಟ್ಟಣ ಟೋಲ್‌ನಲ್ಲಿ ಶುಲ್ಕ ಸಂಗ್ರಹ ಮಾಡದಂತೆ ಕ್ರಮ ವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಇದೇ ಜು.1ರಿಂದ ಟೋಲ್ ಸಂಗ್ರಹಕ್ಕೆ ಮುಂದಾಗಲಿರುವುದು ಜನರಿಗೆ ನುಂಗಲಾರದ ತುತ್ತಾಗಿದೆ. ಬೆಂಗಳೂರಿನಿಂದ ಮೈಸೂರಿಗೆ ಸ್ವಂತ ವಾಹನದಲ್ಲಿ ಹೋಗಿ ಬರಲು ಟೋಲ್ ಶುಲ್ಕವಾಗಿಯೇ 500 ರೂ. ಕಟ್ಟಬೇಕೆಂದರೆ ನಿಜಕ್ಕೂ ಪ್ರಯಾಣ ದುಸ್ತರವಾಗಲಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಹೆದ್ದಾರಿಯಲ್ಲಿ ಮಂಡ್ಯ ತಾಲೂಕಿನ ಹನಕೆರೆ ಅಂಡರ್ ಪಾಸ್, ಹಳೇ ಬೂದನೂರು ಹಾಗೂ ಹೊಸ ಬೂದನೂರು ನಡುವಿನ ಸರ್ವಿಸ್ ರಸ್ತೆಗೆ



ನಿರ್ಮಾಣ ಮಾಡುತ್ತಿರುವ ಸೇತುವೆ ಸೇರಿದಂತೆ ಹಲವು ಕಾಮಗಾರಿ ಅಪೂರ್ಣವಾಗಿವೆ. ಹಲವು ಕಡೆ ಸರ್ವಿಸ್ ರಸ್ತೆ ಕಾಮಗಾರಿ ಪೂರ್ಣ ಗೊಂಡಿಲ್ಲ. ಈ ಹಂತದಲ್ಲಿ ಟೋಲ್ ಸಂಗ್ರಹ ಮಾಡುವುದು ಸರಿಯಲ್ಲ ಎಂದಿದ್ದಾರೆ.

ಮೈಸೂರು–ಬೆಂಗಳೂರು ನಡುವಿನ ಕಾರು/ಜೀಪುಗಳ ಏಕಮುಖ ಸಂಚಾರಕ್ಕೆ 320 ರೂ. ಹಾಗೂ ದ್ವಿಮುಖ ಸಂಚಾರಕ್ಕೆ 485 ರೂ.ಗಳನ್ನು ನಿಗದಿಪಡಿಸಿರುವುದು ಪ್ರಯಾಣಿಕರಿಗೆ ಹೊರೆಯಾಗಿದೆ ಎಂದು ಶಾಸಕರು ತಮ್ಮ ಮನವಿಯಲ್ಲಿ ತಿಳಿಸಿದ್ದಾರೆ.

ನಾಳೆ ಮಂಡ್ಯದಲ್ಲಿ ವಿಚಾರ ಸಂಕಿರಣ

ಮಂಡ್ಯ, ಜೂ.30– ಕನ್ನಡ ಸೇನೆ ಮಂಡ್ಯ ಜಿಲ್ಲಾ ಘಟಕದಿಂದ ಜು.2ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ 'ಪ್ರಸ್ತುತ ರಾಜಕೀಯದಲ್ಲಿ ಯುವಜನರ ಪಾತ್ರ' ಕುರಿತ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಸೇನೆ ಜಿಲ್ಲಾಧ್ಯಕ್ಷ ಹೆಚ್.ಸಿ.ಮಂಜುನಾಥ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ರಾಂತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಸಮಾರಂಭ ಉದ್ಘಾಟಿಸುವರು. ಮಾಜಿ ಸಚಿವ ಪಿ.ಜಿ.ಆರ್ ಸಿಂಧ್ಯಾ ವಿಚಾರ ಮಂಡನೆ ಮಾಡುವರು. ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ಅಧ್ಯಕ್ಷತೆ ವಹಿಸುವರು. ಕನ್ನಡ ಸೇನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ಉಪಸ್ಥಿತರಿರುವರು. ಜಿಲ್ಲಾಧ್ಯಕ್ಷ ಹೆಚ್.ಸಿ.ಮಂಜುನಾಥ್ ಪ್ರಾಸ್ತಾವಿಕ ನುಡಿ ನುಡಿಯುವರು. ಅತಿಥಿಗಳಾಗಿ ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷ ಮುನಿರಾಜೇಗೌಡ, ರಾಜ್ಯ ಕಾರ್ಯಾಧ್ಯಕ್ಷ ಮುನಿಕೃಷ್ಣ ಹಾಗೂ ನಗರಸಭಾ ಸದಸ್ಯೆ ಸೌಭಾಗ್ಯ ಶಿವಲಿಂಗು ಭಾಗವಹಿಸುವರು ಎಂದರು. ಗೋಷ್ಠಿಯಲ್ಲಿ ನಗರಸಭಾ ಸದಸ್ಯೆ ಸೌಭಾಗ್ಯ ಶಿವಲಿಂಗು, ಮುಖಂಡರಾದ ಮಹಾಂತಪ್ಪ, ಬೆಟ್ಟಹಳ್ಳಿ ಮಂಜುನಾಥ್, ಬಿ.ಸಿ.ಅನ್ನದಾನಿ, ಮಂಜುನಾಥ್ ಕಮ್ಮನಾಯಕನಹಳ್ಳಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಫಾರ್ಮಸಿ ಕಾಲೇಜು: 10 ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ





ಮೈಸೂರು, ಜೂ. 30(ಸಿಎನ್)– ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪದವಿ ಪ್ರಧಾನ ಸಮಾರಂಭದಲ್ಲಿ ಫಾರ್ಮಸಿಯ ವಿವಿಧ ವಿಭಾಗಗಳಲ್ಲಿ ಹೆಚ್ಚು ಅಂಕ ಪಡೆದ 10 ವಿದ್ಯಾರ್ಥಿನಿಯರಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಅಹ್ಮದಾಬಾದ್‌ನ ರಾಷ್ಟ್ರೀಯ ಔಷಧ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಶೈಲೇಂದ್ರ ಅವರು ಸಾಧಕ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಿದರು. ಬಳಿಕ ಮಾತನಾಡಿದ ಅವರು, ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಆರಂಭವಾಗಿ 50 ವರ್ಷ ಪೂರೈಸುತ್ತಿರುವ ಸಂದರ್ಭದಲ್ಲಿ ಸುವರ್ಣ ಮಹೋತ್ಸವ (1972–2023) ಆಚರಣೆಯ ಭಾಗವಾಗಿ ಮೊದಲ ಬಾರಿಗೆ ಪದವಿ ಪ್ರಧಾನ ಸಮಾರಂಭ ಆಯೋಜಿಸಲಾಗಿದೆ. ಫಾರ್ಮಸಿ ಶಿಕ್ಷಣ ಮತ್ತು ಸಂಶೋಧನೆಯ ಗುಣಮಟ್ಟವನ್ನು ಕಾಯ್ದುಕೊಂಡು ಸಮಾಜದಲ್ಲಿ ಬದಲಾವಣೆ ತರುವಲ್ಲಿ ಜೆಎಸ್‌ಎಸ್‌ಎಚ್‌ಇಆರ್ ಮತ್ತು ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಪ್ರಯತ್ನಗಳು ಶ್ಲಾಘನೀಯ. ಪದವೀಧರರನ್ನು ಅಭಿನಂದಿಸುವುದಲ್ಲದೇ ನಾಗರಿಕರ ಆರೋಗ್ಯಕ್ಕಾಗಿ ಕೆಲಸ ಮಾಡುವಂತೆ ಮತ್ತು ವೃತ್ತಿಯ ಸಮಗ್ರತೆ ಮತ್ತು ನೈತಿಕತೆಯನ್ನು ಕಾಪಾಡಿಕೊಳ್ಳುವಂತೆ ಸಲಹೆ ನೀಡಿದರು.

ಸಿಬ್ಬಂದಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಫಾರ್ಮಾಕಾಲಜಿ ವಿಭಾಗದ ಸಹ ಪ್ರಾಧ್ಯಾಪಕ ಡಾ.ಕೆ.ಎಲ್ ಕೃಷ್ಣ ಮತ್ತು ಔಷಧೀಯ ರಸಾಯನಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ಆರ್.ಎಸ್. ಚಂದನ್ ಮತ್ತು ಸಹ ಪ್ರಾಧ್ಯಾಪಕ ಡಾ.ವಿಕಾಸ್ ಜೈನ್ ಅವರಿಗೆ ಪ್ರದಾನ ಮಾಡಲಾಯಿತು. 2022–23 ನೇ ಸಾಲಿನ ಯುವ ಶಿಕ್ಷಕ ಪ್ರಶಸ್ತಿಯನ್ನು ಔಷಧೀಯ ರಸಾಯನಶಾಸ್ತ್ರ ವಿಭಾಗದ ಡಾ.ಎಚ್. ಯೋಗೇಶ್ ಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು.

ಚಿನ್ನದ ಪದಕ ವಿಜೇತರು: ಡಿಫಾರ್ಮ್ ವಿಭಾಗದಲ್ಲಿ ಶಿಲ್ಪಾ ಪುರೋಹಿತ್, ಬಿ ಫಾರ್ಮಾದಲ್ಲಿ ಅಂಜು ಜೇಮ್ಸ್, ಫಾರ್ಮ್ ಡಿನಲ್ಲಿ ದಿವ್ಯಾ ಜಿಮ್ಮಿ ಎಂ. ಫಾರ್ಮ್‌ನ ಫಾರ್ಮಸ್ಯುಟಿಕಲ್ ವಿಭಾಗದಲ್ಲಿ ತನ್ವಿ ಭಟ್, ಫಾರ್ಮಾಸ್ಯುಟಿಕಲ್ ರೆಗ್ಯುಲೇಟರಿ ಏರ್ಸ್ ವಿಭಾಗದಲ್ಲಿ ವಿ. ನಿಕಿತಾ, ಔಷಧಿಯ ರಸಾಯನಶಾಸ್ತ್ರ ವಿಭಾಗದಲ್ಲಿ ಕರೆನ್ ರಿಸೋಜಾ, ಫಾರ್ಮಾಸ್ಯುಟಿಕಲ್ ಕ್ವಾಲಿಟಿ ಅಶೂರೆನ್ಸ್ ವಿಭಾಗದಲ್ಲಿ ಸಾಕ್ಷಿ ವಿವೇಕ್, ಫಾರ್ಮಕಾಲಜಿ ವಿಭಾಗದಲ್ಲಿ ಶಾಲಿನಿ ಪಿ. ನಾಯರ್. ಫಾರ್ಮಾಸ್ಯುಟಿಕಲ್ ಅನಾಲಿಸಿಸ್ ವಿಭಾಗದ ಭಾಗ್ಯಶ್ರೀ ಬೆಹೆರಾ, ಕೈಗಾರಿಕಾ ಫಾರ್ಮಸಿ ವಿಭಾಗದ ಸಂಕೇಶ್ವರಿ ಸುಸ್ಮಿತಾ ಅಜಯ್ ಅವರು ಆಯಾ ಪದವಿಗಳಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದಕ್ಕಾಗಿ ಚಿನ್ನದ ಪದಕ ಪಡೆದುಕೊಂಡರು.

ಪರೀಕ್ಷಾ ನಿಯಂತ್ರಕ ಡಾ.ಆರ್.ಸುಧೀಂದ್ರ ಭಟ್ ಪದವೀಧರರಿಗೆ ಪ್ರಮಾಣ ವಚನ ಬೋಧಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ್, ಅತಿಥಿಗಳಾಗಿ ಜೆಎಸ್‌ಎಸ್ ಎಎಚ್‌ಇಆರ್ ಸಮಕುಲಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರಿಂದರ್ ಸಿಂಗ್ ಭಾಗವಹಿಸಿದ್ದರು.

ಚಾರಣಕ್ಕೆ ತೆರಳಿದ್ದ ಮೈಸೂರಿನ ಯುವ ವೈದ್ಯ ಹೃದಯಾಘಾತದಿಂದ ನಿಧನ

ಮೈಸೂರು, ಜೂ.30– ಚಾರಣಕ್ಕೆ ತೆರಳಿದ್ದ ಯುವ ವೈದ್ಯರೊಬ್ಬರು ಹೃದಯಾಘಾತದಿಂದ ನಿಧನರಾಗಿದ್ದಾರೆ.



ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲೂಕು ಸಂಸೆ ಗ್ರಾಮದಿಂದ ನೇತ್ರಾವತಿ ಶಿಖರಕ್ಕೆ ಚಾರಣ ತೆರಳಿದ್ದ ವೇಳೆ ಹೃದಯಘಾತದಿಂದ ಮೃತಪಟ್ಟಿದ್ದಾರೆ. ಮೃತ ಚಾರಣಿಗ ಮೈಸೂರು ಜೆಪಿ ನಗರ ನಿವಾಸಿ ರಕ್ಷಿತ್ (27) ಎಂದು ಗುರುತಿಸಲಾಗಿದೆ. ಶುಕ್ರವಾರ ಮುಂಜಾನೆ ರಕ್ಷಿತ್ ಸೇರಿ ಆರು ಜನರ ತಂಡ ಸಂಸೆ ಮಾರ್ಗವಾಗಿ ಕುದುರೆಮುಖ ಬೆಟ್ಟದ ಸಾಲಿನ ನೇತ್ರಾವತಿ ಶಿಖರಕ್ಕೆ ತೆರಳಿದ್ದರು. ಶಿಖರ ಏರಿದ ನಂತರ ಮಧ್ಯಾಹ್ನದ ಹೊತ್ತಿಗೆ ರಕ್ಷಿತ್‌ಗೆ ಎದೆನೋವು ಕಾಣಿಸಿಕೊಂಡಿದೆ. ನಂತರ ಸ್ಥಳದಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ. ಸ್ಥಳೀಯರ ನೆರವಿನಿಂದ ರಕ್ಷಿತ್ ಮೃತದೇಹವನ್ನು ಕಳಸ ಆಸ್ಪತ್ರೆಗೆ ತರಲಾಗಿದೆ. ಮೃತ ರಕ್ಷಿತ್ ಇತ್ತೀಚೆಗಷ್ಟೇ ಎಂಬಿಬಿಎಸ್ ವ್ಯಾಸಂಗ ಪೂರ್ಣಗೊಳಿಸಿದ್ದರು ಎಂದು ತಿಳಿದುಬಂದಿದೆ.

ಶುಕ್ರವಾರ ಮೈಸೂರಿಗೆ ಆಗಮಿಸಿದ ಗೃಹ ಸಚಿವ ಡಾ. ಜಿ.ಪರಮೇಶ್ವರ್ ಅವರನ್ನು ಕಾಂಗ್ರೆಸ್ ಮುಖಂಡರಾದ ಎನ್. ಧ್ರುವರಾಜ್, ಕುರುಬಾರಹಳ್ಳಿ ಪ್ರಕಾಶ್, ರಾಜೇಶ್ ಆತ್ಮೀಯವಾಗಿ ಸ್ವಾಗತಿಸಿದರು.





ಮೈಸೂರು ಪಾಲಿಕೆ 46ನೇ ವಾರ್ಡಿನ ಕನಕದಾಸನಗರ ದಟ್ಟಗಳ್ಳಿಯಲ್ಲಿ ಕೆಂಪೇಗೌಡ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಮುಖಂಡರಾದ ಕಿರಣ್, ಮಾದೇಗೌಡ, ವೆಂಕಟೇಶ್, ಬಾಲ, ಕೆಪಿಸಿಸಿ ಓಬಿಸಿ ಕಾರ್ಯದರ್ಶಿ ಹರೀಶ್ ಮೊಗಣ್ಣ, ಕಾಂಗ್ರೆಸ್ ಮುಖಂಡರಾದ ವಿಕ್ಕಿ ವಾಸ್, ವಿಜಯಕುಮಾರ್, ಸಂತೋಷ, ನಾಗರಾಜು, ಶಂಕರ್, ದಿವಾಕರ್, ವಾಸು, ರವಿ, ಸುಜೇಂದ್ರ, ರಾಜಣ್ಣ ಇತರರು ಹಾಜರಿದ್ದರು.

ಪಿಡಿಓ ಸಹಿ ಫೋರ್ಜರಿ ಮಾಡಿ ನಕಲಿ ದಾಖಲೆ ಸೃಷ್ಟಿ; ತಾಯಿ, ಪುತ್ರಿಯರ ವಿರುದ್ಧ ಪ್ರಕರಣ ದಾಖಲು

ಸಾಲಿಗ್ರಾಮ, ಜೂ.30–ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಸಹಿ ಫೋರ್ಜರಿ ಮಾಡಿ ನಕಲಿ ದಾಖಲೆ ಸೃಷ್ಟಿಸಿದ ಆರೋಪದ ಮೇರೆಗೆ ತಾಯಿ ಹಾಗೂ ಇಬ್ಬರು ಪುತ್ರಿಯರ ವಿರುದ್ಧ ಪ್ರಕರಣ ದಾಖಲಾಗಿದೆ.

ಸಾಲಿಗ್ರಾಮ ತಾಲೂಕು ಮಿರ್ಲೆ ಗ್ರಾಮದ ಬಿ.ಕೆ.ಭಾರತಿ, ಇವರ ಪುತ್ರಿಯರಾದ ಅರ್ಪಿತಾ ಮತ್ತು ಹರ್ಷಿತಾ ಆರೋಪಕ್ಕೆ ಗುರಿಯಾಗಿರುವವರು. ಭಾರತಿ ಅವರು ಕೆ.ಆರ್.ನಗರ ತಾಲೂಕಿನ ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ಮನೆ ಸಾಲ ಪಡೆಯಲು ನಕಲಿ ದಾಖಲೆ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

ಮಿರ್ಲೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ಎಸ್.ಎಸ್.ಸಂದೀಪ ಅವರು ಭಾರತಿಯವರ ಭೂಮಿಯ ವಿಸ್ತೀರ್ಣ ಈ ಹಿಂದೆ 45X36 ಇದ್ದು, ಪ್ರಸ್ತುತ ಅದು 60X20 ಆಗಿರುತ್ತದೆ ಎಂದು ದೃಢೀಕರಿಸಿರುವ ದಾಖಲೆಯನ್ನು ಭಾರತಿ ಬ್ಯಾಂಕ್‌ಗೆ ಸಾಲ ಪಡೆಯಲು ನೀಡಿದ್ದರು.

ಈ ದಾಖಲೆಯ ಸತ್ಯಾಂಶದ ಬಗ್ಗೆ ಬ್ಯಾಂಕ್‌ನವರು ಗ್ರಾಮ ಪಂಚಾಯ್ತಿಯಿಂದ ಮಾಹಿತಿ ಕೋರಿದಾಗ ಭಾರತಿ ಗ್ರಾಪಂ ಪಿಡಿಓ ಸಂದೀಪ ಅವರ ಸಹಿ ಮತ್ತು ಕಚೇರಿಯ ಮೊಹರನ್ನು ಫೋರ್ಜರಿ ಮಾಡಿ ನಕಲಿ ದಾಖಲೆ ಸೃಷ್ಟಿಸಿರುವುದು ಕಂಡು ಬಂದಿದ್ದು, ಈ ದಾಖಲೆಗಳನ್ನು ವಶಪಡಿಸಿಕೊಂಡ ಸಂದೀಪ ಅವರು ಭಾರತಿ ಮತ್ತು ಅವರ ಇಬ್ಬರು ಪುತ್ರಿಯರ ವಿರುದ್ಧ ದೂರನ್ನು ಭಾರತೀಯ ದಂಡ ಸಂಹಿತೆ 465, 468, 420, 34ರಡಿ ದಾಖಲಿಸಿಕೊಂಡಿರುವ ಸಾಲಿಗ್ರಾಮ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಗಾಂಜಾ ಬೆಳೆದಿದ್ದ ರೈತರ ಬಂಧನ

ಹನೂರು, ಜೂ.30– ಬೆಳೆ ಬೆಳೆಯುವಂತೆ ಪಾತಿ ಕಟ್ಟಿ, ಗೊಬ್ಬರ ಹಾಕಿ ಗಾಂಜಾ ಬೆಳೆದಿದ್ದ ರೈತನೋರ್ವನನ್ನು ಹನೂರು ಠಾಣೆ ಪೊಲೀಸರು ಬಂಧಿಸಿ 18 ಕೆ.ಜಿ. ತೂಕದ 22 ಗಾಂಜಾ ಗಿಡಗಳನ್ನು ವಶಪಡಿಸಿಕೊಂಡಿದ್ದಾರೆ.


ಹನೂರು ತಾಲೂಕು ಹಂಡೆಕುರುಬನ ದೊಡ್ಡಿ ಗ್ರಾಮದ ರೈತ ಗುರುಸ್ವಾಮಿ(50) ಬಂಧನಕ್ಕೊಳಗಾದ ರೈತನಾಗಿದ್ದು, ಈತ ಬೋರೇದೊಡ್ಡಿ ಗ್ರಾಮದಲ್ಲಿರುವ ತನ್ನ ಜಮೀನಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದಾನೆ ಎಂಬ ಖಚಿತ ಮಾಹಿತಿ ಮೇರೆಗೆ ಹನೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಿ.ರಾಜೇಂದ್ರಪ್ರಸಾದ್ ಅವರು ಜೂ.29ರಂದು ಈ ಜಮೀನಿನ ಮೇಲೆ ದಾಳಿ ನಡೆಸಿದರು.

ಈ ವೇಳೆ ಗುರುಸ್ವಾಮಿ ಜಮೀನಿನಲ್ಲಿ 15 ಅಡಿ ಆಳ ಹಾಗೂ 10 ಅಡಿ ಉದ್ದವಿರುವ ಕೃಷಿ ಹೊಂಡದಲ್ಲಿ ಪಾತಿ ಕಟ್ಟಿ, ಗೊಬ್ಬರ ಹಾಕಿ ಗಾಂಜಾ ಬೆಳೆದಿರುವುದು ಪತ್ತೆಯಾಗಿದೆ. ಗಾಂಜಾ ಗಿಡಗಳು 5 ಅಡಿ ಎತ್ತರವಿದ್ದು, 22 ಗಾಂಜಾ ಗಿಡಗಳನ್ನು ವಶಪಡಿಸಿಕೊಂಡು ಗುರುಸ್ವಾಮಿಯನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡ ಹನೂರು ಠಾಣೆ ರಾಜೇಂದ್ರ ಪ್ರಸಾದ್ ತನಿಖೆ ಮುಂದುವರೆಸಿದ್ದಾರೆ.

ಉತ್ತರಾಖಂಡದಲ್ಲಿ ಭಾರೀ ಭೂಕುಸಿತ; ಬದರಿನಾಥ್ ಹೆದ್ದಾರಿಯಲ್ಲಿ ಸಿಲುಕಿದ 8,000 ಯಾತ್ರಾರ್ಥಿಗಳು

ಡೆಹ್ರಾಡೂನ್: ಉತ್ತರಾಖಂಡದಲ್ಲಿ ಗುರುವಾರ ಭಾರೀ ಭೂಕುಸಿತ ಸಂಭವಿಸಿದ್ದು, ಬದರಿನಾಥ್ ರಾಷ್ಟ್ರೀಯ ಹೆದ್ದಾರಿಯಲ್ಲಿ 8,000 ಯಾತ್ರಾರ್ಥಿಗಳು ಸಿಲುಕಿಕೊಂಡಿದ್ದಾರೆ.

ನಿನ್ನೆ ರಾತ್ರಿ ಸುರಿದ ಭಾರೀ ಮಳೆಗೆ ಚಿಂಕಾ ಗ್ರಾಮದಲ್ಲಿ ಭೂಕುಸಿತ ಸಂಭವಿಸಿದೆ. ಭೂಕುಸಿತದಿಂದ ಸುಮಾರು 100 ಮೀಟರ್ ನಷ್ಟು ಹೆದ್ದಾರಿ ಸಂಪೂರ್ಣ ಕೊಚ್ಚಿ ಹೋಗಿದೆ. ಹೆದ್ದಾರಿಯ ಎರಡೂ ಬದಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದು, ಸುಮಾರು ಆರು ಕಿಲೋಮೀಟರ್‌ವರೆಗೆ ಟ್ರಾಫಿಕ್ ಜಾಮ್ ಆಗಿದೆ. ಸೇನಾ ಸಿಬ್ಬಂದಿ ಕೂಡ ಜಾಮ್‌ನಲ್ಲಿ ಸಿಲುಕಿಕೊಂಡಿದ್ದು, ತಡರಾತ್ರಿಯಾದರೂ ಹೆದ್ದಾರಿ ಸಂಚಾರ ಸರಿಪಡಿಸಲು ಸಾಧ್ಯವಾಗಿಲ್ಲ. ಆಡಳಿತಾತ್ಮಕ ಮೂಲಗಳಿಂದ ಬಂದಿರುವ ಮಾಹಿತಿ ಪ್ರಕಾರ, ಹೆದ್ದಾರಿಯಲ್ಲಿ ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ಸಂಜೆಯವರೆಗೂ ವಾಹನಗಳು, ಯಾತ್ರಾರ್ಥಿಗಳು ಹೆದ್ದಾರಿಯಲ್ಲಿ ಸಿಲುಕಿಕೊಂಡಿದ್ದರು ಎನ್ನಲಾಗಿದೆ.



ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ 9 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಾಧನೆಯ ಕರಪತ್ರಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯಕ್ರಮಕ್ಕೆ ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಹೂಟಗಳ್ಳಿ ಮಹಾಶಕ್ತಿ ಕೇಂದ್ರದಲ್ಲಿ ಕ್ಷೇತ್ರದ ಅಧ್ಯಕ್ಷರಾದ ಗೆಜ್ಜಗಳ್ಳಿ ಮಹೇಶ್, ಮುಖಂಡರಾದ ಕವೀಶ್‌ಗೌಡರ ನೇತೃತ್ವದಲ್ಲಿ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಗೋಪಾಲರಾವ್, ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಪೈ ಟಿ. ರವಿ, ಮಹಿಳಾ ಮೋರ್ಚಾ ಅಧ್ಯಕ್ಷೆ ಶ್ರೀಮತಿ ಜ್ಯೋತಿ ರವಿಕುಮಾರ್, ಗಣೇಶ್, ರೇವಣ್ಣ, ನಾರಾಯಣ್, ಅನಿತಾ, ಶಿವಣ್ಣ, ಭಾರತಿ, ಪಶುಪತಿ ಇತರರಿದ್ದಾರೆ.

'ಮೈಸೂರು ಮಿತ್ರ' ವರದಿ ಫಲಶೃತಿ

ಕೊನೆಗೂ ಅಪಾಯಕಾರಿ ಹಳ್ಳಕ್ಕೆ ಮುಕ್ತಿ!

ಆದರೆ, ಈ 'ಕಾರ್ಯ'ಕರ್ತೃ ಯಾರೆಂಬುವುದು ನಿಗೂಢ


ಮೊದಲು


ನಂತರ

ಮೈಸೂರು, ಜೂ.30(ಬಿಎಲ್‌ಯು)– ಅಪಘಾತಕ್ಕೆ ಆಹ್ವಾನವಾಗಿದ್ದ ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆಯ ಗುಂಡಿಯನ್ನು ಕೊನೆಗೂ ಮುಚ್ಚಿ ವಾಹನ ಚಾಲಕರ ಆತಂಕ ನಿವಾರಣೆ ಮಾಡಲಾಗಿದೆ.

ಕಾರಂಜಿಕೆರೆ ಹಾಗೂ ಮೃಗಾಲಯದ ಮಧ್ಯೆ ಇರುವ ದಿಣ್ಣೆ ರಸ್ತೆಯ ಮಧ್ಯೆ ಹಳ್ಳ ಬಿದ್ದಿತ್ತು. ಒಳಚರಂಡಿ ಪೈಪ್‌ಲೈನ್‌ನ ಮ್ಯಾನ್ ಹೋಲ್ ಕುಸಿದು ಈ ಅಪಾಯಕಾರಿ ಹಳ್ಳವಾಗಿತ್ತು ಅಪಘಾತಗಳು ಸಂಭವಿಸುತ್ತಿದ್ದ ಕಾರಣ ಸಂಚಾರ ಪೊಲೀಸರು ಬ್ಯಾರಿಕೇಡ್ ನಿಲ್ಲಿಸಿ ಕೈತೊಳೆದುಕೊಂಡಿದ್ದರು.

ಆದರೆ, ವಾಹನ ಸವಾರರು ಹಾಗೂ ಚಾಲಕರಿಗೆ ಇದು ಅಪಾಯಕಾರಿಯಾಗಿ ಪರಿಣಮಿಸಿತ್ತು ಈ ಬಗ್ಗೆ 'ಮೈಸೂರು ಮಿತ್ರ' ಜೂನ್ 19 ರಂದು 'ಅಪಘಾತಕ್ಕೆ ಸೋಪಾನವಾದ ಕಾರಂಜಿಕೆರೆ ಬಂಡ್ ರಸ್ತೆ' ಶೀರ್ಷಿಕೆಯಲ್ಲಿ ಸುದ್ದಿ ಪ್ರಕಟಿಸಿ, ಅಧಿಕಾರಿ ವರ್ಗದ ನಿರ್ಲಕ್ಷತೆ ಬಗ್ಗೆ ಬೆಳಕು ಚೆಲ್ಲಿತ್ತು.

ಇದಕ್ಕೆ ಸಂಬಂಧಿಸಿದ ವರದಿ ಪ್ರಕಟವಾದ 12 ದಿನಗಳ ನಂತರ ಈಗ ಕಾರಂಜಿ ಕೆರೆ ರಸ್ತೆ ಮಧ್ಯೆ ಇದ್ದ ಹಳ್ಳವನ್ನು ಮುಚ್ಚಲಾಗಿದೆ ಹೊಸದಾಗಿ ಮ್ಯಾನ್‌ಹೋಲ್ ಮುಚ್ಚಳ ಕೂಡ ಅಳವಡಿಸಲಾಗಿದೆ.

ಆದರೆ ಈ ರಿಪೇರಿ ಕಾರ್ಯ ಮಾಡಿದವರು ಯಾರು ಎಂಬುದು ನಿಗೂಢವಾಗಿದೆ. ನಗರ ಪಾಲಿಕೆ ಸೂಪರಿಡೆಂಟೆಂಟ್ ಇಂಜಿನಿಯರ್ ಮಹೇಶ್ ಅವರನ್ನು ಕೇಳಿದರೆ, ನಗರ ಪಾಲಿಕೆ ಈ ಕಾರ್ಯ ಮಾಡಿಲ್ಲ ಎಂದರೆ, ಪಿಡಬ್ಲ್ಯೂಡಿ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು ಅವರು ಈ ರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬಾರದ ಕಾರಣ ನಾವು ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ ಈ ಕಾರ್ಯ ಮಾಡಿದವರು ಯಾರು ಎಂಬುದು ಕುತೂಹಲ ಮೂಡಿಸಿದೆ. ಈ ಕಾರ್ಯವನ್ನು ಯಾರೇ ಮಾಡಿರಲಿ, ಅಂತೂ ಅಪಘಾತಗಳಿಗೆ ಬಾಯ್ತೆರೆದುಕೊಂಡಿದ್ದ ಹಳ್ಳ ಮುಚ್ಚಲಾಗಿದೆ. ಈ ಕಾರ್ಯ ಮಾಡಿದ ಮಹಾನುಭಾವ ಅಧಿಕಾರಿಗಳಿಗೆ ಮೈಸೂರು ಜನರ ಪರವಾಗಿ ಅಭಿನಂದನೆಗಳು.

ಚಾಮುಂಡಿಬೆಟ್ಟದಲ್ಲಿ ಎರಡನೇ ಆಷಾಢ ಶುಕ್ರವಾರದ ವಿಶೇಷ ಪೂಜಾ ಕೈಂಕರ್ಯ; ಸಹಸ್ರಾರು ಭಕ್ತರಿಗೆ ದರ್ಶನ ಭಾಗ್ಯ

ಸಿಂಹವಾಹಿನಿ ಅಲಂಕಾರದಲ್ಲಿ ಶೋಭಿಸಿದ ತಾಯಿ ಚಾಮುಂಡೇಶ್ವರಿ



ಮೈಸೂರು, ಜೂ.30(ಬಿಎಲ್‌ಯು)– ಎರಡನೇ ಆಷಾಢ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದಲ್ಲಿ ನಾಡ ದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ಸಿಂಹವಾಹಿನಿ ಅಲಂಕಾರ ಮಾಡಲಾಗಿತ್ತು. ಸಹಸ್ರಾರು ಭಕ್ತರು ಶಕ್ತಿ ದೇವತೆಯ ದರ್ಶನ ಪಡೆದು, ತಮ್ಮ ಇಷ್ಟಾರ್ಥ ನೆರವೇರಿಸುವಂತೆ ದೇವಿಯ ಮೊರೆ ಹೋದರು.

ಚಾಮುಂಡಿಬೆಟ್ಟದಲ್ಲಿ ಇಂದು ಎರಡನೇ ಆಷಾಢ ಶುಕ್ರವಾರದ ಧಾರ್ಮಿಕ ಸಂಭ್ರಮ. ಆಷಾಢ ಮಾಸದಲ್ಲಿ ಅದರಲ್ಲೂ ಶುಕ್ರವಾರದಂದು ಶಕ್ತಿ ದೇವತೆಯನ್ನು ವಿಶೇಷವಾಗಿ ಪೂಜಿಸುವುದು ಪ್ರತೀತಿ. ಅದರಂತೆ ತಾಯಿ ಚಾಮುಂಡೇಶ್ವರಿ ದೇವಿಯನ್ನು ವಿಶೇಷವಾಗಿ ಅಲಂಕರಿಸಿ, ಪೂಜಿಸಲಾಯಿತು. ಇಂದು ಮುಂಜಾನೆ 3.30 ಗಂಟೆಗೆ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ನೆರವೇರಿಸಲಾಯಿತು.

ಕಳೆದ ಬಾರಿಯ ಮೊದಲ ಆಷಾಢ ಶುಕ್ರವಾರದಂದು ಚಾಮುಂಡೇಶ್ವರಿ ದೇವಿಗೆ ನಾಗಲಕ್ಷ್ಮಿ ಅಲಂಕಾರ ಮಾಡಲಾಗಿತ್ತು. ಎರಡನೇ ಆಷಾಢ ಶುಕ್ರವಾರವಾದ ಇಂದು ತಾಯಿಗೆ ಸಿಂಹವಾಹಿನಿ ಅಲಂಕಾರ ಮಾಡಲಾಗಿತ್ತು. ಚಿನ್ನಾಭರಣ ಹಾಗೂ ನಾನಾ ಪುಷ್ಪಗಳಿಂದ ದೇವಿಯನ್ನು ಅಲಂಕರಿಸಿ, ಕುಂಕುಮಾರ್ಚನೆ ನೆರವೇರಿಸಲಾಯಿತು. ಸುಮಾರು 5.30 ಗಂಟೆ ತನಕ ಅಂದರೆ ಎರಡು ಗಂಟೆಗಳ ಕಾಲ ಶಕ್ತಿ ದೇವತೆಗೆ ಹಲವು ಪೂಜಾ ಕೈಂಕರ್ಯ ನೆರವೇರಿಸಲಾಯಿತು. ಬೆಳಿಗ್ಗೆ 9.30 ಗಂಟೆಗೆ ಮಹಾ ಮಂಗಳಾರತಿ ಸೇರಿದಂತೆ ಹಲವು ಪೂಜಾ ಕಾರ್ಯ ನೆರವೇರಿದವು.

ಮುಂಜಾನೆ 5.30 ಗಂಟೆಗೆ ಭಕ್ತರಿಗೆ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ತಡರಾತ್ರಿಯಿಂದಲೇ ದೇವರ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತ ಸಮೂಹ ಸರದಿ ಸಾಲಿನಲ್ಲಿ ಸಾಗಿ ದೇವಿಯ ದರ್ಶನ ಪಡೆದು ಪುನೀತರಾದರು. ದೇವಸ್ಥಾನದ ಪ್ರಾಂಗಣವನ್ನು ವಿವಿಧ ಪುಷ್ಪಗಳಿಂದ ಅತ್ಯಾಕರ್ಷಕವಾಗಿ ಅಲಂಕರಿಸಲಾಗಿತ್ತು. ದೇವಸ್ಥಾನ ಪ್ರವೇಶಿಸುತ್ತಿದ್ದಂತೆ ಭಕ್ತಿ ಭಾವ ಮೇಳೈಸಿತು.

ಮಹಿಷಾಸುರ ಪ್ರತಿಮೆಯ ವೃತ್ತದಿಂದ ಎರಡು ಗೇಟ್‌ಗಳಲ್ಲಿ ಭಕ್ತರಿಗೆ ಪ್ರವೇಶ ಕಲ್ಪಿಸಲಾಗಿತ್ತು. ಒಂದು ಗೇಟ್‌ನಲ್ಲಿ ಧರ್ಮ ದರ್ಶನದ ವ್ಯವಸ್ಥೆ ಇದ್ದರೆ, ಮತ್ತೊಂದು ಗೇಟ್‌ನಲ್ಲಿ ಗಣ್ಯರು ನೇರವಾಗಿ ದೇವಸ್ಥಾನಕ್ಕೆ ಪ್ರವೇಶಿಸಲು ಅವಕಾಶ ಕಲ್ಪಿಸಲಾಗಿತ್ತು.

ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದ ಕಾರಣ ಯಾವ ನೂಕು ನುಗ್ಗಲು ಉಂಟಾಗದೆ ಭಕ್ತರು ಸಲೀಸಾಗಿ ದೇವಸ್ಥಾನ ಪ್ರವೇಶಿಸಿ ದೇವಿಯ ದರ್ಶನಭಾಗ್ಯ ಪಡೆದರು.

ನಾಳೆ ಸರ್ಕಾರದ ಗ್ಯಾರಂಟಿ ಯೋಜನೆಗಳ ಕುರಿತು ಸಂವಾದ



ಮೈಸೂರು, ಜೂ.30(ಜಿಎ)–ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಸಾಧಕ–ಬಾಧಕಗಳ ಕುರಿತು ಜು.2ರಂದು 'ಸರ್ಕಾರದ ಉಚಿತ ಸವಲತ್ತುಗಳು ಒಂದು ಅವಲೋಕನ' ಎಂಬ ಸಂವಾದ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಮತ್ತು ಜನಮನ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್ ಶಿವರಾಮ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಮಾನಸಗಂಗೋತ್ರಿ ಆವರಣದಲ್ಲಿರುವ ವಿಜ್ಞಾನ ಭವನದಲ್ಲಿ ಸರ್ಕಾರದ ಉಚಿತ ಗ್ಯಾರಂಟಿ ಯೋಜನೆಗಳ ಸಾಧಕ–ಬಾದಕಗಳ ಕುರಿತು ಚರ್ಚಿಸಲು ಸಂವಾದ ಏರ್ಪಡಿಸಿದ್ದು, ಬೆಳಗ್ಗೆ 11 ಗಂಟೆಗೆ ಯೋಜನೆಯ ಫಲಾನುಭವಿಯಾದ ನಂಜಗೂಡಿನ ವಸಂತ ಕುಮಾರಿ ಹರತಲೆ ಅವರು ಉದ್ಘಾಟಿಸಲಿದ್ದಾರೆ ಎಂದರು.

ಕಾರ್ಯಕ್ರಮ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿ ಡಾ.ಹಿ.ಶಿ.ರಾಮಚಂದ್ರೇಗೌಡ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯ ಮುಖಂಡರು ಸಾಮೂಹಿಕ ನಾಯಕತ್ವದ ಚುಕ್ಕಿ ನಂಜುಂಡಸ್ವಾಮಿ ಆಗಮಿಸಲಿದ್ದಾರೆ. ಹಾಗೇ ಉಚಿತ ಸವಲತ್ತುಗಳನ್ನು ಕುರಿತು ವಿವಿಧ ಆಯಾಮಗಳಲ್ಲಿ ಚರ್ಚೆಗಳು ನಡೆಯಲಿದ್ದು, ಸಾಮಾಜಿಕ ಆಯಾಮದಲ್ಲಿ ಸುಮನ, ಆರ್ಥಿಕ ಆಯಾಮದಲ್ಲಿ ಡಾ.ಹೆಚ್.ವಿ.ವಾಸು ಮತ್ತು ಸಾಂಸ್ಕೃತಿಕ ಆಯಾಮದಿಂದ ಡಾ.ಪುರುಷೋತ್ತಮ ಬಿಳಿಮಲೆ ವಿಮರ್ಶಿಸಲಿದ್ದಾರೆ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಯೋಜನೆಗಳಿಂದ ರಾಜ್ಯವು ದಿವಾಳಿ ಆಗಲಿದೆ ಎಂಬ ಕೆಲ ನಾಯಕರ ಹೇಳಿಕೆ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಏರ್ಪಡಿಸುತ್ತಿದ್ದು, ಅನ್ನಭಾಗ್ಯ ಯೋಜನೆಯಡಿ ರಾಜ್ಯ ಸರ್ಕಾರ ತಲಾ 10 ಕೆಜಿ ಅಕ್ಕಿ ನೀಡುವ ನಿಲುವು ಸ್ವಾಗತಾರ್ಹ. ಆದರೆ ಬಡವರ ಹಸಿವಿನ ಮೇಲೆ ಬಿಜೆಪಿ ರಾಜಕಾರಣ ಮಾಡುತ್ತಿದೆ. ಅಕ್ಕಿ ದೊರಕದ ಹಿನ್ನಲೆಯಲ್ಲಿ 5 ಕೆಜಿ ಅಕ್ಕಿ ಜೊತೆ 5 ಅಕ್ಕಿಗೆ ತಗುಲುವ ಹಣ ಸಂದಾಯ ಮಾಡಲು ಸರ್ಕಾರ ನಿರ್ಧರಿಸಿರುವುದನ್ನು ಟೀಕಿಸಿರುವ ಪ್ರತಿಪಕ್ಷಗಳ ವಿರುದ್ಧ ಕಿಡಿಕಾರಿದರು.

ಈ ಹಿಂದೆ ಅಕ್ಕಿ ಕೊಡಲಿಲ್ಲ ಅಂದ್ರೆ ಹಣ ನೀಡಿ ಎಂದು ಬಿಜೆಪಿಯವರೇ ಹೇಳಿದ್ರು, ಈಗ ಅದನ್ನು ವಿರೋಧಿಸುತ್ತಿದ್ದೀರಿ. ಅನ್ನಭಾಗ್ಯ ಯೋಜನೆ ಜಾರಿಗೊಂಡ್ರೆ ಬಿಜೆಪಿ ನೆಲೆ ಇರಲ್ಲ ಅಂತ ಭಯಪಟ್ಟಿದ್ದೀರಿ. ಅದಕ್ಕೆ ಹೀಗೆ ಇಲ್ಲಸಲ್ಲದ ವಾದ ಮಾಡ್ತಿದ್ದೀರಾ. ನಿಮ್ಮನ್ನು ಈಗಾಗಲೇ ಜನ ತಿರಸ್ಕರಿಸಿದ್ದಾರೆ ಲೋಕಸಭೆ ಚುನಾವಣೆಯಲ್ಲೂ ಮನೆಗೆ ಕಳುಹಿಸುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಈ ವೇಳೆ ಹಿರಿಯ ರಂಗಕರ್ಮಿ ಬಸವಲಿಂಗಯ್ಯ ಮಾತನಾಡಿ, ಕಳೆದ ಕೆಲವು ವರ್ಷಗಳಿಂದ ರಾಜ್ಯದಲ್ಲಿ ಹಲಾಲ್, ಹಿಜಾಬ್ ಮತ್ತು ಕೇಸರಿಕರಣದ ಬಗ್ಗೆ ಮಾತ್ರ ಚರ್ಚೆ ಆಗುತ್ತಿತು. ಆದರೆ, ಈಗ ಜನರ ಸವಲತ್ತುಗಳ ಬಗ್ಗೆ ಚರ್ಚಿಸುವ ಕಾಲ ಬಂದಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಎನ್.ಆರ್.ನಾಗೇಶ್, ರಘುನಂದನ್, ಯೋಗೇಶ್ ಉಪ್ಪಾರ್ ಮತ್ತು ಲೋಕೇಶ್ ಕುಮಾರ್ ಮಾದಾಪುರ ಉಪಸ್ಥಿತರಿದ್ದರು.

ಬಸ್ ಸೌಲಭ್ಯಕ್ಕಾಗಿ ಎಬಿವಿಪಿ ಕಾರ್ಯಕರ್ತರಿಂದ ಪ್ರತಿಭಟನೆ



ಮೈಸೂರು, ಜೂ.30 (ಎಂಟಿವೈ)– ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸಾರಿಗೆ ಬಸ್ ವ್ಯವಸ್ಥೆ ಮಾಡುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನೇತೃತ್ವದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶದಿಂದ ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಸೂಕ್ತ ಸಾರಿಗೆ ಬಸ್ ವ್ಯವಸ್ಥೆಯಿಲ್ಲದೆ ತೊಂದರೆಯಾಗುತ್ತಿದೆ. ಬಸ್ ಇಲ್ಲದ ಕಾರಣ ನೂರಾರು ವಿದ್ಯಾರ್ಥಿಗಳು ನಿಗದಿತ ಸಮಯದಲ್ಲಿ ತರಗತಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಿಂದ ವಿದ್ಯಾರ್ಥಿಗಳಿಗೆ ಅನುಕೂಲಕರ ವಾತಾವರಣ ಸೃಷ್ಟಿಸಲು ಹೆಚ್ಚುವರಿ ಬಸ್ ವ್ಯವಸ್ಥೆ ಮಾಡುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಸೂಕ್ತ ಬಸ್ ವ್ಯವಸ್ಥೆಯಿಲ್ಲದ ಕಾರಣ ಬೆಳಗ್ಗೆ ಹಾಗೂ ಸಂಜೆ ವೇಳೆ ಒಂದೊಂದು ಬಸ್‌ನಲ್ಲಿ ನೂರಾರು ಮಂದಿ ಪ್ರಯಾಣಿಸಬೇಕಾದ ದುಸ್ಥಿತಿ ಎದುರಾಗಿದೆ. ಕಳೆದ ವಾರ ವಿದ್ಯಾರ್ಥಿಯೊಬ್ಬರು ಚಲಿಸುತ್ತಿದ್ದ ಬಸ್‌ನಿಂದ ಬಿದ್ದು ಗಾಯಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ಜಿಲ್ಲಾ ಸಂಚಾಲಕ ಶಿವು, ಪ್ರಜ್ವಲ್, ಪ್ರೀತಮ್, ದತ್ತ ದಿನೇಶ್, ಶ್ರೀಕಂಠ, ದಿನೇಶ್ ಕುಮಾರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ನಕಲಿ ನೋಟು: ವಿವಿಧ ಬ್ಯಾಂಕ್ ಮ್ಯಾನೇಜರ್‌ಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ ಆರ್‌ಬಿಐ

ಬೆಂಗಳೂರು: ಬ್ಯಾಂಕುಗಳಿಗೆ ಜಮೆಯಾದ ಹಣದಲ್ಲಿ ನಕಲಿ ನೋಟುಗಳನ್ನು ಪತ್ತೆಹಚ್ಚಿದ ನಂತರ ಬ್ಯಾಂಕ್ ವ್ಯವಸ್ಥಾಪಕರ ವಿರುದ್ಧ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಎಫ್‌ಐಆರ್ ದಾಖಲಿಸಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

100 ಮುಖಬೆಲೆಯ 30 ನಕಲಿ ನೋಟುಗಳು ಪತ್ತೆಯಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ನಾಲ್ಕು ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಡುಪಿ, ಮಣಿಪಾಲ, ಹುಬ್ಬಳ್ಳಿ ಬ್ಯಾಂಕ್ ಶಾಖೆಗಳು ಮತ್ತು ಬೆಂಗಳೂರಿನ ಮಲ್ಲೇಶ್ವರಂ ಶಾಖೆಯಲ್ಲಿ ನಕಲಿ ನೋಟುಗಳು ಪತ್ತೆಯಾಗಿದ್ದು, ಈ ಬ್ಯಾಂಕ್‌ಗಳು ಆರ್‌ಬಿಐಗೆ ರವಾನೆ ಮಾಡಿದ ಹಣದಲ್ಲಿ ನಕಲಿ ಕರೆನ್ಸಿ ನೋಟುಗಳು ಪತ್ತೆಯಾಗಿವೆ.

ಈ ಸಂಬಂಧ ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್, ಯುಬಿಐ ಬ್ಯಾಂಕ್ ಮ್ಯಾನೇಜರ್‌ಗಳ ವಿರುದ್ಧ ಆರ್‌ಬಿಐ ಮ್ಯಾನೇ ಜರ್ ಆನಂದ್ ದೂರು ದಾಖಲಿಸಿದ್ದರು. ವಿಚಾರಣೆಗೆ ಹಾಜರಾಗುವಂತೆ ಬ್ಯಾಂಕ್‌ಗಳ ವ್ಯವಸ್ಥಾಪಕರಿಗೆ ನೋಟಿಸ್ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಇನ್ನಷ್ಟೇ ಹೊರಬರಬೇಕಿದೆ.

ಅಕ್ರಮ ಆಸ್ತಿ ಗಳಿಕೆ ಆರೋಪ

7 ದಿನ ಲೋಕಾಯುಕ್ತ ಪೊಲೀಸ್ ವಶಕ್ಕೆ ತಹಶೀಲ್ದಾರ್ ಅಜಿತ್ ರೈ



ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಕೆ.ಆರ್.ಪುರದ ಹಿಂದಿನ ತಹಶೀಲ್ದಾರ್ ಅಜಿತ್ ಕುಮಾರ್ ರೈ ಅವರನ್ನು ಹೆಚ್ಚಿನ ವಿಚಾರಣೆಗಾಗಿ ಏಳು ದಿನಗಳ ಕಾಲ ಲೋಕಾಯುಕ್ತ ಪೊಲೀಸರ ವಶಕ್ಕೆ ನೀಡಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಹಿನ್ನೆಲೆ ಕೆ.ಆರ್.ಪುರಂ ತಹಶೀಲ್ದಾರ್ ಅಜಿತ್ ರೈ ಬಂಧನವಾಗಿತ್ತು. ಇಂದು ಅಜಿತ್ ರೈ ಯನ್ನು ಪೊಲೀಸರು ಕೋರ್ಟ್‌ಗೆ ಹಾಜರುಪಡಿಸಿದ್ದು, 10 ದಿನ ತಮ್ಮ ವಶಕ್ಕೆ ನೀಡುವಂತೆ ಪೊಲೀಸರು ಮನವಿ ಸಲ್ಲಿಸಿದ್ದರು. ಆದರೆ 7 ದಿನ ಪೊಲೀಸ್ ಕಸ್ಟಡಿಗೆ ನೀಡಿ ಕೋರ್ಟ್ ಆದೇಶ ಹೊರಡಿಸಿದೆ.

ನಗರದ ಕೆ.ಆರ್.ಪುರಂ ತಹಶೀಲ್ದಾರ್ ಅಜಿತ್ ರೈ ನಿವಾಸದ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ಬರೋಬ್ಬರಿ 40 ಲಕ್ಷಕ್ಕೂ ಹೆಚ್ಚು ನಗದು ಸೇರಿದಂತೆ ವಿವಿಧ ಅಕ್ರಮ ಆಸ್ತಿಗಳನ್ನು ಪತ್ತೆ ಹಚ್ಚಿದ್ದರು. ಅಜಿತ್ ರೈಗೆ ಸೇರಿದ 100 ಎಕರೆಗೂ ಅಧಿಕ ವಿವಿಧ ಆಸ್ತಿ ಪತ್ರಗಳು ಸಿಕ್ಕಿದ್ದವು .

ಅಜಿತ್ ರೈ ಸಂಬಂಧಿಕರು, ಸ್ನೇಹಿತರ ಹೆಸರಲ್ಲೂ ಆಸ್ತಿ ಪತ್ರಗಳು, ಆಪ್ತರ ಮನೆಯಲ್ಲಿ ನಾಲ್ಕು ಫಾರ್ಚೂನರ್ ಕಾರುಗಳು ಪತ್ತೆಯಾಗಿವೆ. ಅಜಿತ್ ಆಸ್ತಿಪತ್ರಗಳನ್ನು ಕಂಡು ಅಧಿಕಾರಿಗಳೇ ದಂಗಾಗಿದ್ದರು. ನಿನ್ನೆ ತಹಶೀಲ್ದಾರ್ ಅಜಿತ್ ರೈ ಬಂಧಿಸಿದ್ದ ಪೊಲೀಸರು ನಂತರ ಕೋರ್ಟ್‌ಗೆ ಹಾಜರುಪಡಿಸಿದ್ದರು.

ಕುಡಿಯುವ ನೀರಲ್ಲಿ ಕೊಳಚೆ ನೀರು ಸೇರಿದರೆ ಅಧಿಕಾರಿಗಳೇ ಹೊಣೆ

ಜಿಲ್ಲಾಧಿಕಾರಿ ಡಿಸಿ ರಾಜೇಂದ್ರ ಎಚ್ಚರಿಕೆ



ಮೈಸೂರು,ಜೂ.30(ಬಿಎಲ್‌ಯು)– ಕುಡಿಯುವ ನೀರಿನಲ್ಲಿ ಕೊಳಚೆ ನೀರು ಸೇರಿದರೆ ಸಂಬಂಧಿಸಿದ ಅಧಿಕಾರಿಯನ್ನು ಹೊಣೆ ಮಾಡಿ, ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಕುಡಿಯುವ ನೀರಿನ ಲಭ್ಯತೆ ಕುರಿತಂತೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರಿನ ಗುಣಮಟ್ಟ ಪರಿಶೀಲಿಸಬೇಕು. ಕುಡಿಯುವ ನೀರಿನ ಜೊತೆಗೆ ಬ್ಯಾಕ್ಟೀರಿಯಾ ಅಥವಾ ಕೆಮಿಕಲ್ ಸೇರದಂತೆ ನೋಡಿಕೊಳ್ಳಬೇಕು. ಹಾಗಾಗಿ ಓವರ್ ಹೆಡ್ ಟ್ಯಾಂಕ್ ಮತ್ತು ಸಂಪ್‌ಗಳನ್ನು ಸ್ವಚ್ಛಗೊಳಿಸಬೇಕು. ಚರಂಡಿ ನೀರು ನಿಲ್ಲದಂತೆ ಕೂಡ ಮುಂಜಾಗ್ರತೆ ವಹಿಸಬೇಕು. ಒಂದು ವೇಳೆ ಕುಡಿಯುವ ನೀರಿನಲ್ಲಿ ಕೊಳಚೆ ನೀರು ಸೇರಿದರೆ ಸಂಬಂಧಿಸಿದ ಅಧಿಕಾರಿಯನ್ನು ಹೊಣೆಗಾರರನ್ನಾಗಿ ಮಾಡಿ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಆಗದೆ ಜಲಾಶಯದ ನೀರಿನ ಮಟ್ಟ ಕುಡಿಮೆ ಆಗುತ್ತಿದೆ. ಆದ ಕಾರಣ ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು ಎಂದು ಡಾ.ರಾಜೇಂದ್ರ ತಿಳಿಸಿದರು.

ಮೈಸೂರು ಜಿಲ್ಲೆಯ 256 ಗ್ರಾಮ ಪಂಚಾಯಿತಿ ಹಾಗೂ 13 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಕುಡಿಯುವ ನೀರು ಸರಬರಾಜು ಮಾಡಬೇಕು. ನೀರಿನ ಲಭ್ಯತೆ ಬಗ್ಗೆ ಪ್ರತಿದಿನ ಮಾಹಿತಿ ನೀಡಬೇಕು. ಕುಡಿಯುವ ನೀರಿಗೆ ಸಮಸ್ಯೆ ಎದುರಾಗುವ ಗ್ರಾಮಗಳ ಪಟ್ಟಿ ಮಾಡಿಕೊಳ್ಳಿ ಎಂದು ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು.

ಸದ್ಯದ ಪರಿಸ್ಥಿತಿಯಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ. ಒಂದು ವೇಳೆ ತೊಂದರೆ ಎದುರಾದರೆ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಸರಬರಾಜು ಮಾಡಿ. ಜೊತೆಗೆ ಟ್ಯಾಂಕರ್‌ಗಳ ಮೂಲಕವೂ ನೀರು ಪೂರೈಕೆ ಮಾಡಿ ಎಂದು ಡಾ.ರಾಜೇಂದ್ರ ಹೇಳಿದರು.

ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ವ್ಯವಸಾಯಕ್ಕೆ ನೀರು ನೀಡುತ್ತಿಲ್ಲ ಮೈಸೂರು ನಗರಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಮಳೆ ಇಲ್ಲದೆ ಇದ್ದರೂ ಆಗಸ್ಟ್ 15 ರ ತನಕ ಕುಡಿಯುವ ನೀರಿಗೆ ಕೊರತೆ ಇಲ್ಲ ಎಂದು ನಗರ ಪಾಲಿಕೆ ಆಯುಕ್ತ ಡಾ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ಕುಡಿಯುವ ನೀರಿನ ಮಾದರಿಗಳನ್ನು ಸಂಗ್ರಹಿಸಿ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷಿಸಬೇಕು. ಈ ಮೂಲಕ ಬ್ಯಾಕ್ಟೀರಿಯಾ ಹಾಗೂ ಹಾನಿಕಾರಕ ಲೋಹ ಮುಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಿ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕುಡಿಯುವ ನೀರಿಗೆ ತೊಂದರೆ ಆಗದಂತೆ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಸುರೇಶ್ ವಿವರಿಸಿದರು. ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾವ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಗ್ರಾಮಗಳಲ್ಲಿ ದ್ವಿಚಕ್ರ ವಾಹನಗಳ ಕಳವು


ಬನ್ನೂರು, ಜೂ.30–ಬನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಒಂದೇ ದಿನ ಬೇರೆ ಬೇರೆ ಗ್ರಾಮಗಳಲ್ಲಿ ಖದೀಮರು ಎರಡು ದ್ವಿಚಕ್ರ ವಾಹನಗಳನ್ನು ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ತಿ.ನರಸೀಪುರ ತಾಲೂಕು ನುಗ್ಗಹಳ್ಳಿ ಕೊಪ್ಪಲು ನಿವಾಸಿಯಾಗಿದ್ದು, ರಾಮನಗರ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಕಾನ್‌ಸ್ಟೇಬಲ್ ಆಗಿರುವ ಜಿ.ಪಿ.ರಾಜೇಂದ್ರ(28) ಅವರು ರಜೆ ಮೇಲೆ ಜೂ.27ರಂದು ರಾತ್ರಿ ತಮ್ಮ ಸ್ವಗ್ರಾಮಕ್ಕೆ ಬಂದಿದ್ದರು. ಅವರು ತಮ್ಮ ಮನೆಯ ಮುಂದೆ ಬೈಕ್ (ಕೆಎ 42 ವೈ 7099) ನಿಲ್ಲಿಸಿದ್ದು, ಮರು ದಿನ ಬೆಳಗ್ಗೆ ನೋಡಿದಾಗ ಅದನ್ನು ಕಳವು ಮಾಡಿರುವುದು ಗೊತ್ತಾಗಿದೆ. ಮತ್ತೊಂದು ಪ್ರಕರಣದಲ್ಲಿ ತಿ.ನರಸೀಪುರ ತಾಲೂಕು ಕೆಂಪೇಗೌಡನಕೊಪ್ಪಲು ಗ್ರಾಮದ ಪ್ಲಾಸ್ಟಿಕ್ ವ್ಯಾಪಾರಿ ಶಿವಣ್ಣ(54) ಎಂಬುವರು ತಮ್ಮ ಮನೆ ಮುಂದೆ ಟಿವಿಎಸ್ ಎಕ್ಸೆಲ್ ಹೆವಿ ಡ್ಯೂಟಿ ಮೊಪೆಡ್ (ಕೆಎ 55 ಜೆ 2637) ಅನ್ನು ನಿಲ್ಲಿಸಿ ಮನೆಯಲ್ಲಿ ಮಲಗಿದ್ದರು. ಅಂದು ಮಧ್ಯರಾತ್ರಿ 12.30ರ ಸುಮಾರಿನಲ್ಲಿ ನಾಯಿ ಬೊಗಳುವ ಶಬ್ದ ಕೇಳಿ ಹೊರ ಬಂದು ನೋಡುವಷ್ಟರಲ್ಲಿ ಅವರ ಮೊಪೆಡ್ ಕಳವು ಮಾಡಲಾಗಿತ್ತು. ಈ ಎರಡೂ ಪ್ರಕರಣಗಳು ಬನ್ನೂರು ಠಾಣೆಯಲ್ಲಿ ದಾಖಲಾಗಿವೆ.

ತಾಳೆಗರಿ, ಹಸ್ತಪ್ರತಿಗಳ ಸಂರಕ್ಷಣೆ ಕಾರ್ಯ, ಡಿಜಿಟಲೀಕರಣ ಶೇ.60ರಷ್ಟು ಪೂರ್ಣ

ಡಿಸೆಂಬರ್ ವೇಳೆಗೆ ಬಹುತೇಕ ಕಾರ್ಯ ಪೂರ್ಣಗೊಳ್ಳುವ ನಿರೀಕ್ಷೆ; 30ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯಾಚರಣೆ







ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯ ತ್ವರಿತವಾಗಿ ನಡೆಯುತ್ತಿದ್ದು, ಡಿಸೆಂಬರ್ ಅಂತ್ಯದಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಪ್ರಾಚ್ಯ ವಿದ್ಯಾ ಸಂಶೋಧನಾಲಯ ನಿರ್ದೇಶಕ ಡಾ.ಡಿ.ಪಿ.ಮಧುಸೂಧನ್ ಆಚಾರ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ತಾಳೆಗರಿ ಸಂರಕ್ಷಣೆಯ ಜೊತೆ ಸಂಸ್ಥೆಯೂ ವಿವಿಧ ಕಾರ್ಯಗಳನ್ನು ಮಾಡುತ್ತಿದ್ದು, ಅದರಂತೆ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ವತಿಯಿಂದ ಅಷ್ಟಾದಶಿ ಯೋಜನೆಯಡಿ ಎರಡು ಅಪರೂಪದ ಹಸ್ತಪ್ರತಿಗಳಾದ ಜಗನ್ನಾಥ ವಿಜಯ ಮತ್ತು ನ್ಯಾಯ ಶಾಸ್ತ್ರಗ್ರಂಥವಾದ ತತ್ವ ಚಿಂತಾಮಣಿ ಹಸ್ತಪ್ರತಿಗಳ ಸಂಶೋಧನಾ ಚಟುವಟಿಕೆಗೆ 34 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ವಿದ್ವಾಂಸರಾದ ಹೆಚ್.ವಿ.ನಾಗರಾಜರಾವ್ ಅವರು ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಮತ್ತೊಂದೆಡೆ ಕೇಂದ್ರ ಭಾರತೀಯ ಜ್ಞಾನ ವ್ಯವಸ್ಥೆ ಸಂಸ್ಥೆಯು ವೈಜ್ಞಾನಿಕ ಹಸ್ತಪ್ರತಿಗಳ ಸಂಪಾದನೆ ಮಾಡಲು ಮತ್ತೊಂದು ಯೋಜನೆ ರೂಪಿಸಿದ್ದು, ಅದರಂತೆ ಇದಕ್ಕಾಗಿ 15 ಲಕ್ಷ ರೂ. ಅನುದಾನ ನೀಡಲು ಮುಂದಾಗಿದೆ. ಈ ಪ್ರಕ್ರಿಯೆಯೂ ಮಾತು ಕತೆಯ ಹಂತದಲ್ಲಿದೆ ಎಂದರು.

ಮೈಸೂರು,ಜೂ.30(ಜಿಎ)– ಮೈಸೂರು ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯ ಕಾರ್ಯ ತ್ವರಿತವಾಗಿ ನಡೆಯುತ್ತಿದೆ. ಶೇ.60ರಷ್ಟು ತಾಳೆಗರಿಗಳ ಸಂರಕ್ಷಣೆಯಾಗಿದ್ದು, ಜೊತೆಗೆ 3 ಸಾವಿರ ತಾಳೆಗರಿಗಳು ಡಿಜಿಟಲೀಕರಣವಾಗಿವೆ.

ಇಲ್ಲಿರುವ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆ ಮತ್ತು ಡಿಜಿಟಲೀಕರಣದ ಉದ್ದೇಶದಿಂದ ಮೈಸೂರು ವಿಶ್ವವಿದ್ಯಾಲಯವು 2022ರ ಫೆಬ್ರವರಿ ತಿಂಗಳಲ್ಲಿ ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿತ್ತು. ಅದರಂತೆ ಈ ಸಂಸ್ಥೆಯು ಇಲ್ಲಿರುವ ಪ್ರತಿಯೊಂದು ತಾಳೆಗರಿಯನ್ನು ಸೂಕ್ಷ್ಮವಾಗಿ ಸಂರಕ್ಷಣೆ ಮಾಡುತ್ತಿದೆ. ಜೊತೆಗೆ ಡಿಜಿಟಲೀಕರಣಕ್ಕೂ ಮುಂದಾಗಿದ್ದು, ಈ ಕಾರ್ಯ ಸಾಕಷ್ಟು ಪ್ರಗತಿ ಸಾಧಿಸಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಮುಕ್ತಾಯವಾಗುವ ಸಾಧ್ಯತೆ ಇದೆ.

ಬೆಂಗಳೂರಿನ ದಿ ಮಿಥಿಕ್ ಸೊಸೈಟಿಯು 112 ವರ್ಷಗಳಷ್ಟು ಹಳೆಯ ಸಂಸ್ಥೆಯಾಗಿದ್ದು, ಈಗಾಗಲೇ ಅನೇಕ ರೀತಿಯ ತಾಳೆಗರಿಗಳು ಮತ್ತು ಅಪರೂಪದ ಹಸ್ತಪ್ರತಿಗಳ ಸಂರಕ್ಷಣೆಯನ್ನು ಮಾಡಿ ನೈಪುಣ್ಯತೆ ಹೊಂದಿದೆ. ಈ ಸಂರಕ್ಷಣೆ ಕಾರ್ಯದಲ್ಲಿ 34 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭಾರತದಲ್ಲಿಯೇ ಅತೀ ಹೆಚ್ಚು ತಾಳೆಗರಿ ಮತ್ತು ಹಸ್ತ ಪ್ರತಿಗಳನ್ನು ಒಳಗೊಂಡಿರುವ ಸಂಸ್ಥೆಗಳಲ್ಲಿ ಮೈಸೂರಿನ ಪ್ರಾಚ್ಯ ವಿದ್ಯಾ ಸಂಶೋಧನಾಲಯ ಎರಡನೇ ಸ್ಥಾನದಲ್ಲಿದ್ದು, ಇಲ್ಲಿ 650 ರಿಂದ 700 ವರ್ಷಗಳ ಕನ್ನಡ, ಸಂಸ್ಕೃತ, ತಮಿಳು ಮತ್ತು ತೆಲುಗು ಸೇರಿದಂತೆ ವಿವಿಧ ಭಾಷೆಯ ಹಸ್ತ ಪ್ರತಿಗಳಿದ್ದು, ಬಹಳಷ್ಟು ಸೂಕ್ಷ್ಮವಾಗಿ ಸಂರಕ್ಷಣೆ ಮಾಡಬೇಕಿದೆ. ಅದರಂತೆ ಮೊದಲು ಆಯ್ಕೆ ಮಾಡಿಕೊಂಡಿರುವ ತಾಳೆಗರಿಗಳನ್ನು ಬ್ರೆಷ್ ಮೂಲಕ ಸ್ವಚ್ಛಗೊಳಿಸಲಾಗುತ್ತದೆ. 80, 90ರ ದಶಕದ ನಂತರ ಇಲ್ಲಿರುವ ತಾಳೆಗರಿಗಳು ಬೂಸ್ಟ್ ಅಥವಾ ಹುಳುಗಳು ತಿಂದಿರುವ ಸಾಧ್ಯತೆ ಇದ್ದು, ಅದಕ್ಕಾಗಿ ಹ್ಯೂಮಿಗೇಷನ್‌ನ ಕೊಠಡಿಯೊಳಗೆ ಇರಿಸಿ ಬೂಸ್ಟ್ ಇದ್ದರೆ ಟ್ರೈಮಾಲ್, ಹುಳು ಮತ್ತು ಅವುಗಳ ಮೊಟ್ಟೆ ಕಂಡುಬಂದರೆ ಪ್ಯಾರಡೈಮಾಲ್ ಕ್ಲೋರ್ ರಾಸಾಯನಿಕಗಳ ಹೊಗೆಯ ಮೂಲಕ ಸಂಸ್ಕರಣೆ ಮಾಡುತ್ತಿದ್ದಾರೆ.

ದೀರ್ಘ ಕಾಲ ಸಂರಕ್ಷಿಸುವ ಉದ್ದೇಶದಿಂದ ಮಜ್ಜಿಗೆ ಹುಲ್ಲಿನ ಎಣ್ಣೆ ಹಚ್ಚಿ ಕೆಲ ಕಾಲ ಒಣಗಿಸಲಾಗುತ್ತದೆ. ಮಜ್ಜಿಗೆ ಹುಲ್ಲಿನ ಎಣ್ಣೆಯಲ್ಲಿ ಯಾವುದೇ ಜಿಡ್ಡಿನ ಅಂಶವಿರುವುದಿಲ್ಲ ಮತ್ತು ಅದರ ವಾಸನೆಗೆ ಮತ್ತೆ ಯಾವುದೇ ಹುಳುಗಳು ತಾಳೆಗರಿ ಸೇರುವುದಿಲ್ಲ ಹಾಗೂ ಗರಿಗಳು ಮತ್ತಷ್ಟು ಮೃದುವಾಗುತ್ತವೆ. ಈ ಪ್ರಕ್ರಿಯೆಯಿಂದ ತಾಳೆಗರಿಗಳು ಮತ್ತಷ್ಟು ವರ್ಷಗಳು ಬಳಕೆ ಬರುತ್ತವೆ. ಮಜ್ಜಿಗೆ ಹುಲ್ಲಿನ ಎಣ್ಣೆಯಲ್ಲಿ ಒಣಗಿದ್ದ ನಂತರ ಅದಕ್ಕೆ ಒಂದು ಕೆಂಪು ಕಾಟನ್ ಬಟ್ಟೆ ಸುತ್ತಲಾಗುತ್ತದೆ. ಅದಕ್ಕೂ ಮೊದಲು ಕಾಟನ್ ಬಟ್ಟೆಯಲ್ಲಿರುವ ಗಂಜಿಯನ್ನು ಸಂಪೂರ್ಣವಾಗಿ ತೆಗೆಯಲಾಗುತ್ತದೆ. ಕೆಂಪು ಕಾಟನ್ ಬಟ್ಟೆ ಬಳಕೆಯಿಂದ ತಾಳೆಗರಿಗಳು ಸುರಕ್ಷಿತವಾಗಿರಲಿವೆ. ಈ ಎಲ್ಲಾ ಹಂತದ ಪ್ರಕ್ರಿಯೆ ಮುಗಿದ ನಂತರ ಡಿಜಿಟಲೀಕರಣ ಮಾಡುತ್ತಿದ್ದು, ಡಿಜಿಟಲೀಕರಣಕ್ಕೆ ಯಾವುದೇ ಜೆರಾಕ್ಸ್ ಮೆಷಿನ್ ಬಳಸದೇ czur ಸ್ಕ್ಯಾನರ್ ಅನ್ನು ಬಳಸುತ್ತಿದ್ದಾರೆ. ಏಕೆಂದರೆ ಇದರಿಂದ ತಾಳೆಗರಿಗಳಿಗೆ ಹಾನಿ ಆಗುವುದಿಲ್ಲ.

czur ಸ್ಕ್ಯಾನರ್ ಸ್ಕ್ಯಾನರ್ ಮೂಲಕ ಪಿಡಿಎಫ್, ಜೆಪಿಜೆ, ಪಿಎನ್‌ಜಿ ಸೇರಿದಂತೆ ಅನೇಕ ವಿಧಾನ ಅನುಸರಿಸಿ, ಅಂತಿಮವಾಗಿ ವೈಬ್‌ಸೈಟ್‌ಗೆ ಅಪ್ ಲೋಡ್ ಮಾಡಲಿದ್ದಾರೆ. ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿರುವ ತಾಳೆಗರಿಗಳು, ಹಸ್ತಪ್ರತಿಗಳನ್ನು ವೆಬ್‌ಸೈಟ್‌ಗೆ ಅಪ್ ಲೋಡ್ ಮಾಡಲು ಸಂಸ್ಥೆ ವತಿಯಿಂದ ಪ್ರತ್ಯೇಕ ಸೈಟ್ ಮಾಡುತ್ತಿದ್ದು, ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿನ ತಾಳೆಗರಿಗಳ ಆಧರಿಸಿ ಸಂಶೋಧನೆಗಾಗಿ ದೇಶ ವಿದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸಿ, ಇಲ್ಲಿ ಬೇಕಾಗುವ ಮಾಹಿತಿಗಳನ್ನು ಪಡೆದುಕೊಂಡು ಹೋಗುತ್ತಾರೆ. ಆದರೆ ಡಿಜಿಟಲೀಕರಣವಾದ ನಂತರ ವೆಬ್‌ಸೈಟ್ ಮೂಲಕವೇ ಬೇಕಿರುವ ತಾಳೆಗರಿಗಳು ಮತ್ತು ವಿಷಯಗಳನ್ನು ಪಡೆಯಬಹುದಾಗಿದೆ.

ಇಂದು ವನ ಮಹೋತ್ಸವ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ

ಮಡಿಕೇರಿ, ಜೂ.30– ಇದೇ ಜು.1 ರಿಂದ 7 ರವರೆಗೆ ವನ ಮಹೋತ್ಸವ ಸಪ್ತಾಹ ಕಾರ್ಯಕ್ರಮ ಜರುಗಲಿದ್ದು, ಜು.1 ರಂದು ಬೆಳಗ್ಗೆ 11 ಗಂಟೆಗೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಆವರಣದಲ್ಲಿ ವನ ಮಹೋತ್ಸವ ಸಪ್ತಾಹ ಕಾರ್ಯಕ್ರಮಕ್ಕೆ ಗಣ್ಯರು ಚಾಲನೆ ನೀಡಲಿದ್ದಾರೆ.

ಇಂದು ಅಣಕು ಕಾರ್ಯಾಚರಣೆ

ಮಡಿಕೇರಿ, ಜೂ.30– ಜಿಲ್ಲಾಡಳಿತ, ಎನ್‌ಡಿಆರ್‌ಎಫ್ ತಂಡ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಪ್ರಾಕೃತಿಕ ವಿಕೋಪ ಸಂಭವಿಸಿದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಕುರಿತು ಅರಿವು ಮೂಡಿಸುವ ಸಲುವಾಗಿ ಜು.1 ರಂದು ಬೆಳಗ್ಗೆ 11 ಗಂಟೆಗೆ ತಾಲ್ಲೂಕಿನ ಕೆ.ನಿಡುಗಣೆ ಪಂಚಾಯತ್ ವ್ಯಾಪ್ತಿಯ ಹೆಬ್ಬೆಟ್ಟಗೇರಿ ಗ್ರಾಮದಲ್ಲಿ ಅಣಕು ಕಾರ್ಯಾಚರಣೆ ನಡೆಯಲಿದೆ.

ಹೆಬ್ಬೆಟ್ಟಗೇರಿ ಗ್ರಾಮದಲ್ಲಿ (ಕುಮಾರಸ್ವಾಮಿ ಬಡಾವಣೆಗೆ ಹೋಗುವ ರಸ್ತೆ) ನಡೆಯುವ ಅಣಕು ಕಾರ್ಯಾಚರಣೆಯಲ್ಲಿ ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ಕೋರಿದ್ದಾರೆ.

ಮಡಿಕೇರಿ ನೀರು ಸರಬರಾಜು ಕೆಯುಡಬ್ಲ್ಯೂಎಸ್‌ಗೆ

ಒಂದು ವರ್ಷದವರೆಗೆ ಜವಾಬ್ದಾರಿ ನೀಡಲು ನಗರಸಭೆ ನಿರ್ಣಯ

ಮಡಿಕೇರಿ, ಜೂ.30– 'ಕುಂಡಾ ಮೇಸ್ತ್ರಿ' ಯೋಜನೆಯ ಮೂಲಕ ಮಡಿಕೇರಿಗೆ ನೀರು ಸರಬರಾಜು ಮಾಡುವ ಜವಾಬ್ದಾರಿಯನ್ನು ಒಂದು ವರ್ಷಗಳ ಕಾಲ ಕರ್ನಾಟಕ ರಾಜ್ಯ ನೀರು ಸರಬರಾಜು ಮಂಡಳಿ(ಕೆಯುಡಬ್ಲ್ಯೂಎಸ್) ಗೆ ವಹಿಸಿಕೊಡುವ ಮಹತ್ವದ ನಿರ್ಣಯವನ್ನು ನಗರಸಭಾ ಸಾಮಾನ್ಯ ಸಭೆಯಲ್ಲಿ ಕೈಗೊಳ್ಳಲಾಯಿತು.



ಮಡಿಕೇರಿ ನಗರಸಭೆಯ ಸಭಾಂಗಣದಲ್ಲಿ ಚುನಾವಣೆ ನಂತರ ನಡೆದ ಪ್ರಥಮ ಸಾಮಾನ್ಯ ಸಭೆಯಲ್ಲಿ, ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂಥರ್ ಗೌಡ ಅವರ ಉಪಸ್ಥಿತಿಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಮಾತ್ರವಲ್ಲದೇ, ಕೆಯುಡಬ್ಲ್ಯೂಎಸ್‌ನ ಕುಡಿಯುವ ನೀರು ಸಂಪರ್ಕ ವ್ಯವಸ್ಥೆಯ 20 ಕೋಟಿ ವೆಚ್ಚದ ಯೋಜನೆಗೆ ಇದೇ ಸಂದರ್ಭ ಒಪ್ಪಿಗೆಯನ್ನು ನೀಡಲಾಯಿತು.

ನಗರಸಭೆಯ ಎಸ್‌ಡಿಪಿಐ ಸದಸ್ಯ ಮನ್ಸೂರ್ ಮಾತನಾಡಿ, ಕುಂಡಾಮೇಸ್ತ್ರಿ ಯೋಜನೆಯಡಿ ಎರಡು 300 ಹೆಚ್.ಪಿ ಪಂಪ್‌ಗಳು ದುರಸ್ತಿಗೀಡಾಗಿ ಮಡಿಕೇರಿ ನಗರದ ನೀರು ಸರಬರಾಜು ವ್ಯವಸ್ಥೆ ಕೆಲ ದಿನಗಳ ಕಾಲ ಹದಗೆಟ್ಟಿತ್ತು ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂದರ್ಭ ಸದಸ್ಯ ಕೆ.ಎಸ್.ರಮೇಶ್ ಮಾತನಾಡಿ, ಕುಂಡಾ ಮೇಸ್ತ್ರಿ ಯೋಜನೆಯಡಿ ಕೂಟುಹೊಳೆಗೆ ನೀರು ಪಂಪ್ ಮಾಡುವ ಎರಡು ಮೋಟಾರುಗಳು ಹಾಳಾಗಿದ್ದರು, ಅದನ್ನು ಅಧಿಕಾರಿಗಳು ಮತ್ತು ಸಂಬಂಧಪಟ್ಟವರು ಹಗಲಿರುಳೆನ್ನದೆ ಶ್ರಮಿಸಿ ಸರಿಪಡಿಸಿದ್ದಾರೆ. ಈ ನಡುವೆ ಒಂದೆರಡು ದಿನಗಳ ಕಾಲವಷ್ಟೆ ನೀರಿನ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿತ್ತು ಎಂದು ಸಮಜಾಯಿಷಿ ನೀಡಿದರು.

ಮಡಿಕೇರಿ ನಗರಕ್ಕೆ ಅಗತ್ಯ ನೀರನ್ನು ಒದಗಿಸಿಕೊಡುವ ಕುಂಡಾ ಮೇಸ್ತ್ರಿ ಯೋಜನೆಯನ್ನು ಕ್ರಮ ಬದ್ಧವಾಗಿ ಇಂದಿಗೂ ಕೆಯುಡಬ್ಲ್ಯೂಎಸ್ ಮಡಿಕೇರಿ ನಗರಸಭೆಗೆ ಹಸ್ತಾಂತರಿಸಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.

ಈ ಹಂತದಲ್ಲಿ ಕೆಯುಡಬ್ಲ್ಯೂಎಸ್ ಅಧಿಕಾರಿ, ಇದಕ್ಕೆ ಕಾರಣವಾದ ಅಂಶಗಳನ್ನು ತಿಳಿಸಿದರಲ್ಲದೆ, ಕುಶಾಲನಗರದಲ್ಲಿ ಕೆಯುಡಬ್ಲ್ಯೂಎಸ್‌ನಿಂದ ವ್ಯವಸ್ಥಿತವಾಗಿ ನಗರಕ್ಕೆ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು. ಈ ಸಂದರ್ಭ ಸದಸ್ಯ ಮನ್ಸೂರ್ ಅವರು, ಕುಂಡಾ ಮೇಸ್ತ್ರಿ ಯೋಜನೆಯಡಿ ಅಗತ್ಯ ನೀರು ಇದ್ದರೂ ಮಡಿಕೇರಿಗೆ ಪ್ರತಿನಿತ್ಯ ಏತಕ್ಕಾಗಿ ವ್ಯವಸ್ಥಿತ ನೀರು ಸರಬರಾಜು ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಮಧ್ಯ ಪ್ರವೇಶಿಸಿದ ಶಾಸಕ ಡಾ. ಮಂಥರ್ ಗೌಡ ಅವರು, ಕುಂಡಾ ಮೇಸ್ತ್ರಿ ಯೋಜನೆಯಿಂದ ಮಡಿಕೇರಿ ನಗರಕ್ಕೆ ಒಂದು ವರ್ಷಗಳ ಕಾಲ ನೀರು ಸರಬರಾಜು ಮಾಡುವ ಜವಾಬ್ದಾರಿಯನ್ನು ಕೆಯುಡಬ್ಲ್ಯೂಎಸ್‌ಗೆ ವಹಿಸಿಕೊಡಬೇಕೆಂದು ತಿಳಿಸಿದರು. ಇದಕ್ಕೆ ನಗರಸಭಾ ಸದಸ್ಯರು ಧ್ವನಿಗೂಡಿಸಿದ ಹಿನ್ನೆಲೆ, ವಿಷಯವನ್ನು ನಿರ್ಣಯ ಮಾಡಿ ಮಂಡಳಿಗೆ ಕಳುಹಿಸಿಕೊಡಲು ನಿರ್ಧರಿಸಲಾಯಿತು.

54 ಕಿ.ಮೀ. ಪೈಪ್‌ಲೈನ್: ಕೆಯುಡಬ್ಲ್ಯೂಎಸ್ ಅಧಿಕಾರಿ, ಇಲಾಖೆಯ ಯೋಜನೆಯ ಬಗ್ಗೆ ಸಭೆಗೆ ಮಾಹಿತಿ ನೀಡಿ, 1 ಲಕ್ಷ ಜನಸಂಖ್ಯೆಯೊಳಗೆ ಒಳಪಟ್ಟ ರಾಜ್ಯದ ನಾಲ್ಕು ಪಟ್ಟಣಗಳನ್ನು ಇಲಾಖೆ ನೀರು ಸರಬರಾಜು ಸಂಪರ್ಕ ಜಾಲವನ್ನು ವ್ಯವಸ್ಥಿತವಾಗಿ ನಿರ್ಮಿಸಲು ಆಯ್ಕೆ ಮಾಡಿದ್ದು, ಅದರಲ್ಲಿ ಒಂದು ಮಡಿಕೇರಿ. ಅದರಂತೆ ಮಡಿಕೇರಿಯಲ್ಲಿ ಲಭ್ಯವಿರುವ ನೀರಿನ ಮೂಲಗಳನ್ನು ಬಳಸಿ, ನಗರವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿಕೊಂಡು 56.39 ಕೋಟಿಯ ನೂತನ ಪೈಪ್ ಲೈನ್ ಅಳವಡಿಕೆಯ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಇದರಲ್ಲಿ ಮೊದಲನೇ ವಿಭಾಗದಲ್ಲಿ 54 ಕಿ.ಮೀ. ಪೈಪ್‌ಲೈನ್ ಬರುತ್ತದೆ. ಇದಕ್ಕಾಗಿ 20 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ. ಇದಕ್ಕೆ ನಗರಸಭೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೋರಿದರು.

ಕೆಯುಡಬ್ಲ್ಯೂಎಸ್‌ನ ಯೋಜನೆಯ ಮೊದಲನೇ ವಿಭಾಗದ ಡೈರಿ ಫಾರಂ, ಸುಬ್ರಹ್ಮಣ್ಯ ನಗರ ಮೊದಲಾದ ಬಡಾವಣೆಗಳನ್ನು ಹೊಂದಿದೆ. ಹಳೆಯ ಪೈಪ್‌ಲೈನ್‌ಗಳಿಗೆ ಬದಲಾಗಿ ಹೊಸ ಪೈಪ್‌ಲೈನ್‌ಗಳನ್ನು ಅಳವಡಿಸಲಾಗುತ್ತದೆ ಮತ್ತು ಈ ಸಂದರ್ಭ ರಸ್ತೆ ನಡುವೆ ಪೈಪ್‌ಲೈನ್ ಹಾದು ಹೋದಲ್ಲಿ ಯೋಜನೆಯಡಿಯೇ ಅದನ್ನು ಸರಿಪಡಿಸಲಾಗುತ್ತದೆಂದು ಮಾಹಿತಿ ಒದಗಿಸಿದರು. ಈ ಯೋಜನೆಗೆ ಸಭೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ವಿಧಾನ ಸಭಾ ಚುನಾವಣೆ ಬಳಿಕ ನಡೆದ ಮಡಿಕೇರಿ ನಗರಸಭೆಯ ಪ್ರಥಮ ಸಾಮಾನ್ಯ ಸಭೆಯಲ್ಲಿ ಮಡಿಕೇರಿ ಕ್ಷೇತ್ರದ ನೂತನ ಶಾಸಕ ಡಾ.ಮಂಥರ್ ಗೌಡ ಅವರಿಗೆ 'ಪೌರ ಸನ್ಮಾನ' ನೀಡಿ ಗೌರವಿಸಲಾಯಿತು.

ಶಾಸಕರಿಗೆ ಪೌರ ಸನ್ಮಾನ

ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಉಪಾಧ್ಯಕ್ಷೆ ಸವಿತಾ ರಾಕೇಶ್, ಪೌರಾಯುಕ್ತ ವಿಜಯ್ ಹಾಗೂ ಸದಸ್ಯರು ಶಾಸಕ ಡಾ.ಮಂಥರ್ ಗೌಡರಿಗೆ ಸಾಂಪ್ರದಾಯಿಕ ಪೇಟ ತೊಡಿಸಿ, ಫಲ ತಾಂಬೂಲ ನೀಡಿ ಸನ್ಮಾನಿಸಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಡಾ.ಮಂಥರ್ ಗೌಡ, ಇದೀಗ ಚುನಾವಣೆ ಮುಗಿದಿದ್ದು, ರಾಜಕೀಯ ಮರೆತು ಅಧಿಕಾರಿಗಳು, ಜನಪ್ರತಿನಿಧಿಗಳು ಒಂದಾಗಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಮೂಲಕ ಜನರಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಮುಂದಾಗೋಣವೆಂದು ಕರೆ ನೀಡಿದರು. ತಾನು ಎಂದಿಗೂ ಅಭಿವೃದ್ಧಿ ಕಾರ್ಯಗಳ ಸಂದರ್ಭ ರಾಜಕೀಯ ಮಾಡುವುದಿಲ್ಲ ಮತ್ತು ಯಾರಲ್ಲೂ ಭಿನ್ನ ಭೇದ ಎಣಿಸುವುದಿಲ್ಲ. ನಗರದ ಎಲ್ಲಾ ವಾರ್ಡ್‌ಗಳಿಗೆ ಭೇಟಿ ನೀಡಿ ಅಲ್ಲಿನ ಕುಂದುಕೊರತೆಗಳನ್ನು ಗಮನಿಸಿ ಕಾರ್ಯಪ್ರವೃತ್ತರಾಗೋಣ, ಜನಪರವಾದ ಚರ್ಚೆಗಳನ್ನು ನಡೆಸೋಣವೆಂದು ತಿಳಿಸಿದರು.

ಸದಸ್ಯ ಮನ್ಸೂರ್ ಅವರು ಈ ಸಂದರ್ಭ ಮಾತನಾಡಿ, ನಗರದಲ್ಲಿ ವ್ಯವಸ್ಥಿತ ನೀರು ಸರಬರಾಜು, ಮಾರುಕಟ್ಟೆ, ನಿವೇಶನ ಹಂಚಿಕೆಯ ಸಾಕಷ್ಟು ಸಮಸ್ಯೆಗಳಿದ್ದು, ನೂತನ ಶಾಸಕರು ಈ ಬಗ್ಗೆ ಗಮನ ಹರಿಸಿ ಬಗೆಹರಿಸಬೇಕು ಮತ್ತು ಮಡಿಕೇರಿ ನಗರದ ಅಭಿವೃದ್ಧಿಗೆ ವಿಶೇಷ ನಿಧಿಯನ್ನು ಸರ್ಕಾರದಿಂದ ಒದಗಿಸಬೇಕೆಂದು ಮನವಿ ಮಾಡಿದರು.

ವಿಶೇಷ ಅನುದಾನಕ್ಕೆ ಮನವಿ: ಬಿಜೆಪಿ ಸದಸ್ಯ ಕೆ.ಎಸ್. ರಮೇಶ್ ಪಕ್ಷದ ಪರವಾಗಿ ನೂತನ ಶಾಸಕರನ್ನು ಅಭಿನಂದಿಸಿ, ನಿಮ್ಮ ರಾಜಕೀಯ ಭವಿಷ್ಯ ಉಜ್ವಲವಾಗಲೆಂದು ಹಾರೈಸಿದರು. ಯಾರೇ ಶಾಸಕರು, ಸರ್ಕಾರಗಳು ಬಂದರು ನಗರದ ಸಮಸ್ಯೆಗಳನ್ನೆಲ್ಲ ಸಂಪೂರ್ಣವಾಗಿ ಬಗೆಹರಿಸಲು ಸಾಧ್ಯವಾಗಿಲ್ಲ. ಹಿಂದಿನ ಶಾಸಕರು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಮನವಿ ಮಾಡಿದರು. ಲಭ್ಯವಿರುವ ಅನುದಾನದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ನಗರದ ರಸ್ತೆಗಳ ಅಭಿವೃದ್ಧಿಗೆ 5 ಕೋಟಿ ವಿಶೇಷ ಅನುದಾನ ಒದಗಿಸಲು ನೂತನ ಶಾಸಕರು ಪ್ರಯತ್ನಿಸಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ನಗರಸಭಾ ಉಪಾಧ್ಯಕ್ಷ ಸವಿತಾ ರಾಕೇಶ್, ಪೌರಾಯುಕ್ತ ವಿಜಯ್, ನಗರಸಭಾ ಸದಸ್ಯರುಗಳು ಉಪಸ್ಥಿತರಿದ್ದರು.

ನಾಳೆ ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ, ಪ್ರತಿಭಾ ಪುರಸ್ಕಾರ ಸಮಾರಂಭ

ವಿರಾಜಪೇಟೆ, ಜೂ.30– ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವಾರ್ಷಿಕ ಮಹಾಸಭೆ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಮತ್ತು ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ಜು.2 ರಂದು ಬೆಳಗ್ಗೆ 10.30 ಗಂಟೆಗೆ ವಿರಾಜಪೇಟೆ ಪಂಜರ್‌ಪೇಟೆಯ ಎ–ಟು–ಜೆಡ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಎಸ್. ಮುಸ್ತಾಫ ತಿಳಿಸಿದ್ದಾರೆ

ಸಮಾರಂಭದಲ್ಲಿ ವೀಕ್ಷಕರಾಗಿ ಆನಂದ್ ಕೊಡಗು ಪಾಲ್ಗೊಳ್ಳಲಿದ್ದು, ಜಿಲ್ಲಾಧ್ಯಕ್ಷರಾದ ಬಿ.ಆರ್.ಸವಿತಾ ರೈ, ಪ್ರಧಾನ ಕಾರ್ಯದರ್ಶಿ ಬಾಚರಣಿಯಂಡ ಅನು ಕಾರ್ಯಪ್ಪ, ರಾಷ್ಟ್ರೀಯ ಸಮಿತಿ ಸದಸ್ಯರಾದ ಸುನಿಲ್ ಪೊನ್ನೇಟಿ, ರಾಜ್ಯ ಸಮಿತಿ ಸದಸ್ಯ ಟಿ.ಎನ್.ಮಂಜುನಾಥ್, ತಾಲೂಕು ಸಂಘದ ಉಪಾಧ್ಯಕ್ಷ ಪುತ್ತಂ ಪ್ರದೀಪ್ ಭಾಗವಹಿಸಲಿದ್ದಾರೆ.

ಅಂದು ಬೆಳಗ್ಗೆ 11 ಗಂಟೆಗೆ ಪ್ರತಿಭಾ ಪುರಸ್ಕಾರ ಹಾಗೂ ವಾರ್ಷಿಕ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯಲಿದ್ದು, ದತ್ತಿ ಪ್ರಶಸ್ತಿ ಸ್ಥಾಪಿಸಿರುವ ವಿರಾಜಪೇಟೆಯ ಪ್ರಗತಿ ಶಾಲೆಯ ವ್ಯವಸ್ಥಾಪಕರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ, ಸಿದ್ದಾಪುರ ಸಮಾಜ ಸೇವಕರಾದ ಕೆ.ಯು.ಅಬ್ದುಲ್ ಮಜೀದ್, ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ನಿರ್ದೇಶಕ ಕೋಲತಂಡ ರಘು ಮಾಚಯ್ಯ ಸೇರಿದಂತೆ ಇತರ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಪತ್ರಕರ್ತರ ಸಂಘದ ಸದಸ್ಯರುಗಳ ಮಕ್ಕಳಾದ ಎಂ.ಕೆ.ಜೀಶ್ಮ, ಜಸ್ಮಿತಾ, ಕೆ.ಈಶಾನ್ವಿ, ಎ.ವಿ.ಸಮೃದ್ಧಿ, ವಿ.ಜಿ.ಅಗಿಲ್, ಕೆ.ಎಸ್. ರೆನಿಲ್ ಅವರುಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ವಾರ್ಷಿಕ ಪ್ರಶಸ್ತಿ ಮತ್ತು ತಾಲೂಕು ಸಂಘದ ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿರುವ ಸಂಘದ ಸದಸ್ಯರಾದ ಎ.ಎನ್.ವಾಸು, ರಜಿತಾ ಕಾರ್ಯಪ್ಪ, ಪುತ್ತಂ ಪ್ರದೀಪ್, ಆರ್.ಸುಬ್ರಮಣಿ ಮತ್ತು ಎಂ.ಎ.ಕೃಷ್ಣ ಅವರಿಗೆ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸುವುದಾಗಿ ಸಂಘದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿಕೇರಿ ಹೃದಯಭಾಗದಲ್ಲಿ ಇಂದಿರಾ ಕ್ಯಾಂಟಿನ್ ಆರಂಭಿಸಿ

ಮಡಿಕೇರಿ, ಜೂ.30– ಬಡವರ ಹಸಿವು ನೀಗಿಸುವ ಉದ್ದೇಶದಿಂದ ಸರ್ಕಾರ ಜಾರಿಗೆ ತಂದಿರುವ ಇಂದಿರಾ ಕ್ಯಾಂಟೀನ್ ಯೋಜನೆಯನ್ನು ಮಡಿಕೇರಿ ನಗರದ ಹೃದಯ ಭಾಗ ಜನರಲ್ ತಿಮ್ಮಯ್ಯ ವೃತ್ತ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ಹಾಗೂ ಬಿಳಿಗೇರಿ ಗ್ರಾ.ಪಂ ಮಾಜಿ ಸದಸ್ಯ ಮಂಡುವಂಡ ರಮೇಶ್ ಅಯ್ಯಪ್ಪ ಒತ್ತಾಯಿಸಿದ್ದಾರೆ.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಇಂದಿರಾ ಕ್ಯಾಂಟೀನ್ ಅನ್ನು ಪುನಶ್ಚೇತನಗೊಳಿಸಲು ಪಣತೊಟ್ಟಿದೆ. ಜಿಲ್ಲೆಯಲ್ಲೂ ಶಾಸಕರುಗಳಾದ ಎ.ಎಸ್.ಪೊನ್ನಣ್ಣ, ಡಾ.ಮಂಥರ್ ಗೌಡ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಕ್ಯಾಂಟೀನ್‌ಗೆ ಕಾಯಕಲ್ಪ ನೀಡುವುದರೊಂದಿಗೆ ಬಡವರ ಅನುಕೂಲಕ್ಕಾಗಿ ಜಿಲ್ಲಾಸ್ಪತ್ರೆ ಬಳಿ ಮತ್ತೊಂದು ಇಂದಿರಾ ಕ್ಯಾಂಟೀನ್ ಆರಂಭಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಕೆಲವು ವರ್ಷಗಳ ಹಿಂದೆ ನಗರದ ನೂತನ ಖಾಸಗಿ ಬಸ್ ನಿಲ್ದಾಣದ ಬಳಿ ಇಂದಿರಾ ಕ್ಯಾಂಟೀನ್ ಆರಂಭಗೊಂಡು ಬಡವರಿಗೆ ಕಡಿಮೆ ಖರ್ಚಿನಲ್ಲಿ ಊಟ, ಉಪಹಾರ ದೊರೆಯುತ್ತಿತ್ತು. ಆದರೆ ನಂತರದ ದಿನಗಳಲ್ಲಿ ಇಲ್ಲಿನ ಕಾರ್ಯ ಚಟುವಟಿಕೆ ಸ್ಥಗಿತಗೊಂಡು ಬಡವರು ಹಾಗೂ ಕಾರ್ಮಿಕ ವರ್ಗದ ಊಟಕ್ಕೆ ತೊಂದರೆ ಎದುರಾಯಿತು.

ಜಿಲ್ಲಾ ಕೇಂದ್ರ ಸ್ಥಾನವಾದ ಮಡಿಕೇರಿ ನಗರದಲ್ಲಿರುವ ಜಿಲ್ಲಾಸ್ಪತ್ರೆಗೆ ಜಿಲ್ಲೆ ಹಾಗೂ ಹೊರ ಜಿಲ್ಲೆಯ ಮೂಲೆ–ಮೂಲೆಗಳಿಂದ ರೋಗಿಗಳು ಬರುತ್ತಾರೆ. ಬಡ ರೋಗಿಗಳಿಗೆ ಆಸ್ಪತ್ರೆಯ ವತಿಯಿಂದ ಊಟೋಪಚಾರದ ವ್ಯವಸ್ಥೆ ಇದೆ. ಆದರೆ ರೋಗಿಗಳ ಆರೈಕೆಗೆ ಮತ್ತು ಸಾಂತ್ವನ ಹೇಳಲು ಬರುವವರಿಗೆ ಕಡಿಮೆ ದರದಲ್ಲಿ ಊಟ ದೊರೆಯಬೇಕಾಗಿದೆ. ಜಿಲ್ಲಾಸ್ಪತ್ರೆಯ ಆವರಣ ಅಥವಾ ಜನರಲ್ ತಿಮ್ಮಯ್ಯ ವೃತ್ತದ ಬಳಿ ಇರುವ ನಿರೀಕ್ಷಣಾ ಮಂದಿರದ ಆವರಣದಲ್ಲಿ ಮತ್ತೊಂದು ಇಂದಿರಾ ಕ್ಯಾಂಟೀನ್ ಅನ್ನು ಆರಂಭಿಸಿದರೆ ಬಡವರಿಗೆ ಅನುಕೂಲವಾಗಲಿದೆ. ಈ ಭಾಗದಲ್ಲಿ ಪ್ರತಿದಿನ ನೂರಾರು ಪ್ರಯಾಣಿಕರು ಬಂದು ಹೋಗುತ್ತಿದ್ದು, ಇವರಿಗೂ ಇಂದಿರಾ ಕ್ಯಾಂಟೀನ್ ಸಹಕಾರಿ ಯಾಗಲಿದೆ ಎಂದು ರಮೇಶ್ ಅಯ್ಯಪ್ಪ ಅಭಿಪ್ರಾಯ ಪಟ್ಟರು. ಈ ಬಗ್ಗೆ ಜಿಲ್ಲೆಯ ಇಬ್ಬರು ಶಾಸಕರುಗಳಿಗೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಅಲ್ಲಾರಂಡ ರಂಗಚಾವಡಿಯ ಅಧ್ಯಕ್ಷ ಅಲ್ಲಾರಂಡ ವಿಠಲ ನಂಜಪ್ಪ ಮಾತನಾಡಿ, ಮಂಗಳೂರು ರಸ್ತೆಯಲ್ಲಿರುವ ಬಸ್ಸು ತಂಗುದಾಣದ ಕೆಳಭಾಗದಲ್ಲಿ ಇಂದಿರಾ ಕ್ಯಾಂಟೀನ್ ಅನ್ನು ಆರಂಭಿಸಿದರೆ ಈ ಭಾಗದ ಎಲ್ಲಾ ರಸ್ತೆಗಳ ಮೂಲಕ ತೆರಳುವವರಿಗೂ ಸಹಕಾರಿಯಾಗಲಿದೆ ಎಂದರು.

ಇಂದು ಜನ ಸಂಪರ್ಕ ಸಭೆ

ಮಡಿಕೇರಿ, ಜೂ.30– ಸೋಮವಾರಪೇಟೆ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆ ನಿವಾರಿಸುವ ಜನ ಸಂಪರ್ಕ ಸಭೆಯು ಜು.1 ರಂದು ಮಧ್ಯಾಹ್ನ 12.30 ಯಿಂದ 01.30 ಗಂಟೆ ವರೆಗೆ ಸೋಮವಾರಪೇಟೆ ಉಪ ವಿಭಾಗ ಕಚೇರಿ ಆವರಣ ದಲ್ಲಿ ಅಧೀಕ್ಷಕ ಎಂಜಿನಿಯರ್, ಸೆಸ್ಕ್, ಕೊಡಗು ಮತ್ತು ಚಾಮರಾಜನಗರ ವೃತ್ತರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಕುಶಾಲನಗರ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸುವ ಸಭೆಯು ಜು.1 ರಂದು ಮಧ್ಯಾಹ್ನ 4 ರಿಂದ 5 ಗಂಟೆವರೆಗೆ ಕುಶಾಲ ನಗರ ಉಪ ವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಎಂಜಿನಿಯರ್, ಸೆಸ್ಕ್, ಕೊಡಗು ಮತ್ತು ಚಾಮರಾಜನಗರ ವೃತ್ತರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಸೋಮವಾರಪೇಟೆ ಮತ್ತು ಕುಶಾಲನಗರ ವ್ಯಾಪ್ತಿಯ ಸಾರ್ವಜನಿಕರು/ವಿದ್ಯುತ್ ಗ್ರಾಹಕರ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ ಈ ಸಭೆಯಲ್ಲಿ ಚರ್ಚಿಸಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಈ ಸಭೆಗೆ ಹಾಜರಾಗುವಂತೆ ಸೆಸ್ಕ್ ಕಾರ್ಯ ನಿರ್ವಾಹಕ ಎಂಜಿನಿಯರ್ ಅನಿತಾ ಬಾಯಿ ತಿಳಿಸಿದ್ದಾರೆ.

ಸಿದ್ದಯ್ಯನಪುರದಲ್ಲಿ ವಿಜೃಂಭಣೆಯ ಕಂಡಾಯಗಳ ಉತ್ಸವ

ಕೊಳ್ಳೇಗಾಲ, ಮಾ.30– ಆಷಾಢ 2ನೇ ಶುಕ್ರವಾರ ಹಿನ್ನೆಲೆಯಲ್ಲಿ ತಾಲೂಕಿನ ಸಿದ್ದಯ್ಯನಪುರ ಗ್ರಾಮದಲ್ಲಿ ಶ್ರೀ ಸಿದ್ದಪ್ಪಾಜಿ ಕಂಡಾಯಗಳ ಉತ್ಸವ ವಿಜೃಂಭಣೆಯಿಂದ ನಡೆಯಿತು.



ಗ್ರಾಮದ ಶ್ರೀಬ್ರಹ್ಮೇಶ್ವರ ದೇವಾಲಯದಲ್ಲಿ ಶ್ರೀಕ್ಷೇತ್ರ ಕುರುಬನಕಟ್ಟೆ ಕಂಡಾಯಗಳಿಗೆ ಹೂ–ಹೊಂಬಾಳೆ ಧರಿಸಿ ಪೂಜೆ ಸಲ್ಲಿಸಿದ ಬಳಿಕ ಮಂಗಳವಾದ್ಯದೊಂದಿಗೆ ಗ್ರಾಮದಲ್ಲಿ ಮೆರವಣಿಗೆ ಮಾಡಲಾಯಿತು. ಕಂಡಾಯಗಳ ಉತ್ಸವದ ಹಿನ್ನೆಲೆಯಲ್ಲಿ ಗ್ರಾಮದ ಪ್ರಮುಖ ಬೀದಿಗಳನ್ನು ಹಸಿರು ತೋರಣ, ವಿದ್ಯುತ್ ದೀಪಾಲಂಕಾರ ಹಾಗೂ ಬಣ್ಣ ಬಣ್ಣದ ರಂಗೋಲಿಗಳಿಂದ ಸಿಂಗರಿಸಲಾಗಿತ್ತು. ಗ್ರಾಮದ ಯುವಕರು ಮೆರವಣಿಗೆಯಲ್ಲಿ ಮಂಗಳವಾದ್ಯ ಶಬ್ದಕ್ಕೆ ಕುಣಿದು ಕುಪ್ಪಳಿಸಿದರು.

ಈ ಸಂದರ್ಭ ಗ್ರಾಮದ ದೊಡ್ಡ ಯಜಮಾನ ಚಾಮರಾಜು, ಲಕ್ಷ್ಮಣ ಮೂರ್ತಿ, ಕಾಂತರಾಜು, ಲಿಂಗರಾಜು, ಮಹದೇವ, ಮಾದಯ್ಯ, ಸಿ.ಎಂ.ಮಹದೇವ, ಮಹೇಂದ್ರ, ನಂಜುಂಡಸ್ವಾಮಿ, ಸಿದ್ದಯ್ಯನಪುರ ಗ್ರಾಪಂ ಅಧ್ಯಕ್ಷ ಗುಣಶೇಖರ್, ಸದಸ್ಯರಾದ ಮುರುಳೀಧರ್, ಜಯಮ್ಮ, ಶಶಿಕುಮಾರಿ ಇನ್ನಿತರರಿದ್ದರು.

ಶಾಸಕರಿಂದ ರಥೋತ್ಸವ ಸಿದ್ಧತೆ ಪರಿಶೀಲನೆ



ಚಾಮರಾಜನಗರ, ಜೂ.30– ನಗರದ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ಆವರಣ ದಲ್ಲಿ ಜು.3ರಂದು ನಡೆಯುವ ಶ್ರೀಚಾಮರಾಜೇಶ್ವರ ಬ್ರಹ್ಮ ರಥೋತ್ಸವ ಹಿನ್ನೆಲೆಯಲ್ಲಿ ಶಾಸಕ ಸಿ.ಪುಟ್ಟರಂಗ ಶೆಟ್ಟಿ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿ, ರಥೋತ್ಸವದ ಸಿದ್ಧತೆಯನ್ನು ಪರಿಶೀಲಿಸಿದರು.

ಜು.3ರಿಂದ ರಾಜ್ಯ ವಿಧಾನಸಭೆ ಅಧಿವೇಶನ ಆರಂಭವಾಗಲಿರುವ ಹಿನ್ನೆಲೆಯಲ್ಲಿ ಶಾಸಕ ಪುಟ್ಟರಂಗಶೆಟ್ಟಿ ಬೆಂಗಳೂರಿಗೆ ತೆರಳುವ ಸಾಧ್ಯತೆ ಇದ್ದು ರಥೋತ್ಸವದಲ್ಲಿ ಶಾಸಕರು ಪಾಲ್ಗೊಳ್ಳುವುದು ಅನುಮಾನವಾಗಿದೆ ಎನ್ನಲಾಗಿದೆ. ಈ ವೇಳೆ ದೇವಸ್ಥಾನ ಅರ್ಚಕ ರಾಮಕೃಷ್ಣ ಭಾರದ್ವಾಜ್, ದೇವಸ್ಥಾನ ಬಂಡಿಗಾರ್ ದಫೇದಾರ್ ಮಹೇಶ್ ಇತರರಿದ್ದರು

ರಾಜ್ಯ ಬಜೆಟ್ ಮೇಲೆ ಜಿಲ್ಲೆ ಜನರ ನಿರೀಕ್ಷೆ ಅಪಾರ



● ಸಿದ್ದಲಿಂಗಸ್ವಾಮಿ

ಚಾಮರಾಜನಗರ, ಜೂ.30– ರಾಜ್ಯದಲ್ಲಿ ನೂತನವಾಗಿ ರಚನೆಯಾಗಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೊದಲ ಬಜೆಟ್ ಮೇಲೆ ಜಾನಪದ ತವರು ಚಾಮರಾಜನಗರ ಜನರು ಬೆಟ್ಟದಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ.

ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಜಿಲ್ಲೆ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಿದ್ದರು. ಅದರಂತೆ ಈ ಬಾರಿಯೂ ಜಿಲ್ಲೆಯ ಜನರಿಗೆ ತೃಪ್ತಿದಾಯಕ ಬಜೆಟ್ ಕೊಡುತ್ತಾರೆ ಎಂಬ ವಿಶ್ವಾಸದಲ್ಲಿ ಜಿಲ್ಲೆಯ ಜನರಿದ್ದಾರೆ.

ರೇಷ್ಮೆಗೆ ಉತ್ತೇಜನದ ನಿರೀಕ್ಷೆ: ರೇಷ್ಮೆಗೆ ಜಿಲ್ಲೆಯಲ್ಲಿ ಮಾರುಕಟ್ಟೆ ಒದಗಿಸಲು ಸಿಲ್ಕ್ ಪಾರ್ಕ್ ನಿರ್ಮಾಣ ಮಾಡಬೇಕು ಮತ್ತು ರೇಷ್ಮೆ ಬೆಳೆಗೆ ಉತ್ತೇಜನ ನೀಡಲು ಯೋಜನೆಗಳನ್ನು ತರಬೇಕಿದೆ. ಬಿಜೆಪಿ–ಜೆಡಿಎಸ್ ಮೈತ್ರಿ ಸರ್ಕಾರದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಅವರು ನೀಡಿದ್ದ ರೇಷ್ಮೆ ಕಾರ್ಖಾನೆ ಪುನರುಜ್ಜೀವನಗೊಳಿಸುವ ಭರವಸೆ ಇನ್ನೂ ಈಡೇರಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ವಿಶೇಷ ಕಾಳಜಿ ತೋರಿ ರೇಷ್ಮೆಯಿಂದ ವಿಮುಖರಾಗಿರುವ ರೈತರಿಗೆ ಉತ್ತೇಜನ ಕೊಡಬೇಕಿದೆ.

ಜಿಲ್ಲೆಯ ಬಹುತೇಕ ರೈತರು ಬಾಳೆ, ಅರಿಶಿನ ಹಾಗೂ ಟೊಮೆಟೊ, ಸಣ್ಣ ಈರುಳ್ಳಿ ಬೆಳೆಯಲಿದ್ದು, ಇವುಗಳಿಗೆ ತಮಿಳುನಾಡು ಮತ್ತು ಮೈಸೂರು ಉತ್ತಮ ಮಾರುಕಟ್ಟೆಗಳಾಗಿದೆ. ಹಾಗಾಗಿ ಅರಿಶಿಣ ಪುಡಿ ತಯಾರಿಕಾ ಘಟಕ ಮತ್ತು ಟೊಮೆಟೊ, ಬಾಳೆ ಸಂಸ್ಕರಣ ಘಟಕ ಸ್ಥಾಪಿಸಬೇಕೆಂದು ಇಲ್ಲಿನ ಜನರ ಬಹುವರ್ಷಗಳ ಬೇಡಿಕೆಯಾಗಿದೆ. ಅಲ್ಲದೇ ರೈತಾಪಿ ವರ್ಗಕ್ಕೆ ಪೂರಕವಾಗುವಂತೆ ಹೊಸ ಯೋಜನೆಗಳ ಘೋಷಣೆ ಜೊತೆಗೆ, ಜಿಲ್ಲಾದ್ಯಂತ ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವ ನಿಟ್ಟಿನಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ ಮಾಡಬೇಕು ಎಂಬ ಪ್ರಮುಖ ಬೇಡಿಕೆಗಳು ಕೇಳಿ ಬರುತ್ತಿದೆ.

ಪ್ರವಾಸೋದ್ಯಮಕ್ಕೆ ಬೇಕಿದೆ ಪವರ್: ಶೇ.50ರಷ್ಟು ಅರಣ್ಯದಿಂದ ಕೂಡಿರುವ ಸಂಪದ್ಭರಿತ ಜಿಲ್ಲೆ ಚಾಮರಾಜನಗರ 2 ಹುಲಿ ಸಂರಕ್ಷಿತ ಪ್ರದೇಶ, 2 ವನ್ಯಜೀವಿಧಾಮ ಹಾಗೂ ಹಲವು ಪ್ರೇಕ್ಷಣಿಯ ಸ್ಥಳಗಳನ್ನು ಹೊಂದಿದೆ. ಮೈಸೂರಿಗೆ ಬರುವ ಲಕ್ಷಾಂತರ ಪ್ರವಾಸಿಗರನ್ನು ಚಾಮರಾಜನಗರಕ್ಕೂ ಕರೆತರುವಲ್ಲಿ ಸರ್ಕಾರದ ಇಚ್ಛಾಶಕ್ತಿ ಪ್ರಮುಖ ಪಾತ್ರ ವಹಿಸಲಿದ್ದು, ಪ್ರವಾಸೋದ್ಯಮಕ್ಕೆ ಉತ್ತೇಜನ ಕೊಟ್ಟರೇ ಜಿಲ್ಲೆಗೆ ಅನೂಕೂಲ ವಾಗಲಿದೆ. ಇಕೋ ಟೂರಿಸಂ, ಯಾತ್ರಾ ಪ್ರವಾಸೋದ್ಯಮ, ಜಲಪಾತಗಳ ವೀಕ್ಷಣೆ ಜಿಲ್ಲೆಯಲ್ಲಿ ಸಾಧ್ಯವಾಗಲಿದೆ. ಮಲೆಮಹದೇಶ್ವರ ಬೆಟ್ಟ, ಬಿಳಿಗಿರಿರಂಗನ ಬೆಟ್ಟ ಹಿಮವದ್ ಗೋಪಾಲ ಸ್ವಾಮಿ ಬೆಟ್ಟ, ಬಂಡೀಪುರ ಮತ್ತು ಕೆ.ಗುಡಿಯಲ್ಲಿ ಸಫಾರಿ, ಹೊಗೇನ ಕಲ್, ಭರಚುಕ್ಕಿ ಜಲಪಾತ ಹೀಗೆ ಹತ್ತಾರು ಪ್ರೇಕ್ಷಣೀಯ ಸ್ಥಳಗಳನ್ನು ಹೊರನಾಡಿಗೆ, ವಿದೇಶಿಗಳಿಗೆ ಪರಿಚಯಿಸುವ ಕೆಲಸವನ್ನು ಸಿದ್ದರಾಮಯ್ಯ ಮಾಡುತ್ತಾರೆಂಬ ನಂಬಿಕೆ ಈ ಭಾಗದ ಜನರದ್ದಾಗಿದೆ.

ಬಸ್ ನಿಲ್ದಾಣ ವ್ಯವಸ್ಥೆ: ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲು ಈಗಾಗಲೇ ಸ್ಥಳ ಮಂಜೂರಾಗಿದ್ದರೂ ನಿರ್ಮಾಣ ಕಾರ್ಯ ಆರಂಭವಾಗುವ ಸೂಚನೆ ಕಾಣುತ್ತಿಲ್ಲ. ಆದ್ದರಿಂದ, ವಿಶೇಷ ಅನುದಾನದ ಮೂಲಕ ಜಿಲ್ಲಾ ಕೇಂದ್ರದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಕಲ್ಪಿಸುವ ಜವಾಬ್ದಾರಿ ಸಿಎಂ ಅವರ ಮೇಲಿದೆ.

ಇದರ ಜೊತೆಗೆ, ಜಿಲ್ಲೆಯಲ್ಲಿ ಪ್ರಾಣಿ ಮತ್ತು ಮಾನವ ಸಂಘರ್ಷ ದೊಡ್ಡ ಸಮಸ್ಯೆಯಾಗಿದ್ದು ಇದನ್ನು ತಪ್ಪಿಸಲು ಶಾಶ್ವತ ಯೋಜನೆ ಅಗತ್ಯವಾಗಿದೆ. ಬೆಳೆ ಹಾನಿಗೆ ತಕ್ಕ ಪರಿಹಾರವನ್ನು ಸರ್ಕಾರ ಕೊಡಲು ಬಜೆಟ್‌ನಲ್ಲಿ ಹೊಸ ಯೋಜನೆ ಘೋಷಣೆ ಮಾಡಬೇಕೆಂಬುದು ರೈತರ ಆಗ್ರಹವಾಗಿದೆ.

ತೆಂಗಿನ ಸಸಿ ಮಾರಾಟ

ಚಾಮರಾಜನಗರ, ಜೂ.30– ತೋಟಗಾರಿಕೆ ಇಲಾಖೆಯಿಂದ ಗುಣಮಟ್ಟದ ತೆಂಗಿನ ಸಸಿಗಳನ್ನು ಸುವರ್ಣಾವತಿ ತೋಟಗಾರಿಕಾ ಕ್ಷೇತ್ರದಲ್ಲಿ ರೈತರಿಗೆ ರಿಯಾಯಿತಿ ದರದಲ್ಲಿ ಪ್ರತಿ ಗಿಡಕ್ಕೆ 75 ರೂ. ಗಳಂತೆ ಮಾರಾಟ ಮಾಡಲಾಗುವುದು. ಆಸಕ್ತ ರೈತರು ನಾಗರಾಜು ಕೆ.ಎಸ್. ಮೊ: 7975515269, ರವಿಕುಮಾರ ಎಸ್.ಆರ್, ಮೊ: 9380076380 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಜು.2ರಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಜೂ.30– ಚೆಸ್ಕಾಂ ವತಿಯಿಂದ ಗುಂಡ್ಲುಪೇಟೆಯ ತೆರಕಣಾಂಬಿ ಉಪ ಕೇಂದ್ರದಿಂದ ಹೊರಹೊಮ್ಮುವ ಬೊಮ್ಮನಹಳ್ಳಿ, ಕುಂದಕೆರೆ, ದೇಪಾಪುರ ಹಾಗೂ ಬೆರಟಹಳ್ಳಿ ವಿದ್ಯುತ್ ಮಾರ್ಗದ ಗ್ರಾಮಗಳ ಬಸ್‌ಬಾರ್‌ನಲ್ಲಿ ತುರ್ತು ಕಾರ್ಯ ಹಮ್ಮಿಕೊಂಡಿರುವುದರಿಂದ ಜು.2 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕೋಟ್ಪಾ ದಾಳಿ: 37,100 ರೂ. ದಂಡ ವಸೂಲಿ

ಚಾಮರಾಜನಗರ, ಜೂ.30– ಜಿಲ್ಲಾ ತಂಬಾಕು ನಿಯಂತ್ರಣ ಘಟಕ, ಜಿಲ್ಲಾ ಕಣ್ಗಾವಲು ಘಟಕ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆಯನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಮೇ ಹಾಗೂ ಜೂನ್ ಮಾಹೆವರೆಗೆ ಕೋಟ್ಪಾ ತನಿಖಾ ತಂಡದ ಸಹಯೋಗದೊಂದಿಗೆ ಜಿಲ್ಲೆಯ ವಿವಿಧ ಭಾಗಗಳಲ್ಲಿ ಕೋಟ್ಪಾ ದಾಳಿ ನಡೆಸಿ ಒಟ್ಟು 255 ಪ್ರಕರಣಗಳಿಗೆ 37100 ರೂ. ದಂಡ ವಿಧಿಸಲಾಗಿದೆ.



ದಾಳಿ ವೇಳೆ ನಿಯಮ ಉಲ್ಲಂಘಿಸಿ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಅಂಗಡಿಗಳು, ಕೋಟ್ಪಾ ಸೆಕ್ಷನ್–4 ಎಚ್ಚರಿಕೆ ನಾಮಫಲಕ ಪ್ರದರ್ಶಿಸದ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್‌ಗಳು, ಟೀ ಸ್ಟಾಲ್, ಚಿಲ್ಲರೆ ಅಂಗಡಿಗಳು ಹಾಗೂ ಇತರೆ ಅಂಗಡಿಗಳು, ಕೋಟ್ಪಾ ಸೆಕ್ಷನ್–6 (ಎ) ನಾಮಫಲಕ ಪ್ರದರ್ಶಿಸದ ತಂಬಾಕು ಮಾರಾಟವಿರುವ ಅಂಗಡಿಗಳು, ಶಿಕ್ಷಣ ಸಂಸ್ಥೆಯ 100 ಗಜಗಳ ಅಂತರದ ಒಳಗೆ ತಂಬಾಕು ಪದಾರ್ಥಗಳನ್ನು ಮಾರಾಟ ಮತ್ತು ಸೇವನೆಗೆ ಉತ್ತೇಜನ ನೀಡುವ ಅಂಗಡಿಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಗಳಿಗೆ ಸ್ಥಳದಲ್ಲೇ ಕೋಟ್ಪಾ–2003ರಡಿ ಪ್ರಕರಣ ದಾಖಲಿಸಿ ದಂಡ ವಿಧಿಸಲಾಗಿದೆ.

ಇದೇ ವೇಳೆ ಕರಪತ್ರ ವಿತರಿಸಿ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟ್ಪಾ–2003ರ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು. ಚಾಮರಾಜನಗರ ತಾಲೂಕಿನ ಆಲೂರು, ಅರಕಲವಾಡಿ, ಬಿಸಿಲವಾಡಿ ಹಾಗೂ ಚಾಮರಾಜನಗರ ಪಟ್ಟಣ, ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಹಾಗೂ ಗುಂಡ್ಲುಪೇಟೆ ಪಟ್ಟಣ, ಕೊಳ್ಳೇಗಾಲ ತಾಲೂಕು, ಪಟ್ಟಣ, ಹನೂರು ತಾಲೂಕಿನ ಶ್ರೀ ಮಲೆ ಮಹದೇಶ್ವರ ಬೆಟ್ಟ ಹಾಗೂ ಲೊಕ್ಕನಹಳ್ಳಿ ಮತ್ತು ಪಿ.ಜಿ.ಪಾಳ್ಯ ಗ್ರಾಮ ವ್ಯಾಪ್ತಿಯಲ್ಲಿ ಕೋಟ್ಪಾ ದಾಳಿ ನಡೆಸಲಾಗಿದೆ.

ಜಿಲ್ಲೆಯ ಎಲ್ಲಾ ಸಾರ್ವಜನಿಕ ಸ್ಥಳದ ಮಾಲೀಕರು, ಮುಖ್ಯಸ್ಥರು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಕೋಟ್ಪಾ ಕಾಯ್ದೆ ಉಲ್ಲಂಘನೆಯಾಗದಂತೆ ಕಟ್ಟೆಚ್ಚರ ವಹಿಸುವಂತೆ ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಕಾರ್ಯಕ್ರಮಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಚಾಮರಾಜನಗರದ ಗಡಿ ಯಜಮಾನರು ಹಾಗೂ ಗಣಿ ಮಾಲೀಕರಾದ ಯಜಮಾನ್ ಮರಣ್ಣ ಉರುಫ್ ಸಿ.ಎಸ್.ಸಿದ್ದಯ್ಯ ಅವರ 5ನೇ ವರ್ಷದ ಪುಣ್ಯಸ್ಮರಣೆ ಆಚರಿಸಿ ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು. ಮರಣ್ಣ ಅವರ ಪುತ್ರ ಪಾಪಣ್ಣ(ಶ್ರೀನಿಧಿ), ಹಿತೈಷಿಗಳಾದ ಮಂಟೇಸ್ವಾಮಿ, ಕೃಷ್ಣ ಕುಮಾರ್, ನಟ, ಆಚಾರ್ ಮಂಜು, ಗಿರಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಅಂಗನವಾಡಿಗಳಿಗೆ ಆಹಾರ ಪದಾರ್ಥ ವಿತರಣೆ

ಚಾಮರಾಜನಗರ, ಜೂ.30– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕೊಳ್ಳೇಗಾಲ ಹಾಗೂ ಹನೂರು ತಾಲೂಕು ವ್ಯಾಪ್ತಿಯ 479 ಅಂಗನವಾಡಿ ಕೇಂದ್ರಗಳಿಗೆ ಜೂ.26 ರಿಂದ ಜು.8ರವರೆಗೆ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತದೆ. ಜು.1ರಂದು ಅಜ್ಜೀಪುರ, ಕಾಮಗೆರೆ, 3ರಂದು ರಾಮಾಪುರ, ಮಧುವನಹಳ್ಳಿ–1 ಹಾಗೂ ಮಧುವನಹಳ್ಳಿ–2, 4ರಂದು ಕೂಡ್ಲೂರು, ಚಿಲಕವಾಡಿ, 5ರಂದು ಮಾರ್ಟಳ್ಳಿ, ಕೌದಳ್ಳಿ, 7ರಂದು ದಂಟಳ್ಳಿ, 8ರಂದು ಮಲೆ ಮಹದೇಶ್ವರ ಬೆಟ್ಟ ವ್ಯಾಪ್ತಿಯ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸಲಾಗುತ್ತದೆ ಎಂದು ಕೊಳ್ಳೇಗಾಲ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವರ್ಗಾವಣೆಗೊಂಡಿರುವ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಅವರನ್ನು ಶುಕ್ರವಾರ ಸಂಘ–ಸಂಸ್ಥೆಗಳ ಮುಖಂಡರು ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಟ್ಟರು. ಈ ವೇಳೆ ಪ್ರಭಾರ ಜಿಲ್ಲಾಧಿಕಾರಿ ಹಾಗೂ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಪೂವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ನಿರ್ಗಮಿತ ಜಿಲ್ಲಾಧಿಕಾರಿ ರಮೇಶ್ ಅವರ ಪತ್ನಿ ಗೀತಾ ಇತರರಿದ್ದರು.

ಮೈಸೂರು ಮಿತ್ರ

ಒಂದನೇ ಪುಟದಿಂದ

ನಿರ್ಮಾಣ ಪ್ರಕ್ರಿಯೆಗೆ ಚಾಲನೆ

ಹೆಚ್ಚು ಮುಳುಗಡೆಯಾಗಲಿದೆ. ಅಲ್ಲದೆ, ಕಂದಾಯ ಮತ್ತು ಖಾಸಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ. ಅರಣ್ಯ ಭೂಮಿ ದೊಡ್ಡ ಪ್ರಮಾಣದಲ್ಲಿ ಮುಳುಗಡೆಯಾಗುವುದನ್ನು ತಪ್ಪಿಸಲು ಸಮನಾಂತರ ಅಣೆಕಟ್ಟಿನ ಜತೆಗೆ ಮೂರು ಸಣ್ಣ ಪ್ರಮಾಣದ ಅಣೆಕಟ್ಟು ನಿರ್ಮಾಣ ಮಾಡುವ ಬಗ್ಗೆಯೂ ಚಿಂತನೆ ನಡೆದಿದೆ.

ಶಿವಕುಮಾರ್ ಈ ಹಿಂದೆ ಜಲಸಂಪನ್ಮೂಲ ಸಚಿವರಾಗಿದ್ದಾಗಲೇ ಯೋಜನಾ ವರದಿ ಸಿದ್ಧಪಡಿಸಿ, ಅಣೆಕಟ್ಟು ನಿರ್ಮಾಣಕ್ಕೆ ಅಗತ್ಯವಿರುವ 5912 ಕೋಟಿ ರೂ.ಗೆ ಅಂದೇ ಸಂಪುಟದಲ್ಲಿ ಅನುಮತಿ ಪಡೆದಿದ್ದರು. ವಿಸ್ತೃತ ಯೋಜನಾ ವರದಿಯಂತೆ 67.14 ಟಿಎಂಸಿ ನೀರು ಸಂಗ್ರಹ ಹಾಗೂ 400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಸೇರಿದೆ. ಸಮನಾಂತರ ಅಣೆಕಟ್ಟು ಕೇವಲ ವಿದ್ಯುತ್ ಉತ್ಪಾದನೆ, ಕುಡಿಯುವ ನೀರು ಉದ್ದೇಶ ಹೊಂದಿದೆ ಎಂದು ಉಲ್ಲೇಖಿಸಲಾಗಿದೆ. ಇದನ್ನೇ ಕೇಂದ್ರ ಜಲಸಂಪನ್ಮೂಲ ಇಲಾಖೆಗೆ ಸಲ್ಲಿಸಿ, ಅನುಮತಿ ಕೋರಿತ್ತು. ಯೋಜನೆ ನಂತರ ಪರಿಷ್ಕರಣೆಗೊಂಡು 9 ಸಾವಿರ ಕೋಟಿ ರೂ.ಗೆ ಹೆಚ್ಚಳವಾಗಿತ್ತು ಪ್ರಸ್ತುತ 14,500 ಕೋಟಿ ರೂ.ಗೆ ಮತ್ತೆ ಪರಿಷ್ಕರಣೆಗೊಂಡಿದೆ. ಮತ್ತಷ್ಟು ವಿಳಂಬಗೊಂಡರೆ ಯೋಜನಾ ವೆಚ್ಚ ಏರಲಿದೆ ಎಂಬ ಹಿನ್ನೆಲೆಯಲ್ಲಿ ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ನಗರ–ಪಟ್ಟಣಗಳ ಕುಡಿಯುವ ನೀರು ಪೂರೈಕೆಗೆ ಒತ್ತು ನೀಡಿ ಯೋಜನೆಗೆ ಅನುಮತಿ ಪಡೆಯಲು ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ಹೇರಿದೆ. ಒಂದೆಡೆ ಒತ್ತಡ ಹೇರುತ್ತಾ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರ ಚಾಲನೆ ನೀಡುತ್ತಿದೆ. ಸಮನಾಂತರ ಅಣೆಕಟ್ಟು ನಿರ್ಮಾಣಕ್ಕೆ ತಮಿಳುನಾಡು ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿ ನ್ಯಾಯಾಲಯದ ಮೆಟ್ಟಿಲು ಹತ್ತಿದೆ. ಎದುರಾಗಿರುವ ಕಾನೂನು ತೊಡಕು ನಿವಾರಿಸಿ ಮುಂದುವರೆಯಲು ರೋಹಟಗಿಯವರ ಸಲಹೆ ಪಡೆದಿದೆ.

ಇಂದಿನಿಂದ 'ಅನ್ನಭಾಗ್ಯ' ಜಾರಿ

ಅಕ್ಕಿ ಸಿಗುವವರೆಗೆ ಮಾತ್ರ ಈ ಹಣ ನೀಡುವ ವ್ಯವಸ್ಥೆ ಇರುತ್ತದೆ ಎಂದರು. ಹೆಚ್ಚುವರಿ 5 ಕೆಜಿ ಅಕ್ಕಿ ಸಿಗುವವರೆಗೂ ಖಾತೆಗೆ ಹಣ ಜಮೆ ಮಾಡುತ್ತೇವೆ. ಎಂಎಸ್ ಪಿ ಮೂಲಕ ಧಾನ್ಯ ಖರೀದಿ ಮಾಡುತ್ತೇವೆ. ಎರಡು ಕೆಜಿ, ಜೋಳ, ರಾಗಿ ಕೊಡುತ್ತೇವೆ. ಎಂಟು ಕೆಜಿ ಅಕ್ಕಿ ಕೊಡುತ್ತೇವೆ. ಅಕ್ಕಿ ಕೊಡಲು ನಾವು ಸಿದ್ಧವಾಗಿದ್ದೇವೆ. ಆದರೆ ಕೇಂದ್ರ ಸರ್ಕಾರ ಹೆಚ್ಚಿನ ಅಕ್ಕಿ ನೀಡಲು ಸಹಕಾರ ನೀಡಿಲ್ಲ ಎಂದರು.

ಪ್ರದೇಶಗಳಿಗೆ ತಕ್ಕಂತೆ ಧಾನ್ಯ ವಿತರಣೆ: ಕರ್ನಾಟಕದ ಎಲ್ಲಾ ಭಾಗಗಳಲ್ಲಿ ಅಕ್ಕಿಯನ್ನು ಮೂರೂ ಹೊತ್ತು ಜನರು ಸೇವಿಸುವುದಿಲ್ಲ. ದಕ್ಷಿಣ ಭಾಗದ ಜನರಿಗೆ ರಾಗಿ ನೀಡುತ್ತೇವೆ. ಉತ್ತರ ಕರ್ನಾಟಕ ಜನರಿಗೆ ಜೋಳ ಕೊಡುತ್ತೇವೆ. ರಾಗಿ ದಾಸ್ತಾನು ಇದೆ, ಜೋಳ ದಾಸ್ತಾನು ಇಲ್ಲ. ದಾಸ್ತಾನು ಆದ ಬಳಿಕ ಧಾನ್ಯಗಳ ಹಂಚಿಕೆ ಮಾಡುತ್ತೇವೆ. ಎಂಎಸ್‌ಪಿ ಮೂಲಕ ಧಾನ್ಯ ಖರೀದಿ ಮಾಡುತ್ತೇವೆ. ಎರಡು ಕೆಜಿ, ಜೋಳ ಅಥವಾ ರಾಗಿ ಜೊತೆಗೆ ಎಂಟು ಕೆಜಿ ಅಕ್ಕಿ ಕೊಡುತ್ತೇವೆ. ಮಾತು ಕೊಟ್ಟಂತೆ ನಾಳೆಯಿಂದ ಜಾರಿ ಖಂಡಿತ ಎಂದರು.

ನಾಳೆಯಿಂದಲೇ ಫಲಾನುಭವಿಗಳ ಖಾತೆಗೆ ಹಣ: ಕೇಂದ್ರ ಸರ್ಕಾರ ಮನಸ್ಸು ಬದಲಾಯಿಸಿ ಅಕ್ಕಿ ಕೊಟ್ಟರೆ ನಾವು ಅಕ್ಕಿ ಹಂಚಿಕೆ ಮಾಡುತ್ತೇವೆ. ಕೇಂದ್ರದ ಬಳಿ ಅಕ್ಕಿ ದಾಸ್ತಾನು ಇದೆ. ಇಲ್ಲವೆ ಟೆಂಡರ್ ಕರೆದು ಅಕ್ಕಿ ಖರೀದಿ ಮಾಡುತ್ತೇವೆ. ಹಣ ರೆಡಿ ಇದೆ, ಅಕೌಂಟ್‌ಗೆ ವರ್ಗಾವಣೆ ಆಗುತ್ತದೆ. ನಾಳೆಯಿಂದಲೇ ಖಾತೆಗೆ ಹಣ ಹಾಕುತ್ತೇವೆ. ಅನ್ನಭಾಗ್ಯ ಯೋಜನೆ ಜಾರಿಗೆ ಸಮಾವೇಶ ಅವಶ್ಯಕತೆ ಇಲ್ಲ ಎಂದು ತಿಳಿಸಿದರು.

ಅನ್ನ ಭಾಗ್ಯ ಯೋಜನೆ ಹಣ ವರ್ಗಾವಣೆ ಮಾಹಿತಿ: ರಾಜ್ಯದಲ್ಲಿ ಒಟ್ಟು 1 ಕೋಟಿ 28 ಲಕ್ಷ ಬಿಪಿಎಲ್, ಅಂತ್ಯೋದಯ ಕಾರ್ಡ್‌ದಾರರು ಇದ್ದು, 4 ಕೋಟಿ 42 ಲಕ್ಷ ಫಲಾನುಭವಿಗಳಿದ್ದಾರೆ. 1 ಕೋಟಿ 28 ಲಕ್ಷ ಕಾರ್ಡ್‌ಗಳ ಪೈಕಿ 99.99% ಆಧಾರ್ ಸೀಡಿಂಗ್ ಆಗಿದೆ. ಇನ್ನು 1.22 ಕಾರ್ಡ್‌ದಾರರ ಬ್ಯಾಂಕ್ ಅಕೌಂಟ್ ಲಿಂಕ್ ಆಗಿದೆ. ಇನ್ನುಳಿದ ಬಾಕಿ ಉಳಿದಿರುವ 6 ಲಕ್ಷ ಕಾರ್ಡ್‌ಗಳು ಆಧಾರ್ ಲಿಂಕ್ ಆಗಬೇಕು. ಆಧಾರ್ ಲಿಂಕ್ ಆಗುತ್ತಿದ್ದಂತೆಯೇ ಬ್ಯಾಂಕ್ ಅಕೌಂಟ್ ಕೂಡ ಕಾರ್ಡ್‌ಗಳಿಗೆ ಅಪ್ಡೇಟ್ ಆಗುತ್ತದೆ. ಹೀಗಾಗಿ ಗೊಂದಲಕ್ಕೆ ಅವಕಾಶವಿಲ್ಲ ಎಂದು ಸಚಿವರು ಹೇಳಿದರು.

ಮಧ್ಯರಾತ್ರಿಯಿಂದಲೇ 'ಗೃಹ ಜ್ಯೋತಿ'

ಅದಕ್ಕೆ ಶೇ.10ರಷ್ಟು ಹೆಚ್ಚುವರಿ ವಿದ್ಯುತ್ ಉಚಿತವಾಗಿ ನೀಡಲಾಗುತ್ತದೆ ಎಂದು ಘೋಷಿಸಿದೆ. ಉಚಿತವಾಗಿ ದೊರೆಯುತ್ತದೆ ಎಂಬ ಕಾರಣಕ್ಕಾಗಿ ಮನಸ್ಸೋ ಇಚ್ಛೆ ವಿದ್ಯುತ್ ಬಳಸಲು ಅವಕಾಶವಾಗಬಾರದು ಎಂಬ ಕಾರಣಕ್ಕೆ ಗ್ರಾಹಕರು 1 ವರ್ಷದಲ್ಲಿ ಬಳಸುವ ವಿದ್ಯುತ್‌ನ ಸರಾಸರಿ ಜೊತೆಗೆ ಶೇ.10ರಷ್ಟು ಹೆಚ್ಚುವರಿ ವಿದ್ಯುತ್ ನೀಡಲಿರುವುದಾಗಿ ತನ್ನ ಈ ನಿಯಮವನ್ನು ರಾಜ್ಯ ಸರ್ಕಾರ ಸಮರ್ಥಿಸಿಕೊಂಡಿದೆ.

200 ಯೂನಿಟ್‌ಗಿಂತ ಹೆಚ್ಚು ಅಥವಾ ಸರಾಸರಿಗಿಂತ ಹೆಚ್ಚು ವಿದ್ಯುತ್ ಬಳಸಿದ್ದರೆ ಪೂರ್ಣ ಪ್ರಮಾಣದ ಬಿಲ್ ಅನ್ನು ಗ್ರಾಹಕರು ಪಾವತಿಸಬೇಕಾಗುತ್ತದೆ. ಅಂದರೆ ಈ ಬಳಕೆದಾರರಿಗೆ ನಿಗದಿತ ತಿಂಗಳಿನಲ್ಲಿ ಉಚಿತ ವಿದ್ಯುತ್ ಲಭ್ಯವಿರುವುದಿಲ್ಲ. ಉಚಿತ ವಿದ್ಯುತ್ ಪಡೆಯಲು ನೋಂದಣಿ ಮಾಡುವಾಗ ಮೀಟರ್ ಸಂಖ್ಯೆ ಜೊತೆಗೆ ಆಧಾರ್ ಸಂಖ್ಯೆಯನ್ನೂ ಕೂಡ ನಮೂದಿಸಲು ಸರ್ಕಾರ ಸೂಚಿಸಿದೆ. ಇದರಿಂದಾಗಿ ಒಬ್ಬ ವ್ಯಕ್ತಿ 1 ಮೀಟರ್‌ಗೆ ಮಾತ್ರ ಉಚಿತ ವಿದ್ಯುತ್ ಸೌಲಭ್ಯ ಪಡೆಯಬಹುದು. ಬಾಡಿಗೆ ಮನೆಯವರಿಗೂ ಕೂಡ ಗೃಹ ಜ್ಯೋತಿ ಸೌಲಭ್ಯ ದೊರಕಲಿದ್ದು, ಬಾಡಿಗೆ ಮನೆಯವರು ಬಾಡಿಗೆ ಕರಾರು ಪತ್ರ ಮತ್ತು ಆಧಾರ್ ಸಂಖ್ಯೆಯನ್ನು ನಮೂದಿಸಿ ಸೌಲಭ್ಯ ಪಡೆಯಬಹುದಾಗಿದೆ. ಹೊಸದಾಗಿ ವಿದ್ಯುತ್ ಸಂಪರ್ಕ ಪಡೆದವರಿಗೆ ವಾರ್ಷಿಕ ಬಳಕೆಯ ಸರಾಸರಿ ಲೆಕ್ಕ ಮಾಡಲು ಸಾಧ್ಯವಿಲ್ಲ. ಹೀಗಾಗಿ ಈ ಬಳಕೆದಾರರಿಗೆ ಸರಾಸರಿಯನ್ನು ಶೇ.53ಕ್ಕೆ ನಿಗದಿಪಡಿಸಲಾಗಿದೆ. ಅದಕ್ಕಿಂತ ಹೆಚ್ಚು ವಿದ್ಯುತ್ ಬಳಸಿದರೆ ಪೂರ್ಣ ಪ್ರಮಾಣದ ಬಿಲ್ ಅನ್ನು ಪಾವತಿಸಬೇಕಾಗುತ್ತದೆ.

ಜು.4ರಂದು ಬಿಜೆಪಿ ಧರಣಿ

ಕೊಡಬೇಕು. ಎಲ್ಲ ಪದವೀಧರ ನಿರುದ್ಯೋಗಿಗಳಿಗೆ 3 ಸಾವಿರ ಭತ್ಯೆ, ಡಿಪ್ಲೊಮಾ ಮಾಡಿ ನಿರುದ್ಯೋಗಿ ಆಗಿರುವವರಿಗೆ 1500 ರೂ. ಕೊಡಬೇಕು. 200 ಯೂನಿಟ್ ವಿದ್ಯುತ್ ಕೊಡಲೇಬೇಕು. 80 ಯೂನಿಟ್ ಎಂಬ ಕಂಡಿಷನ್ ರದ್ದು ಮಾಡಬೇಕೆಂದು ಒತ್ತಾಯಿಸಿದರು. ಅವರೇ ಭರವಸೆ ನೀಡಿದಂತೆ ಎಲ್ಲಾ ಮಹಿಳೆಯರಿಗೆ 2 ಸಾವಿರ ರೂ. ಕೊಡಬೇಕು. ಕರೆಂಟ್ ಬಿಲ್ ತೀವ್ರವಾಗಿ ಹೆಚ್ಚಾಗಿದ್ದು, ದರ ಏರಿಕೆಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು. ಜು. 4ರಂದು ಸದನದ ಒಳಗೆ ಮತ್ತು ಹೊರಗಡೆ ನಾನು ಮತ್ತು ಪಕ್ಷದ ಪ್ರಮುಖರು ಧರಣಿ ನಡೆಸಲಿದ್ದೇವೆ ಎಂದು ಹೇಳಿದರು. ಪಕ್ಷಕ್ಕೆ ಮುಜುಗರ ಆಗುವ ಹೇಳಿಕೆಗಳನ್ನು ಯಾರೂ ಕೊಡಬಾರದು. ಯಾರು ಆ ರೀತಿ ಮಾತನಾಡಿದ್ದಾರೋ ಅವರ ಜೊತೆ ಚರ್ಚಿಸಿ, ಇನ್ನು ಮುಂದೆ ಇಂಥ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗುವುದು. ಇಲ್ಲವಾದರೆ ಸೂಕ್ತ ಕ್ರಮವನ್ನು ಕೈಗೊಳ್ಳುವ ತೀರ್ಮಾನ ಮಾಡಿದ್ದೇವೆ ಎಂದು ಅವರು ಹೇಳಿದರು.

ವಿಪಕ್ಷ ನಾಯಕನ ಆಯ್ಕೆ ವರಿಷ್ಠರ ನಿರ್ಧಾರಕ್ಕೆ

ಬೆಂಗಳೂರು, ಜೂ 30(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕನ ಆಯ್ಕೆ ವಿಚಾರವನ್ನು ರಾಜ್ಯ ಬಿಜೆಪಿ ವರಿಷ್ಠರ ಹೆಗಲಿಗೆ ಹಾಕಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಕೇಂದ್ರ ಸಚಿವ ಪ್ರಹ್ಲಾದ್‌ಜೋಶಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಕೋರ್ ಕಮಿಟಿ ಹಾಗೂ ಪಕ್ಷದ ಹಿರಿಯ ಮುಖಂಡರ ಸಭೆಯಲ್ಲಿ ಪ್ರತಿಪಕ್ಷದ ನಾಯಕನ ಆಯ್ಕೆಗೆ ಒಮ್ಮತ ಮೂಡದ ಕಾರಣ ತಮ್ಮ ಅಂಗಳದ ಚೆಂಡನ್ನು ದೆಹಲಿಗೆ ಹಾಕಿದ್ದಾರೆ. ಜುಲೈ ಮೂರರಿಂದ ವಿಧಾನ ಮಂಡಲದ ಅಧಿವೇಶನ ಆರಂಭ ಗೊಳ್ಳುತ್ತಿದ್ದು, ಅದಕ್ಕೂ ಮುನ್ನವೇ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಯಾಗಬೇಕು. ಇದರ ಜತೆಗೆ ಹೊಸ ರಾಜ್ಯಾಧ್ಯಕ್ಷರನ್ನು ನೇಮಕ ಮಾಡಲು ವರಿಷ್ಠರು ಮುಂದಾಗಿದ್ದಾರೆ. ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ಬಸವರಾಜ ಬೊಮ್ಮಾಯಿ, ಮಾಜಿ ಸಚಿವರಾದ ವಿ.ಸುನಿಲ್ ಕುಮಾರ್ ಹಾಗೂ ಅಶ್ವತ್ಥ್‌ನಾರಾಯಣ ಅವರ ಹೆಸರು ಚರ್ಚೆಗೆ ಬಂದವಾದರೂ ಅಂತಿಮ ತೀರ್ಮಾನ ಕೈಗೊಳ್ಳಲು ಕಮಿಟಿಗೆ ಸಾಧ್ಯವಾಗಲಿಲ್ಲ. ನೇಮಕಾತಿ ವಿಚಾರದಲ್ಲಿ ಕೆಲವು ನಾಯಕರು ಎತ್ತಿರುವ ಅಪಸ್ವರದ ಬಗ್ಗೆ ಚರ್ಚೆಯಾಗಿ ದ್ದಲ್ಲದೆ, ಅಪಸ್ವರ ಎತ್ತಿರುವ ಪ್ರಮುಖರನ್ನು ಸಭೆಗೆ ಕರೆದು ಸಮಾಲೋಚನೆ ನಡೆಸಿ ಬಹಿರಂಗವಾಗಿ ಹೇಳಿಕೆ ನೀಡದಂತೆ ಬುದ್ಧಿ ಮಾತು ಹೇಳಿದ್ದಾರೆ. ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಅಧಿವೇಶನದಲ್ಲಿ ಪ್ರಾರಂಭದ ದಿನ ದಿಂದಲೇ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಹೋರಾಟ ಮಾಡಲು ಸಭೆ ತೀರ್ಮಾನಿಸಿದೆ.

ದಂಡದ ಜೊತೆಗೆ ಲೈಸನ್ಸ್ ರದ್ದು

ಇರುವವರಿಗೆ ಲೈಸೆನ್ಸ್ ಕೊಡಬೇಕು ಎಂದು ಅಭಿಪ್ರಾಯಪಟ್ಟರು. ಹೆದ್ದಾರಿಯಲ್ಲಿ ಸಂಭವಿಸು ತ್ತಿರುವ ಅಪರಾಧಗಳನ್ನು ತಡೆಯಲು ಹೈವೇ ಪಹರೆ ಹಾಕಿದ್ದೇವೆ. ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ 4 ಹೈವೇ ಪಹರೆ ಹಾಕಿದ್ದೇವೆ. ಕೆಟ್ಟು ನಿಂತ ವಾಹನಗಳ ಕಡೆ ಹೆಚ್ಚು ಗಮನ ಕೊಡಬೇಕು. ಬಹಳಷ್ಟು ಜನ ಸುಮ್ಮನೆ ಜೀವ ಕಳೆದುಕೊಳ್ಳುತ್ತಿದ್ದಾರೆ. ಅಪ ಘಾತ ತಡೆಯಲು ಹೇಗೆ ಕ್ರಮ ತೆಗೆದುಕೊಳ್ಳಬೇಕೆಂದು ಗಮನ ಕೊಡುತ್ತಿದ್ದೇವೆ. ಟೋಲ್ ಬಳಿ ವಾಹನಗಳ ತಪಾಸಣೆ ಮಾಡುತ್ತೇವೆ. ಯಾವ ವಾಹನಗಳಿಗೆ ಸರಿಯಾದ ಸ್ಟಿಕ್ಕರ್ ಇರಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅತಿ ವೇಗದ ಮೇಲೆ ಕಣ್ಣಿಡುತ್ತೇವೆ ಎಂದು ಎಚ್ಚರಿಸಿದರು.

ಕೆಲವು ಕಡೆ ಸರ್ವಿಸ್ ರಸ್ತೆಯಲ್ಲಿ ಫುಟ್‌ಪಾತ್ ಮಾಡಿಲ್ಲ. ಕೆಲವು ಕಡೆ ಅಂಡರ್ ಪಾಸ್ ಮಾಡಿಲ್ಲ. ಮತ್ತೆ ಕೆಲವು ಕಡೆ ನೀರು ನುಗ್ಗುತ್ತದೆ. ಇದರಿಂದ ಅಪಘಾತಗಳು ಆಗುತ್ತಿವೆ. ಸರ್ವಿಸ್ ರೋಡ್‌ನಲ್ಲಿ ಫೆನ್ಸ್ ಸರಿಯಾಗಿ ಹಾಕಿಲ್ಲ. ಹೈವೇಯಲ್ಲಿ ಸರಿಯಾಗಿ ಸಿಸಿ ಕ್ಯಾಮರಾ ಅಳವಡಿಕೆ ಆಗಿಲ್ಲ. ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಹೇಳಿದ್ದೇವೆ ಎಂದರು. ಎಲ್ಲಾ ಕೆಲಸಗಳು ಬೇಗ ಆದರೆ ಅಪಘಾತಗಳನ್ನು ತಡೆಯಲು ಸಾಧ್ಯ. ಸಾರ್ವಜನಿಕರು ಸುರಕ್ಷಿತ ಚಾಲನೆಯನ್ನು ಮಾಡಬೇಕು. ಜನರು ಪ್ರತಿ ದಿನ ಸಾಯುತ್ತಾ ಇದ್ದಾರೆ. ಜನರು ಸಹ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳಬೇಕು. ಎನ್‌ಹೆಚ್‌ಐ ಕಡೆ ಆಗಿರುವ ಸಮಸ್ಯೆಯನ್ನು ಬಗೆಹರಿಸಲು ಹೇಳಿದ್ದೇವೆ. ಬಹಳಷ್ಟು ಕೆಲಸಗಳು ಆಗಿಲ್ಲ, ಬೇಗ ಕೆಲಸ ಮಾಡಿ ಎಂದು ನಾವು ಒತ್ತಡ ಹಾಕುತ್ತೇವೆ ಎಂದು ಸ್ಪಷ್ಟಪಡಿಸಿದರು.

ರಿಯಲ್ ಎಸ್ಟೇಟ್ ಉದ್ಯಮದಲ್ಲಿನ ಬೆಳವಣಿಗೆ ಬಗ್ಗೆ ಅರಿವು ಹೊಂದಿರಬೇಕು

ಭೂ ಪರಿವರ್ತನೆ, ನೂತನ ತಂತ್ರಾಂಶ ಕಾವೇರಿ 2.0 ಕುರಿತು ಸಮಾಲೋಚನೆ



ಮೈಸೂರು, ಜೂ.30 (ಎಸ್‌ಪಿಎನ್)– ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್ ಮೈಸೂರು ಘಟಕದ ವತಿಯಿಂದ ಡೀಮ್ಡ್ ಕನ್‌ವರ್ಷನ್ (ಭೂ ಪರಿವರ್ತನೆ) ಮತ್ತು ನೂತನ ತಂತ್ರಾಂಶ ಕಾವೇರಿ–2.0 ನೋಂದಣಿ ಕುರಿತು ಶುಕ್ರವಾರ ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಚರ್ಚಿಸಲಾಯಿತು.

ನರೆಡ್ಕೋ ಕಾನೂನು ತಜ್ಞರ ಸಮಿತಿಯ ಸದಸ್ಯ ಧೀರೇಂದ್ರ ಕುಮಾರ್ ಆರ್ ಮೆಹ್ತಾ ನೂತನ ಭೂ ಪರಿವರ್ತನೆ ಕುರಿತು ಮಾತನಾಡಿ, ನೂತನ ಭೂ ಪರಿವರ್ತನೆ ಪ್ರಕಾರ, ಭೂಮಿ ಮಾಲೀಕ ಅನ್ಯ ಉದ್ದೇಶಗಳಿಗೆ ಭೂ ಪರಿವರ್ತನೆಗೆ ಆನ್‌ಲೈನ್ ಮೂಲಕ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದರೆ, 7 ರಿಂದ 15 ದಿನದೊಳಗೆ ಅರ್ಜಿ ವಿಲೇವಾರಿ ಮಾಡುವ ಮೊದಲು ಕಡತ ಸರಿ–ತಪ್ಪು ನಿರ್ಧಾರಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ನೂತನ ಭೂ ಪರಿವರ್ತನೆ ನಿಯಮದಲ್ಲಿ ಭೂಮಿ ಮಾಲೀಕನಿಂದ ಅರ್ಜಿ ಸ್ವೀಕಾರ ಮಾಡಿದರೆ, ಅರ್ಜಿಯ ಉದ್ದೇಶವನ್ನು ವಿವಿಧ ಹಂತದಲ್ಲಿ ಪರಿಶೀಲನೆಯಾಗುತ್ತದೆ. ಟೌನ್ ಪ್ಲಾನ್ ಅಧಿಕಾರಿ, ಜಿಲ್ಲಾ ಭೂ ಮಾಪನ ಅಧಿಕಾರಿ ಹಾಗೂ ಅಂತಿಮವಾಗಿ ಜಿಲ್ಲಾಧಿಕಾರಿಗಳಿಂದ ಸಿಡಿಪಿ ಪ್ಲಾನ್ ಪ್ರಕಾರ ಭೂ ಪರಿವರ್ತನೆ ಮಾಡಲು ಒಪ್ಪಿಗೆ ಸೂಚಿಸಬೇಕೆಂಬ ನಿಯಮವಿದೆ. ಇದಕ್ಕೆ ಸುಖಾಸುಮ್ಮನೆ ಕಾರಣ ನೀಡಿ ಅಧಿಕಾರಿಗಳು ಅರ್ಜಿ ತಿರಸ್ಕಾರ ಮಾಡುವಂತಿಲ್ಲ ಎಂದು ತಿಳಿಸಿದರು.

ಭೂ ಪರಿವರ್ತನೆ ಕುರಿತು ಅರ್ಜಿ ಸಲ್ಲಿಸುವಾಗ ಸರ್ಕಾರಿ ಭೂಮಿ ಒತ್ತುವರಿಯಾಗಿದ್ದರೆ, ಅದು ಸಂಪೂರ್ಣ ಜವಾಬ್ದಾರಿ ಅರ್ಜಿದಾರರೇ ಹೊರಬೇಕು. ಒಮ್ಮೆ ಸರ್ಕಾರಿ ಭೂಮಿ ಅನಧಿಕೃತವಾಗಿ ಭೂ ಪರಿವರ್ತನೆ ವ್ಯಾಪ್ತಿಯಲ್ಲಿ ತಂದಿದ್ದರೆ, ಅದರ ಹೊಣೆಗಾರಿಕೆಯೂ ಅರ್ಜಿದಾರರ ಮೇಲೆ ಇರುತ್ತದೆ ಎಂದು ತಿಳಿಸಿದರು.

ನೂತನ ತಂತ್ರಾಂಶ ಕಾವೇರಿ –2.0 ಕುರಿತು ನೋಂದಣಿ ಕುರಿತು ವಕೀಲ ಎಂ.ವಿ.ರಮೇಶ್ ಮಾಹಿತಿ ನೀಡಿ, ಭೂ ಪರಿವರ್ತನೆ, ಕೃಷಿ ಜಮೀನು ವರ್ಗಾವಣೆ, ಅನ್ಯ ಉದ್ದೇಶಗಳಿಗೆ ನಿಗದಿ ಮಾಡಿದ್ದ ಭೂಮಿಯ ಎಲ್ಲಾ ದಾಖಲಾತಿಗಳನ್ನು ಕಾವೇರಿ –2.0 ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ವಿಧಾನವನ್ನು ಪರಿಚಯಿಸಿದರು.

ಇದೀಗ ಕಾವೇರಿ ತಂತ್ರಾಂಶ–2.0 ಜಾರಿಗೆ ಬಂದಿದ್ದು, ಹತ್ತು ನಿಮಿಷದಲ್ಲಿ ಆಸ್ತಿ ನೋಂದಣಿ ಕಾರ್ಯ ಮುಗಿಯಲಿದೆ. ಮಧ್ಯವರ್ತಿಗಳ ಹಾವಳಿ ತಪ್ಪಿಸುವ ಉದ್ದೇಶದಿಂದ ಕಾವೇರಿ ತಂತ್ರಾಂಶವನ್ನು ಸರ್ಕಾರ ಜಾರಿಗೆ ತಂದಿದ್ದು, ಮೊದಲು ವರ್ಷಾನುಗಟ್ಟಲೇ ದಾಖಲಾತಿಗಾಗಿ ಅರ್ಜಿ ಸಲ್ಲಿಸಿ ಕಾಯಬೇಕಾಗದ ಪರಿಸ್ಥಿತಿ ಇತ್ತು. ಇದೀಗ ಆನ್‌ಲೈನ್‌ನಲ್ಲೇ ಎಲ್ಲವೂ ಸಿಗುವಂತೆ ಮಾಡುವುದು ಸರ್ಕಾರದ ಉದ್ದೇಶವಾಗಿದೆ ಎಂದು ಕಾವೇರಿ–2.0 ತಂತ್ರಾಂಶದ ಕುರಿತು ಉದಾಹರಣೆ ಸಮೇತ ಮಾಹಿತಿ ನೀಡಿದರು.

ಆಸ್ತಿ ನೊಂದಣಿ ಸೇರಿದಂತೆ ಕಂದಾಯ ಇಲಾಖೆ ಎಲ್ಲಾ ರೀತಿಯ ನೋಂದಣಿಗಳು ಇನ್ನು ಮುಂದೆ ಆನ್‌ಲೈನ್‌ನಲ್ಲಿ ಮನೆಯಲ್ಲಿ ಕುಳಿತು ಅರ್ಜಿ ಸಲ್ಲಿಸಬಹುದು. ನೋಂದಣಿ ಮಾಡುವ ಮೊದಲು ಮನೆಯಲ್ಲಿ ಕುಳಿತು ಡೀಡ್ ಅನ್ನು ಉಪನೋಂದಣಾಕಾರಿ ಕಚೇರಿಗೆ ಕಳುಹಿಸಿದರೆ ನಿಗದಿ ಸಮಯದೊಳಗೆ ಅರ್ಜಿ ವಿಲೇವಾರಿ ಮಾಡಿ, ನಿಗದಿತ ಹಣ ಕಟ್ಟಲು ಸೂಚಿಸುತ್ತಾರೆ. ಈ ಸಮಯದಲ್ಲಿ ಭಾವಚಿತ್ರ, ಸಹಿ, ಹೆಬ್ಬೆಟ್ಟು ಹಾಕಿ ನೋಂದಣಿ ಮಾಡಿಸಿಕೊಳ್ಳಬಹುದು. ನಂತರ ಆನ್‌ಲೈನ್‌ನಲ್ಲಿ ಪ್ರಮಾಣ ಪತ್ರ ಪಡೆಯಬಹುದು ಎಂದು ವಿವರಿಸಿದರು.

> ಯಾವುದೇ ನಗರವನ್ನು ಯೋಜನಾಬದ್ಧವಾಗಿ ರೂಪಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆ ತಂದಿದೆ. ಅದರಂತೆ 'ಭೂ ಪರಿವರ್ತನೆ ನಿಯಮದಲ್ಲಿ ಬದಲಾವಣೆಯಾಗಿದ್ದು, ಇದರ ಬಗ್ಗೆ ರಿಯಲ್ ಎಸ್ಟೇಟ್ ಉದ್ಯಮಿಗಳಲ್ಲಿ ಅರಿವು ಮೂಡಬೇಕು. ಭೂ ಪರಿವರ್ತನೆಯಲ್ಲಿ ಮೊದಲು ತಹಸೀಲ್ದಾರ್ ಉತ್ತರದಾಯಿತ್ವ ಹೊಂದಿರುತ್ತಿದ್ದರು. ಇದೀಗ ಅರ್ಜಿದಾರರೇ ತಾವು ಸಲ್ಲಿಸುವ ದಾಖಲಾತಿಗಳಿಗೆ ಉತ್ತರದಾಯಿತ್ವ ಕುರಿತು ಅಫಿಡವಿಟ್‌ನಲ್ಲಿ ಉಲ್ಲೇಖಿಸಬೇಕು.
>
> -ಧೀರೇಂದ್ರ ಕುಮಾರ್ ಆರ್ ಮೆಹ್ತಾ, ನರೆಡ್ಕೋ ಕಾನೂನು ತಜ್ಞರ ಸಮಿತಿಯ ಸದಸ್ಯ

'ಶಕ್ತಿ'ಯಿಂದ ಕಂಗಾಲು: ಸಿಎಂಗೆ ಮನವಿ ಸಲ್ಲಿಸಲು 20 ಆಟೋಗಳಲ್ಲಿ ಬೆಂಗಳೂರಿಗೆ ತೆರಳಿದ ಚಾಲಕರು



ಮೈಸೂರು,ಜೂ.30 (ಎಂಟಿವೈ)– ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣದ ಶಕ್ತಿ ಯೋಜನೆಯಿಂದಾಗಿ ರಾಜ್ಯಾದ್ಯಂತ ಆಟೋರಿಕ್ಷಾ, ಕ್ಯಾಬ್, ಟ್ಯಾಕ್ಸಿ, ಖಾಸಗಿ ಬಸ್ ಚಾಲಕರು, ಮಾಲೀಕರು ಸಂಕಷ್ಟದಲ್ಲಿದ್ದು, ಕೂಡಲೇ ಸರ್ಕಾರ ಅವರ ನೆರವಿಗೆ ಧಾವಿಸಬೇಕೆಂದು ಆಗ್ರಹಿಸಿ ಸಂಯುಕ್ತ ಕರ್ನಾಟಕ ಆಟೋರಿಕ್ಷಾ ಚಾಲಕರು ಮತ್ತು ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು ಅರಮನೆಯ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಪ್ರತಿಭಟನೆ ನಡೆಸಿದ ಆಟೋರಿಕ್ಷಾ ಚಾಲಕ, ಮಾಲೀಕರು ಶಕ್ತಿ ಯೋಜನೆಯಿಂದಾಗಿ ಮಹಿಳಾ ಪ್ರಯಾಣಿಕರು ಸಾರಿಗೆ ಸಂಸ್ಥೆಯ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಇದರಿಂದ ಆಟೋ, ಟ್ಯಾಕ್ಸಿಗಳನ್ನು ಸಾಲ ಮಾಡಿ ಖರೀದಿಸಿರುವ ಚಾಲಕರು ಬ್ಯಾಂಕ್‌ಗೆ ಬಡ್ಡಿ ಕಟ್ಟಲಾಗದ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಬಡ್ಡಿ ಮನ್ನಾ ಮಾಡುವ ಮೂಲಕ ನಮ್ಮ ನೆರವಿಗೆ ನಿಲ್ಲಬೇಕು. ಅಸಂಘಟಿತ ಕಾರ್ಮಿಕರಾದ ಆಟೋರಿಕ್ಷಾ, ಖಾಸಗಿ ವಾಣಿಜ್ಯ ವಾಹನಗಳ ಚಾಲಕರು, ಖಾಸಗಿ ಬಸ್‌ಗಳ ಚಾಲಕರು, ಎಲೆಕ್ಟ್ರಿಷಿಯನ್, ಮೆಕ್ಯಾನಿಕ್‌ಗಳು ಸೇರಿದಂತೆ ಇದನ್ನೇ ನಂಬಿ ಬದುಕುವ ಕಾರ್ಮಿಕರ ಕಲ್ಯಾಣಕ್ಕೆ ಸಾರಿಗೆ ಇಲಾಖೆಯಡಿ ನಿಗಮ ಸ್ಥಾಪನೆ ಮಾಡಬೇಕು ಎಂದು ಆಗ್ರಹಿಸಿದರು.

ಊಬರ್, ರ್‍ಯಾಪಿಡೋ, ಬೈಕ್ ಟ್ಯಾಕ್ಸಿಗಳ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಅಪಘಾತ, ದುರ್ಘಟನೆ ಸಂಭವಿಸಿದಾಗ 10 ಲಕ್ಷ ರೂ. ಸಹಾಯ ಧನ ನೀಡಿ, ಭವಿಷ್ಯನಿಧಿಯಡಿ ಕಾರ್ಮಿಕರನ್ನು ನೋಂದಾಯಿಸಿ ಉಚಿತ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಕೆಲವೆಡೆ ಪ್ರಯಾಣಿಕರಿಗೆ ಕಾಯುತ್ತಿದ್ದರೂ ಸಂಚಾರಿ ಪೊಲೀಸರು ದಂಡ ಹಾಕುವುದನ್ನು ನಿಲ್ಲಿಸಬೇಕು. ಚಾಲಕ ಸಮೀವುಲ್ಲಾ ಆತ್ಮಹತ್ಯೆ ಪ್ರಕರಣವನ್ನು ಸೂಕ್ತ ತನಿಖೆ ನಡೆಸಿ ಅಪರಾಧಿಗಳಿಗೆ ಶಿಕ್ಷೆ ವಿಧಿಸಬೇಕು. ಚಾಲನಾ ಪರವಾನಗಿ ಪತ್ರ ನವೀಕರಣಕ್ಕೆ ಲಂಚಕ್ಕೆ ಬೇಡಿಕೆ ಇಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ ಬಗೆಹರಿಸಬೇಕು. ಮೈಸೂರಿನಲ್ಲಿ ಈಗಾಗಲೇ ಆಟೋರಿಕ್ಷಾ ಸಂಖ್ಯೆ ಹೆಚ್ಚಾಗಿದ್ದು, ನಿಲ್ಲಿಸಲು ಸ್ಥಳಾವಕಾಶವೇ ಇಲ್ಲ. ಹೀಗಾಗಿ ಮುಂದಿನ 5 ವರ್ಷ ಆಟೋರಿಕ್ಷಾಗಳಿಗೆ ಪರವಾನಗಿ ನೀಡಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆ ಬಳಿಕ ಆಟೋರಿಕ್ಷಾ ಚಾಲಕರ ನಿಯೋಗ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು 20ಕ್ಕೂ ಹೆಚ್ಚು ಆಟೋಗಳಲ್ಲಿ ಬೆಂಗಳೂರಿಗೆ ತೆರಳಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಎಂ.ವಿ. ಶ್ರೀನಿವಾಸಮಿತ್ರ, ಪ್ರಧಾನ ಕಾರ್ಯದರ್ಶಿ ಸುನಿಲ್‌ಕುಮಾರ್.ಪಿ, ಕಾರ್ಯಾಧ್ಯಕ್ಷ ಎಂ.ಹೆಚ್.ಕಿರಣ್, ಕರ್ನಾಟಕ ಕಾವಲುಪಡೆ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್ ಗೌಡ, ಕರ್ನಾಟಕ ಕನ್ನಡ ವೇದಿಕೆ ಅಧ್ಯಕ್ಷ ಸುರೇಶ್ ಬಾಬು ಸೇರಿದಂತೆ ಹಲವರು ಭಾಗವಹಿಸಿದ್ದರು.

ಕರ್ನಾಟಕ ಸರ್ಕಾರ, ಜಿವಿಕೆ ಇಎಂಆರ್‌ಐ ನಡುವಿನ ತಿಕ್ಕಾಟ: 108 ಆಂಬ್ಯುಲೆನ್ಸ್ ಸೇವೆಗೆ ಸಂಕಟ

ಬೆಂಗಳೂರು: ರಾಜ್ಯ ಸರ್ಕಾರ ಮತ್ತು ಸೇವಾ ಪೂರೈಕೆದಾರರಾದ ಜಿವಿಕೆ ಇಎಂಆರ್‌ಐ ನಡುವಿನ ಭಿನ್ನಾಭಿಪ್ರಾಯದಿಂದಾಗಿ '108' ಆಂಬ್ಯುಲೆನ್ಸ್ ಸೇವೆಗಳ ಮೇಲೆ ಪರಿಣಾಮ ಬೀರಿದೆ. ಜಿವಿಕೆ ಇಎಂಆರ್‌ಐನ ಕಳಪೆ ಸೇವೆಯಿಂದ ಕಳೆದ ಮೂರು ತಿಂಗಳಿನಿಂದ ಆಂಬ್ಯುಲೆನ್ಸ್‌ಗಳ ಚಾಲಕರಿಗೆ ಸಂಬಳ ನೀಡದಿರಲು ಕಾರಣ ಎಂದು ಸರ್ಕಾರ ಹೇಳಿದೆ.

ಜಿವಿಕೆ ಇಎಂಆರ್ ಐ ಅಧಿಕಾರಿಗಳು, ಸರ್ಕಾರವು 2008 ರಲ್ಲಿ ಸಹಿ ಮಾಡಿದ ತಿಳುವಳಿಕೆ ಒಪ್ಪಂದದ (ಎಂಒಯು) ಷರತ್ತುಗಳನ್ನು ಅನುಸರಿಸುವ ಬದಲು ಪಾವತಿಗಳನ್ನು ತೆರವುಗೊಳಿಸಲು ತನ್ನದೇ ಆದ ನಿಯಮಗಳು ಮತ್ತು ಷರತ್ತುಗಳನ್ನು ರಚಿಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

ಎಲ್ಲಾ ಆಂಬ್ಯುಲೆನ್ಸ್‌ಗಳು ಸಂಪೂರ್ಣವಾಗಿ ಕಾರ್ಯನಿರ್ವಹಿಸದ ಕಾರಣ ನಿಯಮಗಳು ಮತ್ತು ಷರತ್ತುಗಳನ್ನು ಬದಲಾಯಿಸಲಾಗಿದೆ ಎಂದು ಉಪ ನಿರ್ದೇಶಕ (108 ಆಂಬ್ಯುಲೆನ್ಸ್‌ಗಳು) ಪ್ರಭುಗೌಡ ತಿಳಿಸಿದ್ದಾರೆ. ಆಂಬ್ಯುಲೆನ್ಸ್‌ಗಳ ಬಳಕೆಯ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಏತನ್ಮಧ್ಯೆ, ಆಂಬ್ಯುಲೆನ್ಸ್‌ಗಳನ್ನು ನಿರ್ವಹಿಸುತ್ತಿರುವ ನೌಕರರು ಕಳೆದ ಮೂರು ತಿಂಗಳಿಂದ ಸಂಬಳ ಪಡೆದಿಲ್ಲ ಎಂದು ದೂರಿದ್ದಾರೆ. ಜುಲೈ 7ರೊಳಗೆ ವೇತನ ನೀಡದಿದ್ದರೆ ಮರುದಿನದಿಂದ ಮುಷ್ಕರ ನಡೆಸುವುದಾಗಿ ಜೂ.27ರಂದು ಸರಕಾರಕ್ಕೆ ಪತ್ರ ಬರೆದಿದ್ದಾರೆ. ಶನಿವಾರದೊಳಗೆ ಪಾವತಿ ಮಾಡಲಾಗುವುದು ಎಂದು ಪ್ರಭುಗೌಡ ತಿಳಿಸಿದ್ದಾರೆ.



ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಗಣಿತಶಾಸ್ತ್ರ ಉಪನ್ಯಾಸಕರಾದ ಎಸ್.ಎನ್. ನಂಜುಂಡಪ್ಪ ಅವರು ವಯೋನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಬಲ್ಲೇನಹಳ್ಳಿ ಕಾಲೇಜಿನ ಪ್ರಾಂಶುಪಾಲ ಲಯನ್ ಸಿ.ಆರ್. ದಿನೇಶ್ ಸನ್ಮಾನಿಸಿದರು. ಚಿತ್ರದಲ್ಲಿ ಕಾಲೇಜಿನ ಸಿಬ್ಬಂದಿ ಕೆ.ಪಿ.ಗಂಗಾಧರ್ ಉಪಸ್ಥಿತರಿದ್ದಾರೆ.

ನಟ ಸೂರಜ್ ಪ್ರಾಣಾಪಾಯದಿಂದ ಪಾರು: ಡಾ.ಅಜಯ್ ಹೆಗ್ಡೆ



ಮೈಸೂರು, ಜೂ. 30(ಸಿಎನ್)– ಇತ್ತೀಚೆಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ, ದಿವಂಗತ ಪಾರ್ವತಮ್ಮ ರಾಜ್‌ಕುಮಾರ್ ಅವರ ಕಿರಿಯ ಸಹೋದರ ಎಸ್.ಎ. ಶ್ರೀನಿವಾಸ್ ಅವರ ಪುತ್ರ ಹಾಗೂ ಉದಯೋನ್ಮುಖ ನಟ ಸೂರಜ್ ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮಣಿಪಾಲ ಆಸ್ಪತ್ರೆ ಮೂಳೆಚಿಕಿತ್ಸೆ ವಿಭಾಗದ ಡಾ.ಅಜಯ್ ಹೆಗ್ಡೆ ತಿಳಿಸಿದರು.

ಸೂರಜ್ ಆರೋಗ್ಯ ಕುರಿತು ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಶುಕ್ರವಾರ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸೂರಜ್‌ರನ್ನು ಆಸ್ಪತ್ರೆಗೆ ಕರೆತಂದಾಗ ಬಲಗಾಲಿನಲ್ಲಿ ತೀವ್ರ ರಕ್ತಸ್ರಾವ ಆಗುತ್ತಿತ್ತು. ಬಲಕಾಲಿನ ತೊಡೆ ಭಾಗಕ್ಕೆ ಕಡಿಮೆ ಪ್ರಮಾಣದಲ್ಲಿ ಪೆಟ್ಟಾಗಿತ್ತು. ಆದರೆ ಮೊಣ ಕಾಲಿನ ಕೆಳಗೆ ತೀವ್ರವಾದ ಪೆಟ್ಟಾಗಿದ್ದರಿಂದ, ಶಸ್ತ್ರಚಿಕಿತ್ಸೆ ನಡೆಸಿ, ಬಲ ಮೊಣಕಾಲಿನ 5 ಇಂಚಿನ ಭಾಗವನ್ನು ಕತ್ತರಿಸಿ ತೆಗೆಯಲಾಗಿದೆ ಎಂದು ಮಾಹಿತಿ ನೀಡಿದರು.

ಸೂರಜ್ ಅವರು ಆತ್ಮಸ್ಥೈರ್ಯ ಕಳೆದುಕೊಂಡಿಲ್ಲ. ಆಘಾತದಿಂದ ಹೊರಬರುವ ಕ್ಷಮತೆ ಅವರಿಗಿದೆ. ಅಪಘಾತವಾದ ದಿನ ಅವರನ್ನು ವೆಂಟಿಲೇಟರ್‌ನಲ್ಲಿ ಇರಿಸಲಾಗಿತ್ತು ಕಾಲಿನಲ್ಲಿ 6 ಇಂಚಿನಷ್ಟು ಜಾಗದಲ್ಲಿ ಮೂಳೆಯೇ ಇರಲಿಲ್ಲ. ಸಂಪೂರ್ಣ ನಜ್ಜುಗುಜ್ಜಾಗಿದ್ದವು. ಸುಮಾರು 4 ರಿಂದ 5 ಗಂಟೆಗಳ ನಿರಂತರ ಶಸ್ತ್ರಚಿಕಿತ್ಸೆ ಮೂಲಕ 'ಕಸಿ' ಪ್ರಕ್ರಿಯೆ ನಡೆಸಿದ್ದೇವೆ. ಚಿಕಿತ್ಸೆಗೆ ಪ್ಲಾಸ್ಟಿಕ್ ಸರ್ಜರಿ ತಜ್ಞ ಡಾ.ವಿಜಯ್ ಕೂಡ ಸಹಕರಿಸಿದರು. ಕಾಲಿನ ಭಾಗಕ್ಕೆ ಸೋಂಕು ಹರಡದಂತೆ ಎಚ್ಚರ ವಹಿಸಲಾಗಿದೆ ಎಂದರು.

4 ದಿನಗಳ ಬಳಿಕ ಕಾಲಿನ ಭಾಗ ಕತ್ತರಿಸಿದ್ದನ್ನು ಸೂರಜ್ ಅವರಿಗೆ ತಿಳಿಸಿದೆವು. ಅವರು ಸ್ವಲ್ಪವು ವಿಚಲಿತರಾಗದೆ ಘಟನೆಯನ್ನು ಶಾಂತವಾಗಿ ಸ್ವೀಕರಿಸಿದ್ದಾರೆ. ಚಿಕಿತ್ಸೆ ಸಂಪೂರ್ಣವಾಗಿ ಮುಗಿದಿಲ್ಲ ಇನ್ನೂ ಕೆಲವು ತಿಂಗಳುಗಳ ಕಾಲ ಚಿಕಿತ್ಸೆಯ ಅಗತ್ಯವಿದೆ. ಪ್ರಸ್ತುತ ಅವರಿಗೆ ಹಿಮೋಗ್ಲೋಬಿನ್ ಕೊರತೆಯಿದೆ ಎಂದು ತಿಳಿಸಿದರು.

ಸೂರಜ್ ಅವರ ಸಹೋದರಿ ವರಲಕ್ಷ್ಮಿ ಮಾತನಾಡಿ, 'ಅಮ್ಮ ಊಟಿಗೆ ಹೋಗಿ ಬರುತ್ತೇನೆ ಎಂದು ಹೋದವನು ನನ್ನ ತಮ್ಮ ಈ ಸ್ಥಿತಿಯಲ್ಲಿದ್ದಾನೆ'. ಒಬ್ಬನೇ ಊಟಿಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ಸಮಯಕ್ಕೆ ಸರಿಯಾಗಿ ಸ್ಥಳೀಯರು ಮಣಿಪಾಲ ಆಸ್ಪತ್ರೆಗೆ ಸೇರಿಸಿದ್ದಾರೆ. ಅವನನ್ನು ಉಳಿಸಿಕೊಳ್ಳುವ ಸಲುವಾಗಿ ಶಸ್ತ್ರಚಿಕಿತ್ಸೆಗೆ ನಾವು ಒಪ್ಪಿದೆವು. ವೈದ್ಯರ ಚಿಕಿತ್ಸೆ ಹಾಗೂ ಜನರ ಹಾರೈಕೆ ಯಿಂದ ಆತ ಅಪಾಯದಿಂದ ಪಾರಾಗಿದ್ದಾನೆ. ಅಪಘಾತಕ್ಕೆ ಸಂಬಂಧಿಸಿದ ಕಾನೂನು ವಿಚಾರಗಳನ್ನು ಕುಟುಂಬದ ವಕೀಲರ ತಂಡ ನೋಡಿಕೊಳ್ಳುತ್ತಿದೆ. ಆಘಾತದಿಂದ ನಮ್ಮ ಕುಟುಂಬ ಇನ್ನೂ ಚೇತರಿಸಿಕೊಂಡಿಲ್ಲ ನನ್ನ ತಮ್ಮನ ಆರೋಗ್ಯಕ್ಕಾಗಿ ಪ್ರಾರ್ಥಿಸಿದ ಸರ್ವರಿಗೂ ಧನ್ಯವಾದಗಳು ಎಂದರು.

ಗೋಷ್ಠಿಯಲ್ಲಿ ಮಣಿಪಾಲ ಆಸ್ಪತ್ರೆ ನಿರ್ದೇಶಕ ಪ್ರಮೋದ್ ಕುಂದರ್ ಇದ್ದರು.

ಬೈಕ್ ಡಿಕ್ಕಿ: ಪಾದಚಾರಿ ಸಾವು

ಬೆಟ್ಟದಪುರ, ಜೂ.30–ಬೈಕ್ ಡಿಕ್ಕಿ ಹೊಡೆದು ಪಾದಚಾರಿ ಸಾವನ್ನಪ್ಪಿದ ಘಟನೆ ಬೆಟ್ಟದಪುರ ಗ್ರಾಮದಲ್ಲಿ ಸಂಭವಿಸಿದೆ.

ಇದೇ ಗ್ರಾಮದ ಕೂಲಿ ಕಾರ್ಮಿಕ ರಂಗಸ್ವಾಮಿ(51) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಜೂ.28ರಂದು ರಾತ್ರಿ 8.45ರ ಸುಮಾರಿನಲ್ಲಿ ಬೆಟ್ಟದಪುರ ಸರ್ಕಲ್‌ನಲ್ಲಿ ಇವರು ನಡೆದುಕೊಂಡು ಹೋಗುತ್ತಿದ್ದಾಗ ಬೈಕ್‌ನಲ್ಲಿ (ಕೆಎ 13 ಇಪಿ 4285) ಅತೀ ವೇಗವಾಗಿ ಬಂದ ಅದೇ ಗ್ರಾಮದ ಹರ್ಷ ಎಂಬಾತ ಇವರಿಗೆ ಡಿಕ್ಕಿ ಹೊಡೆದಿದ್ದಾನೆ. ಈ ಅಪಘಾತದಲ್ಲಿ ಹರ್ಷ ಮತ್ತು ರಂಗಸ್ವಾಮಿ ಇಬ್ಬರೂ ಗಾಯಗೊಂಡಿದ್ದು, ತೀವ್ರವಾಗಿ ಗಾಯಗೊಂಡಿದ್ದ ರಂಗಸ್ವಾಮಿ, ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಅಂದು ರಾತ್ರಿ 9.45ರಲ್ಲಿ ಸಾವನ್ನಪ್ಪಿದ್ದಾರೆ. ಈ ಸಂಬಂಧ ಬೆಟ್ಟದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಜುಲೈ 3ರಿಂದ ಪೇಜಾವರ ಶ್ರೀಗಳ 36ನೇ ಚಾತುರ್ಮಾಸ್ಯ ವ್ರತ

೯೦ ದಿನಗಳ ಕಾಲ ಮೈಸೂರಿನಲ್ಲಿ ವಾಸ್ತವ್ಯ; ವಿವಿಧ ಕಡೆ ವಿಶೇಷ ಕಾರ್ಯಗಳಲ್ಲಿ ಭಾಗಿ



ಮೈಸೂರು, ಜೂ.30(ಜಿಎ)–ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಈ ಬಾರಿ ಮೈಸೂರಿನಲ್ಲಿ 36ನೇ ಚಾತುರ್ಮಾಸ್ಯ ವ್ರತವನ್ನು ಕೈಗೊಳ್ಳಲಿದ್ದಾರೆ ಎಂದು ಶ್ರೀಕೃಷ್ಣ ಟ್ರಸ್ಟ್ ಚಾತುರ್ಮಾಸ್ಯ ಸಮಿತಿಯ ಗೌರವಾಧ್ಯಕ್ಷ ಆರ್.ವಾಸುದೇವ ಭಟ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.3ರಿಂದ ಸೆ.20ರವರೆಗೂ 90 ದಿನಗಳ ಚಾತುರ್ಮಾಸ್ಯ ವ್ರತವನ್ನು ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ ಕೈಗೊಂಡು ಶ್ರೀಕೃಷ್ಣ, ರಾಮವಿಠಲ ದೇವರ ಪೂಜೆ, ಜಪ, ತಪ ಅನುಷ್ಠಾನಗಳಿಂದ ಮೈಸೂರು ನಗರದ ಭಕ್ತ ಜನತೆಯನ್ನು ಅನುಗ್ರಹಿಸಲಿದ್ದಾರೆ ಎಂದರು.

ಜು.2ರಂದು ನಗರಕ್ಕೆ ಆಮಿಸಲಿರುವ ಶ್ರೀಗಳನ್ನು ಅಂದು ಸಂಜೆ 4 ಗಂಟೆಗೆ ಸರಸ್ವತಿ ಪುರಂನಲ್ಲಿರುವ ಅಗ್ನಿಶಾಮಕ ದಳ ವೃತ್ತದಲ್ಲಿ ಸ್ವಾಗತಿಸಿ, ಮಂಗಳವಾದ್ಯ, ಚಂಡೆವಾದನ, ಭಕ್ತರಿಂದ ಭಜನೆ, ವೇದಘೋಷ ಮತ್ತು ಕೀಲುಕುದುರೆ, ಡೊಳ್ಳು ಕುಣಿತ, ಕಂಸಾಳೆ ಇತ್ಯಾದಿ ಕಲಾ ಪ್ರಾಕಾರಗಳ ಮೂಲಕ ಅದ್ದೂರಿ ಮೆರವಣಿಗೆಯಲ್ಲಿ ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮಕ್ಕೆ ಸ್ವಾಗತಿಸಲಾಗುವುದು. ಬಳಿಕ ಶ್ರೀಕೃಷ್ಣ ಸಭಾ ಭವನದಲ್ಲಿ 5 ಗಂಟೆಯಿಂದ ಸ್ವಾಗತ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಸ್ವಾಗತ ಕಾರ್ಯಕ್ರಮವನ್ನು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಉದ್ಘಾಟಿಸಲಿದ್ದಾರೆ. ನೂತನವಾಗಿ ಚುನಾಯಿತರಾದ ಕೃಷ್ಣರಾಜಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಚಾಮರಾಜ ಕ್ಷೇತ್ರದ ಶಾಸಕ ಕೆಹರೀಶ್‌ಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಮೈಸೂರು ನಗರದ ಗಣ್ಯವ್ಯಕ್ತಿಗಳೆಲ್ಲಾ ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದರು.

ಶ್ರೀಗಳು ಶ್ರೀ ಕೃಷ್ಣಧಾಮದಲ್ಲಿದ್ದುಕೊಂಡು ತಮ್ಮ ದೈನಂದಿನ ವ್ಯಾಯಾಮ, ವಿದ್ಯಾರ್ಥಿಗಳಿಗೆ ಪಾಠ, ಜಪ, ತಪ, ಪೂಜೆ ಅಲ್ಲದೆ, ಬೆಳಗಿನ ಹೊತ್ತು ಭಕ್ತರ ಮನೆಗಳಿಗೆ ಪಾದಪೂಜೆಗಾಗಿ ತೆರಳುತ್ತಾರೆ. ಮಧ್ಯಾಹ್ನದ ಮಹಾ ಪೂಜೆಯ ನಂತರ ಭಿಕ್ಷೆ ಹಾಗೂ ಭಕ್ತರಿಗೆ ಮಂತ್ರಾಕ್ಷತೆಯನ್ನು ನೀಡಲಿದ್ದಾರೆ. ಶ್ರೀ ಕೃಷ್ಣಧಾಮ ಮಾತ್ರವಲ್ಲದೆ ಜಯಲಕ್ಷ್ಮೀಪುರಂನ ರಾಯರ ಮಠ, ಉದಯಗಿರಿಯ ಶ್ರೀರಾಮಧಾಮ, ಜೆ.ಪಿ.ನಗರದ ವಿಠಲಧಾಮ, ಅಗ್ರಹಾರದ ಉತ್ತರಾಧಿಮಠ, ಉಡುಪಿ ಶ್ರೀ ಕೃಷ್ಣಮಂದಿರ, ಕೃಷ್ಣಮೂರ್ತಿಪುರಂನ ವ್ಯಾಸರಾಯ ಮಠ, ಚಾಮರಾಜರಸ್ತೆಯ ವೆಂಕಟಾಚಲಧಾಮ, ಟಿ.ಕೆ.ಲೇಔಟ್‌ನ ರಾಯರ ಮಠ ಮುಂತಾದ ಧಾರ್ಮಿಕ ಕೇಂದ್ರಗಳಲ್ಲಿ ಆಸ್ಥಾನ ಪೂಜೆಯನ್ನು ಕೈಗೊಳ್ಳಲಿದ್ದಾರೆ. ಶ್ರೀಗಳು ತಮ್ಮ 40ನೇ ಪರ್ವದಲ್ಲಿ ನಡೆಸುತ್ತಿರುವ ಈ ಚಾತುರ್ಮಾಸ್ಯ ವ್ರತದಲ್ಲಿ ದೇವರ ಪೂಜೆ, ಪ್ರವಚನಗಳಿಗೆ ಮಾತ್ರ ಸೀಮಿತಗೊಳಿಸದೆ, ಸಾಮಾಜಿಕ ಕಾರ್ಯಕ್ರಮಗಳಲ್ಲೂ ಕೂಡ ಭಾಗವಹಿಸಲಿದ್ದಾರೆ. ವಿವಿಧ ವಿದ್ಯಾಕೇಂದ್ರಗಳನ್ನು ಸಂದರ್ಶಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ, ದೀನ ದಲಿತರ ಕೇರಿಗಳ ಸಂದರ್ಶನ ಹಾಗೂ ಆಶೀರ್ವಚನ, ಆಸ್ಪತ್ರೆ ವೃದ್ಧಾಶ್ರಮ ಇತ್ಯಾದಿಗಳನ್ನು ಸಂದರ್ಶಿಸಿ ಹಣ್ಣು ಹಂಪಲು ವಿತರಣೆ ಮುಂತಾದ ಧರ್ಮ ಕಾರ್ಯಗಳನ್ನು ನಡೆಸಲಿದ್ದಾರೆ.

90 ದಿನಗಳ ಪರ್ಯಂತ ನಡೆಯುವ ಈ ಉತ್ಸವದಲ್ಲಿ ಪ್ರತಿ ದಿನ ಕೃಷ್ಣಧಾಮದಲ್ಲಿ ಸಾಯಂಕಾಲ 5 ರಿಂದ 8.30 ವರೆಗೆ ಭಜನೆ, ವಿದ್ವಾಂಸರಿಂದ ಭಾಗವತ ಪ್ರವಚನ, ಶ್ರೀ ಶ್ರೀಗಳಿಂದ ಸಮಗ್ರ ರಾಮಾಯಣ ಪ್ರವಚನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಭಕ್ತಾದಿಗಳು ಚಾತುರ್ಮಾಸ್ಯ ವ್ರತದ ಮಾಹಿತಿಗಳನ್ನು ಪಡೆಯಲು 9448271837/ 9342183124/9945230501 ಸಂಪರ್ಕಿಸಬಹುದು ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಚಾತುರ್ಮಾಸ್ಯ ಸಮಿತಿಯ ವಿದ್ವತ್ ಸಮಿತಿಯ ಅಧ್ಯಕ್ಷ ವಿಜೇಂದ್ರ ಚಾರ್ಯ, ಸಮಿತಿಯ ಅಧ್ಯಕ್ಷರು ಎಂ.ಕೃಷ್ಣದಾಸ್ ಪುರಾಣಿಕ್, ಕಾರ್ಯಾಧ್ಯಕ್ಷ ರವಿಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ ಆರ್. ತಂತ್ರಿ, ಪ್ರಚಾರ ಸಮಿತಿಯ ಉಪಾಧ್ಯಕ್ಷ ವಿಕ್ರಂ ಅಯ್ಯಂಗಾರ್ ಉಪಸ್ಥಿತರಿದ್ದರು.

ಜಾನಪದ ಕಲೆ ಉಳಿಸಿ ಬೆಳೆಸಲು ಮಹಿಳೆಯರ ಪಾತ್ರ ಮುಖ್ಯ

–ಡಾ.ವಿಜಯಲಕ್ಷ್ಮಿ



ಮೈಸೂರು,ಜೂ.30(ಎಂಟಿವೈ)– ಜಾನಪದ ಕಲೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಹೆಣ್ಣು ಮಕ್ಕಳ ಪಾತ್ರ ಬಹುಮುಖ್ಯವಾಗಿದ್ದು, ಜಾನಪದ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳು ಇನ್ನಷ್ಟು ವಿಜೃಂಭಿಸಬೇಕು ಎಂದು ಮಹಾರಾಜ ಕಾಲೇಜಿನ ಜಾನಪದ ವಿಭಾಗದ ಪ್ರಾಧ್ಯಾಪಕಿ ಡಾ.ವಿಜಯಲಕ್ಷ್ಮಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಾನಪದ ಕಲಾ ಪ್ರಕಾರಗಳ ಪ್ರದರ್ಶನದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕನಿರ್ದೇಶಕಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ನಗರ ಪ್ರದೇಶಗಳಿಗೆ ಬರುತ್ತಾರೆ. ಕಾಲೇಜು ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಜಾನಪದ ಕಲಾಪ್ರಕಾರಗಳನ್ನು ಕಲಿಯುವ ಅವಕಾಶಗಳಿವೆ. ಈ ಹಿಂದೆ ಜಾನಪದ ಕಲಿಯುವುದಕ್ಕೆ ಕಷ್ಟವಾಗುತ್ತಿತ್ತು. ಆದರೆ ಇದೀಗ ಜಾನಪದ ಕಲಾ ಪ್ರಕಾರಗಳ ತರಬೇತಿ ಕೊಡುವ ಸನ್ನಿವೇಶ ನಮ್ಮಲ್ಲಿದೆ. ವಿದ್ಯಾರ್ಥಿಗಳು ಬೌಂಡರಿ ಹಾಕಿಕೊಳ್ಳದೆ ಕಲಿಯುವ ಆಸಕ್ತಿ ಬೆಳೆಸಿಕೊಳ್ಳಬೇಕು. ಜಾನಪದ ಕಲೆಗಳ ಪರಿಕರಗಳ ಬಗ್ಗೆ ತಿಳಿದುಕೊಳ್ಳಬೇಕು. ಡೊಳ್ಳು ತಯಾರಿಕೆ, ಅದಕ್ಕಾಗಿ ಬಳಸುವ ಚರ್ಮ ಯಾವುದು, ಎಡ ಹಾಗೂ ಬಲಭಾಗಕ್ಕೆ ಬೇರೆ ಬೇರೆ ಚರ್ಮ ಬಳಸುವುದು ಯಾವ ಕಾರಣಕ್ಕೆ ಎನ್ನುವುದನ್ನೂ ವಿದ್ಯಾರ್ಥಿಗಳಿಗೆ ಕಲಿಸಬೇಕು ಎಂದು ಸಲಹೆ ನೀಡಿದರು.

ಜಾನಪದ ಕಲೆಯನ್ನು ಉಳಿಸಿ, ಬೆಳೆಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಸಾಕಷ್ಟು ಜನ ನಿರಂತರವಾಗಿ ಪ್ರಯತ್ನಿಸುತ್ತಾ ಇದ್ದಾರೆ. ಕಾಲೇಜು ಹಾಗೂ ವಿವಿಗಳಲ್ಲಿ ಜಾನಪದವನ್ನು ಬೋಧಿಸುವ ಕಾಯಕದಲ್ಲಿ ಹಲವು ಮಂದಿ ತೊಡಗಿಸಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದ ಮಹಿಳೆಯರು ಜಾನಪದ ಕಲೆ ಬೆಳೆಸುವ ಕಾಯಕದಲ್ಲಿ ನಿರಂತವಾಗಿ ತೊಡಗಿಸಿಕೊಂಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ರೈತರು ಬೆಳೆದ ಫಸಲಿನ ಒಕ್ಕಣೆ ಕಾರ್ಯದಲ್ಲೂ ಜಾನಪದ ಕಲೆ ಕಾಣಬಹುದಾಗಿದೆ. ದವಸ–ಧಾನ್ಯ ಸಂಗ್ರಹಿಸುವ, ಅದನ್ನು ಮುಂದಿನ ವರ್ಷಕ್ಕೆ ಬಿತ್ತನೆಗೆ ಬಳಸಲು ಸಂರಕ್ಷಿಸುವ ಎಲ್ಲಾ ಕಲೆಯೂ ಮಹಿಳೆಯರಲ್ಲೇ ಅಡಗಿದೆ. ಹೆಣ್ಣು ಮಕ್ಕಳು ಜಾನಪದ ಉಳಿಸುವ ಕೆಲಸ ಮಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕಥೆ ಕಟ್ಟುವ ಹಾಗೂ ಕಥೆ ಹೇಳುವ, ಗಾದೆ ಕಟ್ಟುವ, ಪ್ರದರ್ಶಿಸುವ ಕೆಲಸವನ್ನು ಹೆಣ್ಣುಮಕ್ಕಳು ಮಾಡುತ್ತಿದ್ದಾರೆ. ಮುಂದಿನ ಪೀಳಿಗೆಗೆ ಕೊಂಡೊಯ್ಯುತ್ತಿದ್ದಾರೆ. ಮನೆ ಮುಂದೆ ರಂಗೋಲಿ ಬಿಡಿಸುವುದು ಸೇರಿದಂತೆ ವಿವಿಧ ಆಚರಣೆ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಾನಪದ ಕಲೆ ಸಂರಕ್ಷಣೆಗೆ ಮಹಿಳೆಯರ ಕೊಡುಗೆ ಅಪಾರ ಎಂದರು.

ಜಾನಪದ ಕಲೆ ಕಲಿಯಲು ಯುವಜನರು, ವಿದ್ಯಾರ್ಥಿಗಳು ಮುಂದೆ ಬರುತ್ತಿರುವುದು ಶ್ಲಾಘನೀಯ. ಹೆಣ್ಣು ಮಕ್ಕಳು ತರಬೇತಿ ಶಿಬಿರ ನಡೆಸಲು ಮುಂದಾಗಿರುವುದು ಒಳ್ಳೆ ಬೆಳವಣಿಗೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಮಾತನಾಡಿ, ಮೈಸೂರಿನ ಮಹಾರಾಜ ಕಾಲೇಜಿನ ಜಾನಪದ ವಿಭಾಗ ಗಟ್ಟಿಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯದಲ್ಲಿ ಹಲವು ವಸ್ತುಗಳನ್ನು ಸಂಗ್ರಹಿಸಿಡಲಾಗಿದೆ. ಆ ವಸ್ತು ಸಂಗ್ರಹಾಲಯಕ್ಕೆ ವಿದ್ಯಾರ್ಥಿಗಳು ಭೇಟಿ ನೀಡಿ, ವೀಕ್ಷಿಸಬೇಕು. ಅಲ್ಲಿರುವ ವಸ್ತುಗಳನ್ನು ಈ ಹಿಂದೆ ಅಜ್ಜ–ಅಜ್ಜಿಯರ ಕಾಲದಲ್ಲಿ ಬಳಸುತ್ತಿದ್ದುದ್ದಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ವಸ್ತುಗಳು ಜಾನಪದವನ್ನು ಹೇಳುತ್ತವೆ ಎಂದರು. ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳಲ್ಲಿ ಒಂದಾಗಿರುವ ಮೈಸೂರು ವಿಶ್ವವಿದ್ಯಾನಿಲಯ ಜಾನಪದ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ವರನಟ ಡಾ.ರಾಜಕುಮಾರ್ ಅವರನ್ನು ಹೊರತುಪಡಿಸಿದರೆ, ಜಾನಪದ ಗಾಯಕ ಡಾ.ಮಳವಳ್ಳಿ ಮಹಾದೇವಸ್ವಾಮಿ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿದೆ. ಇದುವರೆಗೂ ಹಲವು ಮಂದಿಗೆ ಗೌರವ ಡಾಕ್ಟರೇಟ್ ನೀಡಿದ್ದರೂ ಕಲಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ಇಬ್ಬರಿಗೆ ಮಾತ್ರ ಈ ಗೌರವ ನೀಡಿದೆ. ಇದರಿಂದ ಜಾನಪದ ಕ್ಷೇತ್ರಕ್ಕೆ ನೀಡಿರುವ ಮಹತ್ವವನ್ನು ಮನಗಾಣಬಹುದಾಗಿದೆ. ಜಾನಪದ ರುಚಿ ಹತ್ತಿದರೆ ಸಾಧನೆ ಮಾಡುವುದರೊಂದಿಗೆ ಸದಾ ಲವಲವಿಕೆಯಿಂದ ಕೂಡಿರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು. ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರದ ಸಂಯೋಜನಾಧಿಕಾರಿ ಕೆ.ಕೆ. ದೇವಾನಂದ ವರಪ್ರಸಾದ್, ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷೆ ಎಸ್.ರಮ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು. ಬಳಿಕ ವಿವಿಧ ಜಾನಪದ ಕಲಾ ಪ್ರಕಾರಗಳನ್ನು ಶಿಬಿರದಲ್ಲಿ ಕಲಿತ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದರು.

ಇಂದು ಪಂಚಮಿ ಗೋಪಾಲ್ ಅವರಿಂದ ಭರತನಾಟ್ಯ ರಂಗ ಪ್ರವೇಶ



ಮೈಸೂರು, ಜೂ. 30– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗುರುಪ್ರೀತಿ ರಾಮಕೃಷ್ಣನ್ ಅವರ ಶಿಷ್ಯೆ ಪಂಚಮಿ ಗೋಪಾಲ್ ಅವರಿಂದ ಜು.1 ಸಂಜೆ 5 ಗಂಟೆಗೆ ಭರತನಾಟ್ಯ ರಂಗ ಪ್ರವೇಶ ಏರ್ಪಡಿಸಲಾಗಿದೆ. ನೃತ್ಯಾಲಯ ಟ್ರಸ್ಟ್‌ನ ಸಂಸ್ಥಾಪಕ ನಿರ್ದೇಶಕರಾದ ಡಾ. ತುಳಸಿ ರಾಮಚಂದ್ರ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಪಂಚಮಿ ಗೋಪಾಲ್ ಅವರು 6ನೇ ವಯಸ್ಸಿನಿಂದಲೂ ಭರತನಾಟ್ಯ ಮತ್ತು 7ನೇ ವಯಸ್ಸಿನಿಂದ ಕರ್ನಾಟಕ ಸಂಗೀತವನ್ನು ಕಲಿಯುತ್ತಿದ್ದಾರೆ. ಈಕೆ ಟೆಕ್ಸಾಸ್‌ನ ಕಾಟಿ ನಿವಾಸಿ ಸತೀಶ್ ಗೋಪಾಲ್ ಮತ್ತು ಸುರೇಖಾ ಸತೀಶ್ ಅವರ ಪುತ್ರಿ.

ರಾಷ್ಟ್ರೀಯ ವೈದ್ಯರ ದಿನಾಚರಣೆ: ವೈದ್ಯರತ್ನ ಪ್ರಶಸ್ತಿ ಪ್ರದಾನ ಸಮಾರಂಭ



ಡಾ.ಪೂರ್ಣಿಮಾ



ಡಾ.ಕೆ.ವಿ.ಲಕ್ಷ್ಮೀದೇವಿ

ಮೈಸೂರು, ಜೂ. 30– ಮೈಸೂರಿನ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ರಾಷ್ಟ್ರೀಯ ವೈದ್ಯರ ದಿನಾಚರಣೆ ಹಾಗೂ ವೈದ್ಯರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ತ್ಯಾಗರಾಜ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣದಲ್ಲಿ ಜು.1 ಬೆಳಗ್ಗೆ 11.30ಕ್ಕೆ ಏರ್ಪಡಿಸಲಾಗಿದೆ.

ಶಾಸಕ ಟಿ.ಎಸ್. ಶ್ರೀವತ್ಸ ಅವರು ಡಾ.ಬಿ.ಸಿ.ರಾಯ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವರು. ಭಾನವಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ.ಎನ್.ವಿಜಯಚೆಲುವರಾಜ್ ಅವರು ವೈದ್ಯರ ದಿನಾಚರಣೆ ಮಹತ್ವ ಕುರಿತು ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಭಾಗವಹಿಸುವರು. ಇದೇ ವೇಳೆ ಡಾ. ಕೆ.ವಿ.ಲಕ್ಷ್ಮೀದೇವಿ ಮತ್ತು ಡಾ.ಪೂರ್ಣಿಮಾ ಮಧುಸೂದನ್ ಅವರಿಗೆ ವೈದ್ಯರತ್ನ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ಮತ್ತು ಸಂಚಾಲಕ ಎನ್.ಅನಂತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರಲ್ಲಿ ಯುವ ಕಾಂಗ್ರೆಸ್‌ನಿಂದ 'ಬೆಹತರ್ ಭಾರತ್ ಬುನಿಯಾದಿ' ರಾಷ್ಟ್ರೀಯ ಸಮಾವೇಶ



ಬೆಂಗಳೂರು, ಜೂ 30(ಕೆಎಂಶಿ)– ರಾಷ್ಟ್ರೀಯ ಯುವ ಕಾಂಗ್ರೆಸ್‌ನಿಂದ ಮುಂದಿನ ತಿಂಗಳು ನಡೆಯಲಿರುವ "ಬೆಹತರ್ ಭಾರತ್ ಬುನಿಯಾದಿ" ರಾಷ್ಟ್ರೀಯ ಕಾರ್ಯಕ್ರಮ ಉದ್ಘಾಟನೆಗೆ ಯುವ ಕಾಂಗ್ರೆಸ್ ನಿಯೋಗ ಸಿಎಂ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿದೆ. ಎಐಸಿಸಿ ಜಂಟಿ ಕಾರ್ಯದರ್ಶಿ, ಯುವ ಕಾಂಗ್ರೆಸ್‌ನ ಉಸ್ತುವಾರಿ ಕೃಷ್ಣ ಅಳವಾರು, ಯುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷಬಿ.ವಿ.ಶ್ರೀನಿವಾಸ್ ಹಾಗೂ ರಾಷ್ಟ್ರೀಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಎಐಸಿಸಿ ಸದಸ್ಯ ಎಂ.ಎಸ್.ರಕ್ಷಾರಾಮಯ್ಯ ಅವರು ಸಿಎಂ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಗೋವಿಂದ ರಾಜು ಅವರು ಉಪಸ್ಥಿತರಿದ್ದರು.

"ಬೆಹತರ್ ಭಾರತ್ ಬುನಿಯಾದಿ" ಸಮಾವೇಶವನ್ನು ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ನಡೆಸುತ್ತಿದ್ದು, ಯುವ ಸಮೂಹದ ಮೂಲಕ ದೇಶದಲ್ಲಿ ಯುವ ಶಕ್ತಿಯನ್ನು ಸೂಕ್ತ ದಿಕ್ಕಿನತ್ತ ಕೊಂಡೊಯ್ಯುವ ಉದ್ದೇಶ ಹೊಂದಲಾಗಿದೆ. ಮುಂಬರುವ ಲೋಕಸಭಾ ಚುನಾವಣೆಗೆ ಪೂರ್ವಭಾವಿಯಾಗಿ ನಡೆಯುತ್ತಿರುವ ಅತೀ ದೊಡ್ಡ ಯುವ ಸಮಾವೇಶ ಇದಾಗಿದ್ದು, ಮೂರು ದಿನಗಳ ಕಾಲ ಪಕ್ಷದ ಹಿರಿಯ ಮುಖಂಡರು, ತಜ್ಞರು ವಿವಿಧ ವಿಷಯಗಳ ಬಗ್ಗೆ ಯುವ ಸಮೂಹಕ್ಕೆ ಮಾರ್ಗದರ್ಶನ ಮಾಡಲಿದ್ದಾರೆ ಎಂದು ರಕ್ಷಾ ರಾಮಯ್ಯ ತಿಳಿಸಿದ್ದಾರೆ.

ಕಿರಣ್ ಸುಬ್ಬಯ್ಯರಿಗೆ 2022ನೇ ಸಾಲಿನ ವಚನ ಚಿತ್ರರಚನಾ ಪಿತಾಮಹ ಎಂ.ವೀರಪ್ಪ ದತ್ತಿ ಪ್ರಶಸ್ತಿ

ಮೈಸೂರು, ಜೂ. 30– ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ನೀಡಲಾಗುವ 2022ನೇ ಸಾಲಿನ "ವಚನ ಚಿತ್ರರಚನಾ ಪಿತಾಮಹ ಎಂ. ವೀರಪ್ಪ ದತ್ತಿ ಪ್ರಶಸ್ತಿ"ಗೆ ಕಿರಣ್ ಸುಬ್ಬಯ್ಯನವರು ಭಾಜನರಾಗಿದ್ದಾರೆ. ಪ್ರಶಸ್ತಿ ಪುರಸ್ಕೃತರಿಗೆ 68,000 ರೂ. ನಗದು, ಸ್ವಸ್ತಿವಾಚನ ಹಾಗೂ ಪ್ರಶಸ್ತಿ ಫಲಕವನ್ನು ನೀಡಿ ಪುರಸ್ಕರಿಸಲಾಗುವುದು.

ಕರಕುಶಲ ಶಿಲ್ಪಕಲಾವಿದರಾದ ಕಿರಣ್ ಸುಬ್ಬಯ್ಯನವರು ಕೊಡಗಿನ ಪಾರಾಣೆ ಗ್ರಾಮದ ಅಪ್ಪನೆರವಂಡ ಕುಟುಂಬಕ್ಕೆ ಸೇರಿದವರು. ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಶಿಲ್ಪಕಲೆ ಅಭ್ಯಾಸ ಮಾಡಿದರು. ಶಿಕ್ಷಣದ ನಂತರ ಶಿಲ್ಪಗಳ ಕೆತ್ತನೆಯಲ್ಲಿ ಹೊಸ ಶೈಲಿಯನ್ನು ರೂಪಿಸುವ ಉದ್ದೇಶದಿಂದ ಹಲವಾರು ವರ್ಷ ಪರಿಶ್ರಮ ಪಟ್ಟು ಹೊಸ ಮಾದರಿಯ ಶಿಲ್ಪಗಳನ್ನು ರಚಿಸಿದ್ದಾರೆ. ಒಂದೇ ಕಲ್ಲಿನಲ್ಲಿ ಎರಡು, ಮೂರು, ನಾಲ್ಕು, ಐದು ಆಯಾಮಗಳಲ್ಲಿ ನೋಡಬಹುದಾದ ಶಿಲ್ಪಗಳು ಇವರ ವೈಶಿಷ್ಟ್ಯ. ಒಟ್ಟಾರೆ 212 ಶಿಲ್ಪಗಳಲ್ಲಿ 655 ಬಗೆಯ ಇಂಥ ವಿಸ್ಮಯಕರವಾದ ನೋಟವನ್ನು ರೂಪಿಸಿದ್ದಾರೆ. ಇಂತಹ ಬಹುಮುಖಿ ಶಿಲ್ಪಗಳು ಮೈಸೂರಿನ ಬಂಬೂ ಬಜಾರ್ ಸರ್ಕಲ್‌ನ K.S. Museum of Sculpture ಗ್ಯಾಲರಿಯಲ್ಲಿವೆ. ಸಾಂಪ್ರದಾಯಿಕ ಶಿಲ್ಪಗಳ ನೆಲೆಯಲ್ಲಿ 135 ಹೆಡೆಗಳ ಆದಿಶೇಷನನ್ನು ಕಂಡರಿಸಿರುವುದು ಗಿನ್ನಿಸ್ ದಾಖಲೆಗೆ ಸೇರಲು ಅರ್ಹವಾಗಿದೆ. ಇವಲ್ಲದೆ ಅನೇಕ ದೇವತಾ ವಿಗ್ರಹಗಳನ್ನು ರೂಪಿಸಿದ್ದಾರೆ. ವಿವಿಧ ಬಗೆಯ ಅಲಂಕಾರಿಕ ಸ್ತಂಭ, ಸ್ತೂಪ, ಪೀಠ ಮತ್ತು ನವನವೋನ್ಮೇಷಶಾಲಿಯಾದ ಪ್ರದರ್ಶನಮೂರ್ತಿಗಳನ್ನು ಕೆತ್ತಿದ್ದಾರೆ.



ಚಿತ್ರಕಲೆಯಲ್ಲಿ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಮೈಸೂರು ಟಾಯ್ಸ್ ಕಂಪನಿಯ ಸ್ಥಾಪಕರೂ, ಖ್ಯಾತ ಚಿತ್ರಕಲಾವಿದರೂ ಆದ ಎಂ. ವೀರಪ್ಪನವರ ಹೆಸರಿನಲ್ಲಿ ಅವರ ಮಕ್ಕಳಾದ ಪ್ರಫುಲ್ಲ ಚಂದ್ರ ಹಾಗೂ ಅವರ ಮೊಮ್ಮಕ್ಕಳಾದ ಸತೀಶ್ ಪ್ರಫುಲ್ಲಚಂದ್ರ ಅವರು ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ದತ್ತಿಯನ್ನು ಸ್ಥಾಪಿಸಿದ್ದಾರೆ. ಅದರ ಆಶ್ರಯದಲ್ಲಿ 2015ರಿಂದಲೂ ಶ್ರೇಷ್ಠ ಕಲಾವಿದರುಗಳಿಗೆ ಪ್ರತಿ ವರ್ಷ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಸದ್ಯದಲ್ಲಿಯೇ ಏರ್ಪಡಿಸುವ ಸಮಾರಂಭದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಸನ್ಮಾನಿಸಲಾಗುವುದು.

ಭೈರವಿ ಗೌಡತಿಯರ ಬಳಗದಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ಮೈಸೂರು, ಜೂ. 30– ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಭೈರವಿ ಗೌಡತಿಯರ ಬಳಗದಿಂದ ಪರಿಸರ ದಿನಾಚರಣೆ, ನಾಡಪ್ರಭು ಕೆಂಪೇಗೌಡರ ಜಯಂತಿ ಹಾಗೂ ಯೋಗದಿನ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಡಾ. ಜಿಲ್ಲಾ ಆಯುಷ್ ಅಧಿಕಾರಿ ಪುಷ್ಪಾ ಅವರನ್ನು ಅಭಿನಂದಿಸಲಾಯಿತು.

ಕೆಂಪೇಗೌಡರ ಜಯಂತಿಯ ಅಂಗವಾಗಿ ಸಾಹಿತಿ ರಾಜೇಶ್ವರಿ ಪ್ರಬಂಧ ಮಂಡಿಸಿದರು. ಲತಾ ಕೆಂಪೇಗೌಡರ ಬಗ್ಗೆ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ ವಹಿಸಿದ್ದರು. ಸಮಿತಿಯ ಪದಾಧಿಕಾರಿಗಳಾದ ಹೇಮಾನಂದೀಶ್, ಶ್ರೀಮತಿ ಕೋಮಲ, ಉಮಾನಾಗೇಶ್, ಸುಶೀಲ, ರೇಣುಕಾ, ರಾಧಾ ಜೈರಾಮ್ ಉಪಸ್ಥಿತರಿದ್ದರು.



ಪ್ರಧಾನಿ ಡಿಗ್ರಿ ಬಗ್ಗೆ ಕೇಜ್ರಿವಾಲ್ ಅರ್ಜಿ ವಿಚಾರಣೆ ನಡೆಸಲಿರುವ ಕೋರ್ಟ್

ನವದೆಹಲಿ: ಪ್ರಧಾನಿ ಮೋದಿ ಅವರ ಡಿಗ್ರಿ ಬಗ್ಗೆ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಗುಜರಾತ್ ಹೈಕೋರ್ಟ್ ವಿಚಾರಣೆ ನಡೆಸಲಿದೆ.

ಜು.07 ರಂದು ಅರ್ಜಿಯ ವಿಚಾರಣೆ ನಡೆಯಲಿದೆ. ಪ್ರಧಾನಿ ಮೋದಿ ಅವರ ಡಿಗ್ರಿ ವಿಷಯವಾಗಿ ಮಾಹಿತಿಯನ್ನು ಹುಡುಕುವುದಕ್ಕೆ ವಿಶ್ವವಿದ್ಯಾನಿಲಯಕ್ಕೆ ಕೇಂದ್ರ ಮಾಹಿತಿ ಆಯೋಗ ನೀಡಿದ್ದ ಸೂಚನೆಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಹೈಕೋರ್ಟ್ ನೀಡಿದ್ದ ಆದೇಶವನ್ನು ಮರುಪರಿಶೀಲಿಸಬೇಕು ಎಂದು ಆಮ್ ಆದ್ಮಿ ಪಕ್ಷದ ನಾಯಕ ಕೇಜ್ರಿವಾಲ್ ಅರ್ಜಿ ಸಲ್ಲಿಸಿದ್ದರು. ಮರು ಪರಿಶೀಲನಾ ಅರ್ಜಿಯ ವಿಚಾರಣೆಯನ್ನು ನಡೆಸಲು ಹೈಕೋರ್ಟ್ ಒಪ್ಪಿಗೆ ನೀಡಿದೆ ನ್ಯಾಯಮೂರ್ತಿ ಬಿರೇನ್ ವೈಷ್ಣವ್ ಅವರು ಗುಜರಾತ್ ವಿಶ್ವವಿದ್ಯಾಲಯ, ಕೇಂದ್ರ ಸರ್ಕಾರ, ಮುಖ್ಯ ಮಾಹಿತಿ ಆಯುಕ್ತ ಮತ್ತು ಮಾಜಿ ಸಿಐಸಿ ಎಂ. ಶ್ರೀಧರ್ ಆಚಾರ್ಯುಲು ಅವರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

ಮೈಸೂರು ವಿವಿ ನಿವೃತ್ತರು ಪಿಂಚಣಿಗಾಗಿ ಪರದಾಟ!

● ಬ್ಯಾಂಕ್‌ಗಳಿಗೆ ಬಂದು ಬರಿಗೈಯ್ಯಲ್ಲಿ ವಾಪಸ್ಸಾದರು ● ಕುಲಪತಿಗಳ ಅನುಪಸ್ಥಿತಿ; ನಿವೃತ್ತರು, ತಾತ್ಕಾಲಿಕ ಸಿಬ್ಬಂದಿ ಪಜೀತಿ



ಮೈಸೂರು, ಜೂ.30(ಎಸ್‌ಬಿಡಿ)– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತರಿಗೆ ಪಿಂಚಣಿ ಸಂದಾಯವಾಗದೆ ಕಂಗಾಲಾಗಿದ್ದಾರೆ. 107 ವರ್ಷದ ಇತಿಹಾಸವಿರುವ ವಿವಿಯಲ್ಲಿ ಇದೇ ಮೊದಲ ಬಾರಿಗೆ ಈ ಅವಾಂತರ ಸೃಷ್ಟಿಯಾಗಿದೆ ಎನ್ನಲಾಗಿದೆ.

ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ, ನಿಧನರಾಗಿದ್ದರೆ ಅವರ ಕುಟುಂಬದವರಿಗೆ ಪಿಂಚಣಿ ಸೌಲಭ್ಯವಿದ್ದು, ಪ್ರತಿ ತಿಂಗಳು 30ರಂದು ಅವರ ಬ್ಯಾಂಕ್ ಖಾತೆಗೆ ತಪ್ಪದೆ ಪಿಂಚಣಿ ಹಣ ಸಂದಾಯವಾಗುತ್ತಿತ್ತು. ಹಾಗೆಯೇ ಶುಕ್ರವಾರ ಹಲವರು ಬ್ಯಾಂಕ್ ಮುಂದೆ ಜಮಾಯಿಸಿದ್ದರು. ಆದರೆ ಎಷ್ಟು ಹೊತ್ತು ಕಾದರೂ ತಮ್ಮ ಬ್ಯಾಂಕ್ ಖಾತೆಗೆ ಪಿಂಚಣಿ ಹಣ ಸಂದಾಯವಾಗದ ಕಾರಣ ನಿರಾಸೆಯಿಂದ ವಾಪಸ್ಸಾದರು. ವಿವಿಯಲ್ಲಿ ಕುಲಪತಿಯಿಲ್ಲದೆ ಸೃಷ್ಟಿಯಾಗಿರುವ ನಿರ್ವಾತ ಈ ಸಮಸ್ಯೆಗೆ ಕಾರಣ ಎನ್ನಲಾಗುತ್ತಿದೆ.

ಟೀಚಿಂಗ್ ಹಾಗೂ ನಾನ್ ಟೀಚಿಂಗ್ ನಿವೃತ್ತರು ಪಿಂಚಣಿಯನ್ನೇ ನಂಬಿರುತ್ತಾರೆ. ಪ್ರತಿ ತಿಂಗಳು 30ರ ಮಧ್ಯಾಹ್ನ 12ಕ್ಕೆ ಖಾತೆಗೆ ಹಣ ಜಮಾ ಆಗಿರುವ ಸಂದೇಶ ಬರುತ್ತಿತ್ತು. ಆದರೆ ಇಂದು ಆ ಸಂದೇಶ ಬರಲೇ ಇಲ್ಲ. ಎಟಿಎಂ ಬಳಕೆ ತಿಳಿಯದೆ ನೇರವಾಗಿ ಬ್ಯಾಂಕ್‌ನಿಂದ ಹಣ ಬಿಡಿಸಿಕೊಳ್ಳಲೆಂದು ಬಂದಿದ್ದ ಹಲವರು ನಿರಾಸೆಯಿಂದ ಮನೆಗೆ ಹೋದರು. ವಯಸ್ಸಾದವರು, ನಿವೃತ್ತರ ಕುಟುಂಬದವರು ತುಂಬಾ ಹೊತ್ತು ಕಾದು ಬರಿಗೈಯಲ್ಲಿ ಹೋದರು. ಈ ಬಗ್ಗೆ ಯಾರನ್ನು ವಿಚಾರಿಸಬೇಕೆಂದು ತಿಳಿಯದ ಅಮಾಯಕರೂ ಎಷ್ಟೋ ಜನ ಇದ್ದಾರೆ. ಕೆಲವರಿಗೆ ಮೂರ್ನಾಲ್ಕು ಸಾವಿರ ಪಿಂಚಣಿ ಬರುತ್ತದೆ. ಆ ಹಣವೂ ಸಕಾಲಕ್ಕೆ ಸಿಗದಿದ್ದರೆ ಅವರು ಹೇಗೆ ಜೀವನ ನಡೆಸಬೇಕು. ಔಷಧೋಪಚಾರಕ್ಕೂ ಪರದಾಡಬೇಕಾಗುತ್ತದೆ. ಮೈಸೂರು ವಿವಿಯ ಇತಿಹಾಸದಲ್ಲೇ ಇಂತಹ ದುಸ್ಥಿತಿ ಎಂದೂ ಸೃಷ್ಟಿಯಾಗಿರಲಿಲ್ಲ ಎಂದು ಪಿಂಚಣಿದಾರರೊಬ್ಬರು ತೀವ್ರ ವಿಷಾಧ ವ್ಯಕ್ತಪಡಿಸಿದ್ದಾರೆ.

ವೇತನಕ್ಕೂ ಅಡ್ಡಿ: ನಿವೃತ್ತರ ಪಿಂಚಣಿ ವಿತರಣೆಗಷ್ಟೇ ಅಲ್ಲ, ತಾತ್ಕಾಲಿಕ ಸಿಬ್ಬಂದಿ ವೇತನಕ್ಕೂ ತಡೆಯುಂಟಾಗುವ ಸಾಧ್ಯತೆ ಇದೆ. ವಿದ್ಯಾರ್ಥಿಗಳ ಫೆಲೋಷಿಪ್ ಸೇರಿದಂತೆ ಹಣಕಾಸಿಗೆ ಸಂಬಂಧಿಸಿದ ಎಲ್ಲಾ ಕೆಲಸ ಕಾರ್ಯಗಳಿಗೂ ಅಡ್ಡಿಯಾಗಲಿದೆ. ಒಂದು ದಿನ ಪಿಂಚಣಿ ವಿಳಂಬವಾದರೂ ಸಾವಿರಾರು ಕುಟುಂಬಗಳಿಗೆ ತೊಂದರೆಯಾಗುತ್ತದೆ. ಇನ್ನು ವೇತನ ವಿಳಂಬವಾದರೆ ಸೇವಾನಿರತರಿಗೂ ಸಮಸ್ಯೆಯಾಗಲಿದೆ. ವಿದ್ಯಾರ್ಥಿಗಳಿಗೂ ಸಕಾಲದಲ್ಲಿ ಫೆಲೋಷಿಪ್ ಲಭ್ಯವಾಗುವುದಿಲ್ಲ.

ಸರ್ಕಾರಕ್ಕೆ ಪತ್ರ ಬರೆದಿರುವೆ: ಮೈಸೂರು ವಿವಿ ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ ಭಟ್ ಈ ಸಂಬಂಧ ಪ್ರತಿಕ್ರಿಯಿಸಿ, ಕುಲಪತಿಗಳಿಲ್ಲದ ಕಾರಣದಿಂದ ನಿವೃತ್ತ ಪಿಂಚಣಿ ಸಂದಾಯ ಮಾಡಲು ಸಾಧ್ಯವಾಗಿಲ್ಲ. ಅವರ ಅನುಮೋದನೆ ಇಲ್ಲದೆ ಹಣಕಾಸಿಗೆ ಸಂಬಂಧಿಸಿದ ತೀರ್ಮಾನ ಕೈಗೊಳ್ಳುವ ಅಧಿಕಾರವಿಲ್ಲ. ನಮ್ಮ ಹಂತದಲ್ಲಿ ಗರಿಷ್ಠ 1 ಲಕ್ಷ ರೂ. ವರೆಗೆ ಮಾತ್ರ ನಿರ್ಧಾರ ತೆಗೆದುಕೊಳ್ಳಬಹುದು. ಆದರೆ 1840 ಜನರಿಗೆ ಒಟ್ಟು 6.25 ಕೋಟಿ ರೂ. ಪಿಂಚಣಿ ಸಂದಾಯ ಮಾಡಬೇಕು. ಕಡತಕ್ಕೆ ಕುಲಪತಿಗಳ ಅನುಮೋದನೆ ಸಿಗದೆ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಪಿಂಚಣಿ ನೀಡಲು ಸಮಸ್ಯೆಯಾಗಿದೆ, ತಾತ್ಕಾಲಿಕ ಸಿಬ್ಬಂದಿ ವೇತನ, ವಿದ್ಯಾರ್ಥಿಗಳ ಫೆಲೋಷಿಪ್ ವಿತರಣೆಗೂ ತೊಂದರೆಯಾಗುತ್ತದೆ. ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಸರ್ಕಾರದಿಂದ ಸೂಚನೆ ಬಂದ ನಂತರ ಅದರಂತೆ ಕ್ರಮ ವಹಿಸುತ್ತೇವೆ ಎಂದು ತಿಳಿಸಿದರು. ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ಪ್ರೊ.ಎನ್.ಕೆ.ಲೋಕನಾಥ್ ಅವರನ್ನು ನೇಮಕಮಾಡಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಜೂ.21ರಂದು ಮಧ್ಯಂತರ ತಡೆ ನೀಡಿದ್ದು, ತಡೆಯಾಜ್ಞೆ ತೆರವುಗೊಳಿಸುವಂತೆ ಕೋರಿ ಸಲ್ಲಿಸಿದ ಅರ್ಜಿ ವಿಚಾರಣೆಯನ್ನು ಜು.13ಕ್ಕೆ ಮುಂದೂಡಲಾಗಿದೆ. ಇತ್ತ ಹಂಗಾಮಿ ಕುಲಪತಿಯನ್ನೂ ನೇಮಿಸಿಲ್ಲ. ಇದರ ಪರಿಣಾಮವನ್ನು ನಿವೃತ್ತರು, ತಾತ್ಕಾಲಿಕ ಸೇವೆಯಲ್ಲಿರುವ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅನುಭವಿಸುವಂತಾಗಿದೆ.

ಅಸಂಘಟಿತ ಕಾರ್ಮಿಕರಿಗೆ ಇ–ಶ್ರಮ್ ಕಾರ್ಡ್ ವಿತರಣೆ



ಮೈಸೂರು, ಜೂ.30–ಬಿಜೆಪಿ ಅಸಂಘಟಿತ ಕಾರ್ಮಿಕ ಪ್ರಕೋಷ್ಠ ವತಿಯಿಂದ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ಜನ ಸೇವಾ ಕೇಂದ್ರದಲ್ಲಿ ಕಟ್ಟಡ ಕಾರ್ಮಿಕರಿಗೆ ಪೈಂಟರ್, ಕಾರ್ಪೆಂಟರ್, ಬಾರ್ ಬೆಂಡಿಂಗ್, ಮೇಸನ್, ಎಲೆಕ್ಟ್ರಿಷಿಯನ್, ಪ್ಲಂಬರ್ ಗಾರೆ ಕೆಲಸದ ಸಹಾಯಕರಿಗೆ ಇ–ಶ್ರಮ್ ಕಾರ್ಡ್ ವಿತರಿಸಲಾಯಿತು.

ಈ ವೇಳೆ ಹಿಂದು ಜಾಗರಣ ವೇದಿಕೆಯ ಪ್ರಾಂತ ಸಹ ಸಂಯೋಜಕ ಲೋಹಿತ್ ಅರಸು ಅವರು ಇ–ಶ್ರಮ್ ಕಾರ್ಡ್ ವಿತರಿಸಿ ಮಾತನಾಡಿ, ಅಸಂಘಟಿತ ಕಾರ್ಮಿಕರಿಗೆ ಜೀವನ ಭದ್ರತೆಯೊಂದಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ದೊರಕುವಂತಾಗಬೇಕು. ಆರ್ಥಿಕತೆಯ ತಳ ಹದಿಯಾಗಿರುವ ಅಸಂಘಟಿತ ಕಾರ್ಮಿಕರೇ ದೇಶದ ಶಕ್ತಿ. ಆದ್ದರಿಂದ ದೇಶದಲ್ಲಿ ಅಸಂಘಟಿತ ವಲಯದ 38 ಕೋಟಿ ಕಾರ್ಮಿಕರಿದ್ದು, ಕಟ್ಟಡ ಕಾರ್ಮಿಕರು ವಲಸೆ ಕಾರ್ಮಿಕರು ಬೀದಿ ಬದಿ ವ್ಯಾಪಾರಿಗಳು ಗೃಹಕಾರ್ಮಿಕರು ಮುಂತಾದ ಅಸಂಘಟಿತ ವಲಯದಲ್ಲಿ ದುಡಿಯುವ ವರ್ಗಗಳನ್ನು ಒಂದೇ ವೇದಿಕೆಯಡಿ ತರುತ್ತಿರುವುದು ಮಹತ್ವದ ಕಾರ್ಯ. ಅಸಂಘಟಿತ ಕಾರ್ಮಿಕರಿಗೆ ಯೋಜನೆಗಳ ಲಾಭ ದೊರಕಿಸಿಕೊಡುವುದು ಕೂಡ ಈ ಯೋಜನೆ ಉದ್ದೇಶವಾಗಿದೆ, ಇ– ಶ್ರಮ ಯೋಜನೆ ಅಡಿಯಲ್ಲಿ ನೋಂದಣಿ ಪಡೆಯುವ ಪ್ರತಿ ಅಸಂಘಟಿತ ಕಾರ್ಮಿಕರಿಗೆ 2 ಲಕ್ಷ ರೂ ಅಪಘಾತ ವಿಮೆ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿರುತ್ತದೆ. ನಗರದ ಅಸಂಘಟಿತ ಕಾರ್ಮಿಕರು ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ಅಸಂಘಟಿತ ವಲಯ ಕಾರ್ಮಿಕರಿಗೆ ಪಿಂಚಣಿ ಯೋಜನೆ ಅನುಷ್ಠಾನಗೊಂಡಿದ್ದು, ಕಾರ್ಮಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಕಾಯ್ದೆಯಂತೆ ಸಂಬಂಧಿಸಿದ ಯೋಜನೆ, ಸೌಲಭ್ಯಗಳ ಕುರಿತು ಮಾಹಿತಿ ನೀಡಲು ಸೇವಾ ಕೇಂದ್ರಗಳಿವೆ. ಕಾರ್ಮಿಕರು ನಾನಾ ಯೋಜನೆಗಳನ್ನು ಅರಿತು ಬಳಸಿಕೊಂಡು ಉತ್ತಮ ಜೀವನ ನಡೆಸಲು ಮುಂದಾಗಬೇಕು ಎಂದರು.


ಹಿಂದೂ ಜಾಗರಣ ವೇದಿಕೆಯ ಮೈಸೂರು ಮಹಾನಗರ ಸಂಯೋಜಕ ರಂಗನಾಥ್ ಮತ್ತು ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪಿ.ಉಮೇಶ್ ಅವರು ಕೇಂದ್ರ ಸರ್ಕಾರದ ಸಾಧನೆ ಮತ್ತು ಕಟ್ಟಡ ಕಾರ್ಮಿಕರ ಸವಲತ್ತುಗಳ ಬಗ್ಗೆ ಫಲಾನುಭವಿಗಳಿಗೆ ತಿಳಿಸಿದರು.

ಶ್ರೀರಂಗಪಟ್ಟಣ ಬಳಿ ಇಂದಿನಿಂದ ಮತ್ತೊಂದು 'ಟೋಲ್ ಆರಂಭ'

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ಶುಲ್ಕ ಇಂದಿನಿಂದ ಮತ್ತಷ್ಟು ಹೆಚ್ಚಳ

ಬೆಂಗಳೂರು: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಓಡಾಡುವವರು ನಾಳೆ (ಜುಲೈ 1)ಯಿಂದ ಹೆಚ್ಚಿನ ಟೋಲ್ ದರ ಪಾವತಿಸಬೇಕಾಗುತ್ತದೆ. ಕಾರಿನಲ್ಲಿ ಸಂಚರಿಸುವವರು ಏಕಮುಖ ಸಂಚಾರಕ್ಕೆ 320 ರೂಪಾಯಿ ಹಾಗೂ ಪ್ರಯಾಣಿಕರು 24 ತಾಸಿನೊಳಗೆ ಹಿಂತಿರುಗುವುದಾದರೆ ದ್ವಿಮುಖ ಸಂಚಾರಕ್ಕೆ 485 ರೂಪಾಯಿ ಪಾವತಿಸಬೇಕಾಗುತ್ತದೆ. ಇದು ನಾಳೆ ಬೆಳಗ್ಗೆ 8 ಗಂಟೆಯಿಂದ ಜಾರಿಗೆ ಬರಲಿದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಮೈಸೂರು ಮತ್ತು ನಿಡಘಟ್ಟ ನಡುವೆ ಶ್ರೀರಂಗಪಟ್ಟಣ ಬಳಿ ಟೋಲ್ ಸಂಗ್ರಹಕ್ಕೆ ನಿರ್ಧಾರ ಮಾಡಿದ ನಂತರ ಟೋಲ್ ಶುಲ್ಕ ಹೆಚ್ಚಳವಾಗಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಯಲ್ಲಿ ಇದು ಎರಡನೇ ಟೋಲ್ ಪ್ಲಾಜಾವಾಗಿದೆ. ಈಗಿರುವ ಶೇಷಗಿರಿಹಳ್ಳಿ ಟೋಲ್ ಪ್ಲಾಜಾದಲ್ಲಿ ಏಕಮುಖ ಸಂಚಾರಕ್ಕೆ ಕಾರುಗಳಿಗೆ 165 ರೂಪಾಯಿ ಪಾವತಿಸಬೇಕಾಗುತ್ತದೆ.



ಎನ್‌ಹೆಚ್‌ಎಐ ಅಧಿಸೂಚನೆ ಪ್ರಕಾರ, ಕಾರುಗಳು, ಎಸ್‌ಯುವಿಗಳು, ವ್ಯಾನ್‌ಗಳಿಗೆ ಏಕಮುಖ ಸಂಚಾರಕ್ಕೆ ಟೋಲ್ ದರ 155 ರೂಪಾಯಿಗಳಾದರೆ 24 ಗಂಟೆಯೊಳಗೆ ದ್ವಿಮುಖ ಸಂಚಾರಕ್ಕೆ 235 ರೂಪಾಯಿ ಶುಲ್ಕ ತೆರಬೇಕಾಗುತ್ತದೆ. ಎಲ್‌ಸಿವಿ/ಎಲ್‌ಜಿವಿ/ಮಿನಿ ಬಸ್‌ಗಳಿಗೆ ಏಕಮುಖ ಪ್ರಯಾಣಕ್ಕೆ 235 ರೂಪಾಯಿ ಮತ್ತು 24 ಗಂಟೆಗಳ ಒಳಗೆ ಹಿಂದಿರುಗಲು 375 ರೂ. ಶುಲ್ಕ ವಿಧಿಸಲಾಗುತ್ತದೆ. ಎರಡು ಆಕ್ಸಲ್‌ಗಳನ್ನು ಹೊಂದಿರುವ ಟ್ರಕ್‌ಗಳು/ಬಸ್‌ಗಳು ಏಕಮುಖ ಪ್ರಯಾಣಕ್ಕೆ 525 ರೂಪಾಯಿ ಮತ್ತು 24 ಗಂಟೆಗಳ ಒಳಗೆ ಹಿಂತಿರುಗಿದರೆ 790 ಪಾವತಿಸಬೇಕಾಗುತ್ತದೆ. ಈ ಹೊಸ ಟೋಲ್ ಬೆಂಗಳೂರು–ನಿಡಘಟ್ಟ ಮಾರ್ಗದಲ್ಲಿ ಅಸ್ತಿತ್ವದಲ್ಲಿರುವ ಟೋಲ್ ಶುಲ್ಕಕ್ಕೆ ಹೆಚ್ಚುವರಿಯಾಗಿದೆ ಟೋಲ್ ಪ್ಲಾಜಾದಿಂದ 20 ಕಿಮೀ ವ್ಯಾಪ್ತಿಯೊಳಗೆ ಪ್ರಯಾಣಿಸುವ ವಾಣಿಜ್ಯೇತರ ವಾಹನಗಳಿಗೆ 330 ರೂ. ಬೆಲೆಯ ಮಾಸಿಕ ಪಾಸ್‌ನ್ನು NHAI ಒದಗಿಸುತ್ತದೆ.

ಇತ್ತೀಚೆಗಷ್ಟೇ ಹಲವು ಕನ್ನಡ ಪರ ಸಂಘಟನೆಗಳು ಟೋಲ್ ದರ ಇಳಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದವು. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಆಗಾಗ್ಗೆ ರಸ್ತೆ ಅಪಘಾತಗಳು ಮತ್ತು ಸಾವುಗಳಿಂದಾಗಿ ಚರ್ಚೆಯ ಬಿಂದುವಾಗಿರುವ ಸಮಯದಲ್ಲಿ ಟೋಲ್ ಶುಲ್ಕ ಕೂಡ ಹೆಚ್ಚಳವಾಗಿದೆ. ಕಳೆದ ಮಾರ್ಚ್ 12 ರಂದು ಪ್ರಧಾನಿ ನರೇಂದ್ರ ಮೋದಿ ಅವರು 118 ಕಿಮೀ ಉದ್ದದ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಯೋಜನೆಯನ್ನು ಉದ್ಘಾಟಿಸಿದರು. ಎಕ್ಸ್‌ಪ್ರೆಸ್‌ವೇ ಬೆಂಗಳೂರು ಮತ್ತು ಮೈಸೂರು ನಡುವಿನ ಪ್ರಯಾಣದ ಸಮಯವನ್ನು ಸುಮಾರು ಮೂರು ಗಂಟೆಗಳಿಂದ 75 ನಿಮಿಷಗಳಿಗೆ ಇಳಿಕೆ ಮಾಡುತ್ತದೆ. 117 ಕಿಲೋಮೀಟರ್ ರಸ್ತೆಯನ್ನು ಎರಡು ಹಂತದಲ್ಲಿ 8,408 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಒಟ್ಟು 117 ಕಿಮೀ ಉದ್ದದಲ್ಲಿ, 52 ಕಿಮೀ ಗ್ರೀನ್‌ಫೀಲ್ಡ್ ಐದು ಬೈಪಾಸ್‌ಗಳನ್ನು ಒಳಗೊಂಡಿದೆ.

ನಂ.ಗೂಡು ನಗರಸಭೆಯಲ್ಲಿ ಭ್ರಷ್ಟಾಚಾರ ನಿಲ್ಲದಿದ್ದರೆ ಶಿಸ್ತುಕ್ರಮ

ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಸಭೆ ನಡೆಸಿ ಎಚ್ಚರಿಕೆ ನೀಡಿದ ಶಾಸಕ ದರ್ಶನ್ ಧ್ರುವನಾರಾಯಣ್

● ಖಾಲಿ ಹುದ್ದೆಗಳ ಭರ್ತಿ ಮಾಡಿ ● ಬೀದಿ ನಾಯಿ ಹಾವಳಿ ತಪ್ಪಿಸಿ ● ಸ್ವಚ್ಛ ನಗರಿಗೆ ಗಮನ ಕೊಡಿ

ನಂಜನಗೂಡು, ಜೂ.30 – ನಂಜನಗೂಡಿನ ನಗರಸಭೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ಸಾರ್ವಜನಿಕರಿಂದ ದೂರು ಕೇಳಿ ಬರುತ್ತಿದ್ದು ಅಧಿಕಾರಿಗಳು ಜನರಿಗೆ ತೊಂದರೆಯಾಗದಂತೆ ಕೆಲಸ ನಿರ್ವಹಿಸಬೇಕು. ಇಲ್ಲದಿದ್ದರೆ ಅಂತಹವರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚರಿಸಿದ್ದಾರೆ.

ನಗರಸಭೆ ಕಚೇರಿಗೆ ಭೇಟಿ ನೀಡಿ ಅಧಿಕಾರಿಗಳ ತುರ್ತು ಸಭೆ ನಡೆಸಿ ಮಾತನಾಡಿದ ಅವರು, ಈ ಹಿಂದಿನ ಸರ್ಕಾರ ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದ ಕಾರಣ ಜನರು ಬದಲಾವಣೆ ಬಯಸಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೆ. ಕ್ಷೇತ್ರದಲ್ಲೂ ಸಹ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ದೂರುಗಳು ಕೇಳಿ ಬರುತ್ತಿದ್ದ ಕಾರಣ ಅದರ ತದ್ವಿರುದ್ಧವಾಗಿ ನನ್ನನ್ನು ಆಯ್ಕೆ ಮಾಡಿದ್ದಾರೆ. ಜನರ ಆಶೋತ್ತರಗಳಿಗೆ ತಕ್ಕಂತೆ ಕೆಲಸ ನಿರ್ವಹಿಸುವುದು ನನ್ನ ಕರ್ತವ್ಯ ಆದ ಕಾರಣ ವಿನಾಕಾರಣ ಜನರಿಗೆ ತೊಂದರೆ ಕೊಡದೆ ನಿಗದಿತ ಸಮಯಕ್ಕೆ ಕಡತ ವಿಲೇವಾರಿಗೊಳಿಸಿ, ವಿಳಂಬ ಮಾಡದೆ ಸಾರ್ವಜನಿಕರಿಗೆ ಸ್ಪಂದಿಸಿ ಕೆಲಸ ಮಾಡಬೇಕು ಎಂದರು.



ನಗರಸಭೆ ಕಚೇರಿಗೆ ಭೇಟಿ ನೀಡಿದ ಶಾಸಕ ದರ್ಶನ್ ಧ್ರುವನಾರಾಯಣ್ ಅಧಿಕಾರಿಗಳ ತುರ್ತು ಸಭೆ ನಡೆಸಿದರು.

ಒಂದು ವೇಳೆ ಭ್ರಷ್ಟಾಚಾರದ ಬಗ್ಗೆ ಮತ್ತೆ ದೂರು ಕೇಳಿ ಬಂದಲ್ಲಿ ಅಂತಹವರ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗುವುದು. ಅಲ್ಲದೆ ದಳ್ಳಾಳಿಗಳ ಹಾವಳಿ ಬಗ್ಗೆಯೂ ದೂರು ಕೇಳಬರುತ್ತಿದ್ದು, ಈ ಕೂಡಲೇ ಎಲ್ಲಕ್ಕೂ ಕಡಿವಾಣ ಬೀಳಬೇಕು. ಸಾರ್ವಜನಿಕರೊಂದಿಗೆ ನೇರವಾಗಿ ಸಂಪರ್ಕ ಇಟ್ಟುಕೊಂಡು ಅವರನ್ನು ವಿನಾಕಾರಣ ಅಲೆಸದೆ ಕೆಲಸ ಮಾಡಿಕೊಡಿ ಎಂದು ಎಚ್ಚರಿಕೆ ನೀಡಿದರು.

ಕಟ್ಟಡ ಪರವಾನಿಗೆ ಪಡೆಯಲು ಸಾರ್ವಜನಿಕರು ಮೈಸೂರಿನ ಮುಡಾ ಕಚೇರಿಗೆ ಅಲೆಯುತ್ತಿರುವ ಬಗ್ಗೆ ದೂರು ಕೇಳಿ ಬಂದಿದೆ. ಅವರನ್ನು ಮೈಸೂರಿಗೆ ಅಲೆಸುವ ಬದಲು ಮುಡಾದಿಂದ ಪ್ರತಿನಿಧಿಯನ್ನು ಕರೆಸಿ, ವಾರದಲ್ಲಿ ಮೂರು ದಿನ ನಗರಸಭೆ ಕಚೇರಿಯಲ್ಲೇ ಲಭ್ಯವಿರುವಂತೆ ಕ್ರಮವಹಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಇದೇ ಸಂದರ್ಭದಲ್ಲಿ ಆಯುಕ್ತನುಜುಂಡ ಸ್ವಾಮಿಯವರಿಗೆ ಸೂಚನೆ ನೀಡಿದರು.

ಖಾಲಿ ಹುದ್ದೆಗಳ ಭರ್ತಿಗೆ ಕ್ರಮವಹಿಸಿ: ಸುಮಾರು ಎಂಟು ವರ್ಷಗಳಿಂದ ನೀರು ಘಂಟಿಗಳು, ಪೌರಕಾರ್ಮಿಕರ 42 ಹುದ್ದೆ, ಬಿಲ್ ಕಲೆಕ್ಟರ್, ಹುದ್ದೆಗಳು ಖಾಲಿ ಬಿದ್ದಿದ್ದು ಈ ಹುದ್ದೆಗಳ ಶೀಘ್ರ ಭರ್ತಿಗೆ ಕ್ರಮವಹಿಸಬೇಕು ಎಂದ ಅವರು, ಬೀದಿ ನಾಯಿ ಹಾವಳಿಯಿಂದ ಜನರಿಗೆ ತೀವ್ರ ತೊಂದರೆಯಾಗುತ್ತಿರುವ ಬಗ್ಗೆ ಹೆಚ್ಚು ದೂರುಗಳು ಕೇಳಿ ಬಂದಿವೆ. ನಗರಸಭೆ ಆಡಳಿತ ನಾಯಿಗಳ ಸಂತಾನ ಶಕ್ತಿಹರಣ ಚಿಕಿತ್ಸೆಗೂ ಕ್ರಮ ವಹಿಸಿದೆ ಇರುವುದು ಎಷ್ಟು ಸರಿ ಎಂದು ತರಾಟೆಗೆ ತೆಗೆದುಕೊಂಡರು. ಇದಕ್ಕೆ ಪರಿಸರ ಇಲಾಖೆಯ ಅಧಿಕಾರಿ ಮೈತ್ರಾದೇವಿ ಮಾತನಾಡಿ. ಬೀದಿ ನಾಯಿಗಳ ಸಂತಾನ ಶಕ್ತಿಹರಣ ಚಿಕಿತ್ಸೆ ಮಾಡುವಂತೆ ಮಾಧ್ಯಮಗಳಲ್ಲಿ ಜಾಹೀರಾತು ನೀಡಲಾಗಿದೆ. ಅಲ್ಲದೆ ಪೀಪಲ್ಸ್ ಅನಿಮಲ್ ಸೊಸೈಟಿಗೂ ಸಹ ಮನವಿ ಮಾಡಲಾಗಿದೆ. ಆದರೂ ಸಹ ಯಾರು ಕೂಡ ಕೆಲಸಕ್ಕೆ ಮುಂದೆ ಬರುತ್ತಿಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ನಗರವನ್ನು ಅತ್ಯಂತ ಸುಂದರ ಸ್ವಚ್ಛ ನಗರವನ್ನಾಗಿ ರೂಪಿಸುವ ಸಲುವಾಗಿ ಹಸಿ ಕಸ ಮತ್ತು ಒಣ ಕಸವನ್ನು ಮನೆಯಿಂದಲೇ ಬೇರ್ಪಡಿಸುವಂತೆ ಸೂಚನೆ ನೀಡಬೇಕು. ಅಲ್ಲದೆ ಒಣ ಕಸ ಸಂಗ್ರಹಿಸಲು ಒಂದು ದಿನ ಹಸಿ ಕಸ ಸಂಗ್ರಹಿಸಲು ಒಂದೊಂದು ದಿನ ನಿಗದಿಪಡಿಸಿ ಕಸ ಸಂಗ್ರಹಣೆ ಮಾಡಿದಲ್ಲಿ ಸುಲಭವಾಗಿ ವಿಲೇವಾರಿ ಮಾಡಿ ಸ್ವಚ್ಛ ನಗರವನ್ನಾಗಿ ರೂಪಿಸಬಹುದು ಎಂದು ಸಲಹೆ ನೀಡಿದರು.

ಕುಡಿಯುವ ನೀರಿನ ಬಿಲ್ ಯಥೇಚ್ಛವಾಗಿ ಬರುತ್ತಿದೆ ಎಂದು ಸಾರ್ವಜನಿಕರು ದೂರಿದ್ದಾರೆ. ಸರ್ಕಾರದ ನಿಯಮಾವಳಿಗಳನ್ನು ಸರಿಪಡಿಸಿ ಬಡವರಿಗೆ ಅನುಕೂಲವಾಗುವಂತೆ ದರ ನಿಗದಿಗೊಳಿಸಿ ಎಂದರಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಮರ್ಪಕವಾಗಿ ಕುಡಿಯ ನೀರು ಪೂರೈಕೆ ಮಾಡಬೇಕು, ಜೊತೆಗೆ ಬೀದಿ ದೀಪಗಳ ನಿರ್ವಹಣೆ ಕೈಗೊಳ್ಳಬೇಕು. ಅಲ್ಲದೆ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಸರಿಯಾಗಿ ನಿರ್ವಹಣೆ ಗೊಳಿಸಿ ಅನುಕೂಲ ಮಾಡಿಕೊಡಬೇಕು ಎಂದು ಆಯುಕ್ತರಿಗೆ ಸೂಚನೆ ನೀಡಿದರು.

ನಗರಸಭಾ ಆಯುಕ್ತ ನಂಜುಂಡಸ್ವಾಮಿ, ಎಇಇ ಶ್ರೀನಿವಾಸ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರಸಭಾ ಸದಸ್ಯರಾದ ಗಂಗಾಧರ್, ಪ್ರದೀಪ್, ಶ್ರೀಕಂಠಸ್ವಾಮಿ, ಶ್ವೇತ, ಲಕ್ಷ್ಮಿ, ಮಹಾದೇವ ಪ್ರಸಾದ್, ಎನ್.ಎಸ್.ಯೋಗೀಶ್, ಎಸ್.ಪಿ. ಮಹೇಶ್, ನಗರಸಭೆಯ ಸಿಬ್ಬಂದಿ ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.10.15ಕ್ಕೆ, ಸಂ.4.15ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ, ಡೇರ್‌ಡೆವಿಲ್ ಮುಸ್ತಫಾ (ಕ): ಮ.1.05ಕ್ಕೆ.
ಸ್ಕ್ರೀನ್ 2	ಸ್ಪೈಡರ್ ಮ್ಯಾನ್ ಅಕ್ರಾಸ್ ದಿ ಸ್ಪೈಡರ್ ವರ್ಸ್ (ಇಂ): ಬೆ.10.25ಕ್ಕೆ, ಸಲ್ಮಾನ್ (3ಡಿ)(ತ): ಮ.1.15ಕ್ಕೆ, ಸ್ಪೈ (ತೆ): ಸಂ.4.30ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಮಾಮನ್ನನ್ (ತ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.10.05ಕ್ಕೆ, ಸರ್ಕಸ್ (ತು): ರಾ.7ಕ್ಕೆ.
ಸ್ಕ್ರೀನ್ 4	ಬೆಂಗಳೂರು ಬಾಯ್ಸ್ (ಕ): ಬೆ.10.15ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.05ಕ್ಕೆ, ಸಂ.4.05ಕ್ಕೆ, ರಾ.7.05ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, **1 ರಾಬರಿ ಕಥೆ (ಕ):** ಸಂ.4.50ಕ್ಕೆ, **ಚೌಕಾಬಾರ (ಕ):** ರಾ.7.50ಕ್ಕೆ, **ಕ್ರಿಡ್ 3 (ಇಂ):** ಬೆ.11.35ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, **ತು ಜೂಥಿ ಮೇನ್ ಮಕ್ಕರ್ (ಹಿಂ):** ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, **ತುರಮುಖಂ (ಮ):** ರಾ.10.30ಕ್ಕೆ, **ಅಜಿಲನ್ ಕಿಂಗ್ ಆಫ್ ದಿ ಓಷನ್ (ತ):** ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, **ಸ್ಕ್ರೀಮ್ 6 (ಇಂ):** ಮ.2.45ಕ್ಕೆ, ರಾ.7.45ಕ್ಕೆ, **65 (ಇಂ):** ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ದಿ ಕೇರಳ ಸ್ಟೋರಿ (ಹಿಂ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬೆಂಗಳೂರು ಬಾಯ್ಸ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸತ್ಯಂ ಪ್ರೇಮ್ ಕಿ ಕಥಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರಾಮಬಾಣಂ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಸ್ಪೈ (ತೆ)	4 ಪ್ರದರ್ಶನಗಳು
ಸಂಗಂ	
ಸತ್ಯಂ ಪ್ರೇಮ್ ಕಿ ಕಥಾ (ಹಿಂ)	4 ಪ್ರದರ್ಶನಗಳು
ಲಿಡೋ	
ಸ್ಪೈ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪೋರ್ ತಾಸಿಲ್(ತ)	4 ಪ್ರದರ್ಶನಗಳು
ಪ್ರಭಾ	
ರಾಘವೇಂದ್ರ ಸ್ಟೋರ್ಸ್ (ಕ)	4 ಪ್ರದರ್ಶನಗಳು

ಕೆಂಪೇಗೌಡರ ಜಯಂತಿ ಬಗ್ಗೆ ಚರ್ಚಿಸಲು ಸಭೆ



ತಿ.ನರಸೀಪುರ, ಜೂ.30– ಕೆಂಪೇಗೌಡರ ಜಯಂತಿ ಆಚರಣೆಯ ಪೂರ್ವಭಾವಿಯಾಗಿ ಜು.1 ರಂದು ಶನಿವಾರ 10 ಗಂಟೆಗೆ ಮೈಸೂರು ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ ಅವರ ಸಾನಿಧ್ಯದಲ್ಲಿ ತಿರುಮಕೂಡಲುನಲ್ಲಿರುವ ಆದಿಚುಂಚನಗಿರಿ ರಜೋತ್ಸವ ಭವನದಲ್ಲಿ ಸಭೆ ಕರೆಯಲಾಗಿದ್ದು ಸಮುದಾಯದ ನಿಧಿಗಳು ಹಾಗೂ ಮುಖಂಡರ ಸಭೆಯನ್ನು ಕರೆಯಲಾಗಿದೆ.

ಜಯಂತಿಯ ನಡೆಯುವ ದಿನ ಹಾಗೂ ಪೂರ್ವ ಸಿದ್ಧತೆಗಳನ್ನು ಅಂತಿಮಗೊಳಿಸಲಾಗುವುದು. ಸಮುದಾಯದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕು ಎಂದು ಮನವಿ ಮಾಡಿದರು. ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಪಿ. ಸ್ವಾಮಿನಾಥಗೌಡ ಮನವಿ ಮಾಡಿದ್ದಾರೆ.

ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಆದ್ಯ ಕರ್ತವ್ಯ

ಬೈಲುಕುಪ್ಪೆ ಟಿಬೇಟಿಯನ್ ಕ್ಯಾಂಪ್‌ನಲ್ಲಿ 17ನೇ ಧರ್ಮಗುರು ಗ್ಯಾಲ್ ವಂಗ್ ಕರ್ಮಪ್ಪ ಅವರ 39ನೇ ಜಯಂತಿ ಆಚರಣೆ

ಬೆಟ್ಟದಪುರ, ಜೂ.30– ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಮೈಸೂರು ರಾಜ ವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದರು.

ತಾಲೂಕಿನ ಬೈಲುಕುಪ್ಪೆ ವ್ಯಾಪ್ತಿಯ ಟಿಬೇಟಿಯನ್ ಕಗ್ಯು ನಳಂದ ಮೋನಸ್ಟ್ರಿ ವತಿಯಿಂದ ಅಂತಾರಾಷ್ಟ್ರೀಯ ವಿಶ್ವ ಪರಿಸರ ದಿನದ ಅಂಗವಾಗಿ ಪರಿಸರ ಸಂರಕ್ಷಣಾ ಜಾಗೃತಿ ಕಾರ್ಯಕ್ರಮ ಮತ್ತು 17ನೇ ಧರ್ಮಗುರು ಗ್ಯಾಲ್ ವಂಗ್ ಕರ್ಮಪ್ಪ ಅವರ 39ನೇ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು, ಪ್ರತಿಯೊಬ್ಬರೂ ಬಾಲ್ಯದಿಂದಲೇ ಪರಿಸರದ ಬಗ್ಗೆ ಹೆಚ್ಚಿನ ಅರಿವನ್ನು ಮೈಗೂಡಿಸಿಕೊಳ್ಳಬೇಕು. ಪರಿಸರ ಮಾಲಿನ್ಯ ತಡೆಗಟ್ಟಲು ಶ್ರಮಿಸಬೇಕು. ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಇದರಿಂದಾಗುತ್ತಿರುವ ಅನಾಹುತವನ್ನು ತಪ್ಪಿಸ ಬೇಕಾಗಿದೆ. ಈ ಕಾರಣಕ್ಕಾಗಿ ಅನೇಕ ಸಂಘ ಸಂಸ್ಥೆಗಳು ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ಈ ದೃಷ್ಟಿಕೋನದಲ್ಲಿ ಟಿಬೆಟಿಯನ್ ನಳಂದ ಗುರುಕುಲ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ವನ್ನು ಮಾಡುತ್ತಿರುವುದು ಶ್ಲಾಘನೀಯವಾದದ್ದು. ಈ ವಿಷಯವಾಗಿ ಸದಾ ನಾನು ನಿಮ್ಮೊಂದಿಗೆ ಇರುತ್ತೇನೆ ಎಂದರು.

ಮಾಜಿ ರಾಜ್ಯಸಭಾ ಸದಸ್ಯ ಕುಪೇಂದ್ರ ರೆಡ್ಡಿ ಮಾತನಾಡಿ, ಪರಿಸರದ ಉಳಿವಿಗಾಗಿ ಪ್ರತಿಯೊಬ್ಬರು ತಮ್ಮನ್ನು ತೊಡಗಿಸಿಕೊಂಡು ಪರಿಸರ ನಾಶವನ್ನು ತಡೆಯಬೇಕಾಗಿದೆ ಎಂದರಲ್ಲದೆ ನಾನು ಹಲವು ವರ್ಷಗಳಿಂದ ಈ ಟಿಬೆಟಿಯನ್ ಕಗ್ಯು ನಳಂದದಲ್ಲಿ ಹಮ್ಮಿಕೊಳ್ಳುವ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ಬರುತ್ತಿದ್ದು ಪ್ರತಿ ವರ್ಷ ವಿಭಿನ್ನವಾಗಿ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದಾರೆ ಮತ್ತು ಪರಿಸರವನ್ನು ಕೂಡ ಅಷ್ಟೇ ಸಂರಕ್ಷಣೆ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ರಾಜ ವಂಶಸ್ಥ ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್ ರವರು ನಳಂದ ಆವರಣದಲ್ಲಿ ಸಸಿ



ನೆಟ್ಟು ಗಿಡಕ್ಕೆ ನೀರೆರೆದರು ಮತ್ತು ಟಿಬೆಟಿಯನ್ಸ್ ಮಹಿಳೆ ಮತ್ತು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ಸಂದರ್ಭದಲ್ಲಿ ಕಗ್ಯು ನಳಂದ ವ್ಯವಸ್ಥಾಪಕ ಕರ್ಮ ರೇಂಪೋಜಿ, ಡೌಲ್ ಮಾ, ಪರಿಸರವಾದಿ ಯು.ಎನ್.ರವಿ ಕುಮಾರ್, ಕೇರಳದ ಅರಣ್ಯ ಸಂಶೋಧನೆ ಸಂಸ್ಥೆಯ ಉಪ ನಿರ್ದೇಶಕ ಡಾ. ಚಂದ್ರಶೇಖರ್, ಗ್ರಾಪಂ ಅಧ್ಯಕ್ಷೆ ಸುಮಾ ಪ್ರಭಾಕರ್, ಸದಸ್ಯ ರಘು, ನಿಸ್ಸಾರ್ ಅಹಮ್ಮದ್, ಕೊಪ್ಪ ವಿಎಸ್‌ಎಸ್‌ಎನ್ ನಿರ್ದೇಶಕ ಸುಬ್ರಮಣ್ಯ, ಪಿಡಿಒ ಬೋರೇಗೌಡ, ಭಾರತ್ ಮಾತಾ ವಿದ್ಯಾ ಸಂಸ್ಥೆಯ ಫಾದರ್ ಸಿಬಿಚನ್ ಪೌಲ್, ದರ್ಜಿ, ವಕೀಲ ಬಿ.ವಿ.ಜವರೇಗೌಡ, ಅಂಬಲಾರೆ ಬಸವೇಗೌಡ, ಭುಜಂಗ ಸೇರಿದಂತೆ ಮತಿತ್ತರರು ಹಾಜರಿದ್ದರು.

ಬಿಸಿಎ ನೂತನ ಕೋರ್ಸಿಗೆ ಇನ್ನೂ ಸಿಗದ ಅನುಮತಿ

ತ್ರಿಶಂಕು ಸ್ಥಿತಿಯಲ್ಲಿ ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು



ತಿ.ನರಸೀಪುರ, ಜೂ.30– ಪಟ್ಟಣದ ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹೊಸದಾಗಿ ಪ್ರಾರಂಭಿಸಲುದ್ದೇಶಿಸಿರುವ ಬಿಸಿಎ(ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಶನ್) ಕೋರ್ಸಿಗೆ 100ಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದು, ಕೋರ್ಸ್ ಪ್ರಾರಂಭಕ್ಕೆ ಇನ್ನೂ ಅನುಮತಿ ದೊರಕಿಲ್ಲ.

ಕಳೆದ ನವೆಂಬರ್‌ನಲ್ಲಿ ನ್ಯಾಕ್ ಕಮಿಟಿ ಕಾಲೇಜಿಗೆ ಭೇಟಿ ನೀಡಿದ್ದ ವೇಳೆ ಕಾಲೇಜಿನಲ್ಲಿ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಸಲಹೆ ನೀಡಿತ್ತು. ಅದರಂತೆ ಕಾಲೇಜಿನಿಂದ ಕಳೆದ ಏಪ್ರಿಲ್‌ನಲ್ಲಿ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಕೆಯಾಗಿತ್ತು. ಅನುಮತಿ ಸಿಗುವ ಭರವಸೆಯೊಂದಿಗೆ ವಿದ್ಯಾರ್ಥಿಗಳಿಂದ ಬಿಸಿಎ ಕೋರ್ಸಿಗೆ ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಆದರೆ ಜೂನ್ ಅಂತ್ಯವಾದರೂ ಇನ್ನೂ ಕೋರ್ಸ್‌ಗೆ ಅನುಮತಿ ದೊರಕಿಲ್ಲ ಎಂದು ತಿಳಿದು ಬಂದಿದೆ.

ಮತ್ತಷ್ಟು ವಿಳಂಬವಾದಲ್ಲಿ ಅಥವಾ ಪ್ರಾರಂಭಿಸದಿದ್ದಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಬಹುದು. ಒಂದೇ ಕಡೆ ಅರ್ಜಿ ಸಲ್ಲಿಸಿ ಕಾಯುವಂತಹ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಶೀಘ್ರ ಅನುಮತಿ ದೊರಕಿಸಬೇಕು ಎಂಬ ಒತ್ತಾಯ ಕೇಳಿ ಬಂದಿದೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರತಿನಿಧಿಸುವ ವರುಣ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕಾಲೇಜನ್ನು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೇಳೆ ಸಿದ್ದರಾಮಯ್ಯನವರು ಮಹಿಳಾ ಕಾಲೇಜು ಮಂಜೂರು ಮಾಡಿ ನಿರ್ಮಿಸಲು ಹೆಚ್ಚಿನ ಅನುದಾನ ನೀಡಿದ್ದರು.

ಕಾಲೇಜಿಗೆ ನ್ಯಾಕ್‌ನಿಂದ ಬಿ.ಪ್ಲಸ್ ಮಾನ್ಯತೆ ದೊರಕಿದೆ. ನ್ಯಾಕ್ ಸಮಿತಿ ಹೊಸ ಕೋರ್ಸ್‌ಗಳನ್ನು ಪ್ರಸಕ್ತ ಸಾಲಿನಿಂದ ತೆರಯಲು ಶಿಫಾರಸು ಮಾಡಿತ್ತು ಅದರಂತೆ ಕಾಲೇಜು ಶಿಕ್ಷಣ ಇಲಾಖೆ ಕೂಡ ಕೋರ್ಸ್ ಪ್ರಾರಂಭಿಸುವುದಾದರೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿತ್ತು. ಅದರಂತೆ ನಾವು ಬಿಸಿಎ ಕೋರ್ಸ್ ಪ್ರಾರಂಭಿಸಲು ಅನುಮತಿ ಕೋರಿದ್ದೆವು. ಆದರೆ ಇನ್ನೂ ಅನುಮತಿ ಬಂದಿಲ್ಲ ಬಿಸಿಎ ಕೋರ್ಸ್ ಬಯಸಿ 110 ಅರ್ಜಿಗಳು ಬಂದಿವೆ. ವಿಳಂಬವಾದಲ್ಲಿ ಪ್ರಸಕ್ತ ಸಾಲಿಗೆ ಪ್ರಾರಂಭಿಸಲು ಕಷ್ಟವಾಗಬಹುದು. ಈಗಾಗಲೇ ಈ ಬಗ್ಗೆ ಸಂಬಂಧಿಸಿದವರಿಗೆ ಮನವಿ ಮಾಡಿ ಶೀಘ್ರ ಅನುಮತಿಗಾಗಿ ಕೋರಿದ್ದೇವೆ ಎಂದು ಪ್ರಾಂಶುಪಾಲ ಡಾ.ವಿ.ವಿಜಗದೀಶ್ ತಿಳಿಸಿದರು.

ಓಮಿನಿ ಉರುಳಿ ಆರು ಮಂದಿಗೆ ಗಾಯ



ಹೆಚ್.ಡಿ.ಕೋಟೆ, ಜೂ.30– ತಾಲೂಕಿನ ಶಿರಮಹಳ್ಳಿ ಗ್ರಾಮದ ಬಳಿ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಮಾರುತಿ ಓಮಿನಿ ಉರುಳಿಬಿದ್ದ ಪರಿಣಾಮ ಮಗು ಸೇರಿ ಆರು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ. ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿಗಳಾದ ಸುನಿಲ್ ಆರಾಧ್ಯ, ವಿರೂಪಾಕ್ಷ ಆರಾಧ್ಯ, ಸುನಂದಾ, ಪೂಜಾ, ಶಶಿಕಲಾ ಮತ್ತು ಮಗು ಗಾಯಗೊಂಡವರು.

ಮೈಸೂರಿನಿಂದ ಕಾರಿನಲ್ಲಿ ಗೆಂಡತ್ತೂರು ಗ್ರಾಮದಲ್ಲಿರುವ ದೇವಾಲಯಕ್ಕೆ ಪೂಜೆಗೆ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಗಾಯಾಳುಗಳನ್ನು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉರುಳಿದ ಓಮಿನಿಯನ್ನು ಜೆಸಿಬಿ ಸಹಾಯದಿಂದ ಮೇಲಕ್ಕೆ ಎತ್ತಲಾಯಿತು ಎನ್ನಲಾಗಿದೆ. ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯಶೋಧರಪುರದಲ್ಲಿ ಎನ್‌ಎಸ್‌ಎಸ್ ಶಿಬಿರ

ಹುಣಸೂರು, ಜೂ.30– ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾ ವಿಕಾಸ ಕಾನೂನು ಅಧ್ಯಯನ ಸಂಸ್ಥೆ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಆಶ್ರಯದಲ್ಲಿ ತಾಲೂಕಿನ ಯಶೋಧರಪುರ ಗ್ರಾಮದಲ್ಲಿ ಜು.1ರಂದು ರಾಷ್ಟ್ರೀಯ ಸೇವಾ ಯೋಜನೆಯ ಏಳು ದಿನಗಳ ಶಿಬಿರವನ್ನು, ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಕೆ.ಎಸ್.ಮುದಗಲ್ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಯಶೋಧರಮ್ಮ ಅವರ ಭಾವಚಿತ್ರವನ್ನು ಜಿಲ್ಲಾ ಪ್ರಧಾನ ನ್ಯಾಯಾಧೀಶರಾದ ಸಂಗ್ರೇಶಿ ಅನಾವರಣ ಮಾಡಲಿದ್ದಾರೆ. ಗ್ರಾಮದ ಮುಖ್ಯದ್ವಾರದ ಶಂಕುಸ್ಥಾಪನೆಯನ್ನು ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ ನೆರವೇರಿಸಲಿದ್ದಾರೆ.

ಇಂದು ಪತ್ರಿಕಾ ದಿನಾಚರಣೆ ಆಚರಣೆ

ಹುಣಸೂರು, ಜೂ.30– ಹುಣಸೂರು ತಾಲೂಕು ಪತ್ರಕರ್ತರ ಸಂಘವು ಜು.1 ರಂದು ಮಧ್ಯಾಹ್ನ 2.30 ಗಂಟೆಗೆ ಹುಣಸೂರು ನಗರದ ರೋಟರಿ ಭವನದಲ್ಲಿ ಪತ್ರಿಕಾ ದಿನಾಚರಣೆಯನ್ನು ಹಮ್ಮಿಕೊಂಡಿದೆ.

ಕಾರ್ಯಕ್ರಮವನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಲಿದ್ದು, ಸಂಸದ ಪ್ರತಾಪ್ ಸಿಂಹ ಹಿರಿಯ ಪತ್ರಕರ್ತರನ್ನು ಸನ್ಮಾನಿಸಲಿದ್ದಾರೆ. ಹಿರಿಯ ಪತ್ರಕರ್ತ ಎಚ್.ಆರ್. ಶ್ರೀನಿವಾಸ್ ಗ್ರಾಮೀಣ ಅಭಿವೃದ್ಧಿ ಪ್ರಶಸ್ತಿಯನ್ನು ಮಾಜಿ ಸಚಿವರು ಹಾಗೂ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಪ್ರದಾನ ಮಾಡಲಿದ್ದು, ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಪತ್ರಕರ್ತರು ಹಾಗೂ ಕುಟುಂಬಸ್ಥರಿಗೆ ಮತ್ತು ಪತ್ರಿಕೆ ಹಂಚುವ ಹುಡುಗರುಗಳಿಗೆ ಸಂಘವು ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ವಿಜೇತ ಕ್ರೀಡಾಪಟುಗಳಿಗೆ ಬಹುಮಾನ ವಿತರಣೆ ಮಾಡಲಿದ್ದಾರೆ.

ಸಾಲ ಮಾಡದೆ ಎಲ್ಲರ ವಿಶ್ವಾಸ ಗಳಿಸಿ ಗೆಲ್ಲಿ

ಹುಣಸೂರು, ಜೂ.30– ತಾಲೂಕಿನಲ್ಲಿ ಈಗಾಗಲೇ ಗ್ರಾಮ ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷರ ಮೀಸಲಾತಿ ಪ್ರಕಟಗೊಂಡಿದ್ದು, ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಚುನಾವಣೆ ಇನ್ನೂ ಒಂದು ತಿಂಗಳು ಸಮಯವಾಗಬಹುದು. ಆದ್ದರಿಂದ ಆಕಾಂಕ್ಷಿಗಳು ಅಧಿಕಾರದ ಜಿದ್ದಿಗೆ ಬಿದ್ದು ಸಾಲ ಸೋಲ ಮಾಡಿ ಸಾಲದ ಸುಳಿಯಲ್ಲಿ ಸಿಲುಕದೆ ಎಲ್ಲಾ ಸದಸ್ಯರ ಪ್ರೀತಿ ವಿಶ್ವಾಸ ಗಳಿಸಿ ಆದಷ್ಟು ಕಡಿಮೆ ಖರ್ಚಿನಲ್ಲಿ ಅವಿರೋಧ ಆಯ್ಕೆಗೆ ಮುಂದಾಗಬೇಕೆಂದು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮನವಿ ಮಾಡಿದ್ದಾರೆ.



ಆಷಾಢ ಮಾಸದ ಅಂಗವಾಗಿ ಮೂಗೂರಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ದೇವಾಲಯದಲ್ಲಿ ನಡೆದ ವಿಶೇಷ ಪೂಜೆಯಲ್ಲಿ ಅಲಂಕೃತಗೊಂಡಿದ್ದ ದೇವಿಯ ದರ್ಶನ ಪಡೆಯಲು ಸಾಲು ಸಾಲಾಗಿ ನಿಂತ ಭಕ್ತರ ಸಮೂಹ.



ತಿ.ನರಸೀಪುರ ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ 514ನೇ ಜಯಂತ್ಯೋತ್ಸವನ್ನು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕಸಾಪ ಮಾಜಿ ಅಧ್ಯಕ್ಷ ಷಣ್ಮುಖಸ್ವಾಮಿ, ನಿಕಟಪೂರ್ವ ಅಧ್ಯಕ್ಷ ಎಂ. ರಾಜು, ವಿಚಾರವಾದಿ ಕರೋಹಟ್ಟಿ ಪ್ರಭುಸ್ವಾಮಿ, ಶಸಾಪ ಅಧ್ಯಕ್ಷ ಹೊಸೂರು ಹುಂಡಿ ತೋಂಟೇಶ್, ಶಸಾಪ ಕಾರ್ಯದರ್ಶಿ ಮೂಗೂರು ಕುಮಾರಸ್ವಾಮಿ, ಕರೋಹಟ್ಟಿ ಗ್ರಾಪಂ ಮಾಜಿ ಉಪಾಧ್ಯಕ್ಷ ಧರ್ಮಯ್ಯನಹುಂಡಿ ಪ್ರಭು, ಸೇವಾಶ್ರಯ ಪೌಂಡೇಷನ್ ಸಂಸ್ಥಾಪಕ ಮಣಿಕಂಠ ರಾಜ್‌ಗೌಡ, ಕಂಟ್ರಾಕ್ಟರ್ ಸಿದ್ದರಾಜು, ವಾಟಾಳು ಕುಮಾರ್, ದೊಡ್ಡನಹುಂಡಿ ಕುಮಾರ್, ಲಿಂಗರಾಜು, ಶಸಾಪ ಸಂಘಟನಾ ಕಾರ್ಯದರ್ಶಿ ತುರಗನೂರು ಮಲ್ಲೇಶ್, ಶಸಾಪ ಉಪಾಧ್ಯಕ್ಷ ಕಟ್ಟೆಪುರ ಓಂಕಾರಮೂರ್ತಿ, ವಿಡಿಯೋ ಶಿವಣ್ಣ, ಸಿ.ಬಿ.ಹುಂಡಿ ರವಿ ಮೊದಲಾದವರು ಉಪಸ್ಥಿತರಿದ್ದರು.

ಗ್ರಾಪಂ ಸದಸ್ಯನ ಸದಸ್ಯತ್ವ ರದ್ದು, ಸೋತಿದ್ದವನಿಗೆ ಒಲಿಯಿತು ಸದಸ್ಯತ್ವ

ನ್ಯಾಯಾಲಯದ ಆದೇಶದ ಮೇರೆಗೆ ಪ್ರಮಾಣಪತ್ರ ವಿತರಿಸಿದ ಚುನಾವಣಾಧಿಕಾರಿ

● ನಿಮಯ ಉಲ್ಲಂಘಿಸಿ ಸದಸ್ಯತ್ವ ಕಳೆದುಕೊಂಡರು

● ಕೋರ್ಟ್ ಮೊರೆ ಹೋಗಿ ಗೆದ್ದು ಬೀಗಿದರು



ಹೆಚ್.ಡಿ. ಕೋಟೆ ತಾಲೂಕು ಬೀಚನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ನೇರಳೆ ಗ್ರಾಮದ ಪ್ರೇಮ್ ಕುಮಾರ್ ಅವರಿಗೆ ಚುನಾವಣಾಧಿಕಾರಿ ಹಣಮಂತ ಟಿಂಗಾಣಿ ಪ್ರಮಾಣ ಪತ್ರ ನೀಡಿದರು. ಉಪ ತಹಶಿಲ್ದಾರ್ ಕುಮಾರ್ ಇದ್ದರು.

ಹೆಚ್.ಡಿ.ಕೋಟೆ, ಜೂ.30 – ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಮೇಲೆ ಗ್ರಾಮ ಪಂಚಾಯತಿ ಸದಸ್ಯನ ಸದಸ್ಯತ್ವವನ್ನು ರದ್ದುಗೊಳಿಸಿ ಸಮೀಪದ ಪ್ರತಿಸ್ಪರ್ಧಿ ಪರಾಜಿತ ಅಭ್ಯರ್ಥಿಯನ್ನು ಗ್ರಾಪಂ ಸದಸ್ಯನೆಂದು ನ್ಯಾಯಾಲಯ ಘೋಷಿಸಿರುವ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿ ನೂತನ ಸದಸ್ಯರಿಗೆ ಪ್ರಮಾಣ ಪತ್ರ ವಿತರಿಸಿದ್ದಾರೆ.

ಬೀಚನಹಳ್ಳಿ ಗ್ರಾಪಂ ಸದಸ್ಯ ಆರ್.ವಿ. ಉಮೇಶ್ ಸದಸ್ಯತ್ವವನ್ನು ಕಳೆದುಕೊಂಡವರು. ಪರಾಜಿತ ಅಭ್ಯರ್ಥಿ ಆರ್.ವಿ. ಪ್ರೇಮ್ ಕುಮಾರ್ ಅವರು ನೂತನ ಗ್ರಾಪಂ ಸದಸ್ಯರೆಂದು ಆಯ್ಕೆಯಾದವರಾಗಿದ್ದಾರೆ.

ಪಟ್ಟಣದ ತಾಲೂಕು ಆಡಳಿತ ಸೌಧದ ಚುನಾವಣಾ ಶಾಖೆಯಲ್ಲಿ ಬೀಚನಹಳ್ಳಿ ಗ್ರಾಮ ಪಂಚಾಯತಿಗೆ ಚುನಾವಣಾಧಿಕಾರಿಯಾಗಿದ್ದ ಹಣಮಂತ ಟಿಂಗಾಣಿ ಅವರು, ನೇರಳೆ ಗ್ರಾಮದ ಆರ್.ವಿ.ಪ್ರೇಮ್‌ಕುಮಾರ್ ಅವರನ್ನು ನೂತನ ಗ್ರಾಮ ಪಂಚಾಯತಿ ಸದಸ್ಯರಾಗಿ ನೇಮಿಸಿ ಪ್ರಮಾಣ ಪತ್ರ ವಿತರಿಸಿದರು.

2020–21ನೇ ಸಾಲಿನಲ್ಲಿ ನಡೆದ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಬೀಚನಹಳ್ಳಿ ಗ್ರಾಮ ಪಂಚಾಯತಿಗೆ ನೇರಳೆ ಗ್ರಾಮದ ಪರಿಶಿಷ್ಟ ವರ್ಗದ ಕ್ಷೇತ್ರದಿಂದ ಆರ್.ವಿ.ಉಮೇಶ್ ಮತ್ತು ಪ್ರೇಮ್ ಕುಮಾರ್ ಸ್ಪರ್ಧಿಸಿದ್ದರು. ಆ ಸಂದರ್ಭದಲ್ಲಿ ಅತ್ಯಧಿಕ ಮತಗಳನ್ನು ಪಡೆದ ಆರ್.ವಿ.ಉಮೇಶ್ ಜಯಶಾಲಿಯಾಗಿದ್ದರು.

ಉಮೇಶ್ ವೃತ್ತಿಯಲ್ಲಿ ಗುತ್ತಿಗೆದಾರರಾಗಿದ್ದು, ಚುನಾವಣಾ ಸಂದರ್ಭದಲ್ಲಿ ಗುತ್ತಿಗೆದಾರರ ಪರವಾನಗಿಯನ್ನು ಸರ್ಕಾರದ ವಶಕ್ಕೆ ನೀಡದೆ ನಿಮಯವನ್ನು ಉಲ್ಲಂಘಿಸಿದ್ದಾರೆ. ಜೊತೆಗೆ ತಮ್ಮ ಅಧಿಕಾರ ಅವಧಿಯಲ್ಲಿ ಉಮೇಶ್ ಗ್ರಾಮ ಪಂಚಾಯತಿ ಕಾಮಗಾರಿ ಗುತ್ತಿಗೆ ಪಡೆದು ಬಿಲ್ ಪಾವತಿ ಮಾಡಿಕೊಂಡಿದ್ದರು. ಗ್ರಾಮ ಪಂಚಾಯತಿ ಸದಸ್ಯರಾಗಿದ್ದು ಕೊಂಡು ಕಾಮಗಾರಿ ಮಾಡಿ ಬಿಲ್ ಪಾವತಿ ಮಾಡಿಸಿಕೊಳ್ಳುವ ಮೂಲಕ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರ್.ವಿ.ಪ್ರೇಮ್‌ಕುಮಾರ್ ಎಚ್.ಡಿ.ಕೋಟೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯ ಗ್ರಾಮ ಪಂಚಾಯತಿ ಸದಸ್ಯನಾಗಿದ್ದ ಆರ್.ವಿ.ಉಮೇಶ್ ಅವರು ನಿಯಮಗಳನ್ನು ಉಲ್ಲಂಘಿಸಿರುವುದು ಸಾಬೀತಾಗಿರುವುದರಿಂದ ಸದಸ್ಯತ್ವವನ್ನು ರದ್ದು ಮಾಡಿ, ನಂತರದ ಎರಡನೇ ಸ್ಥಾನದಲ್ಲಿದ್ದ ಅಭ್ಯರ್ಥಿಯನ್ನು ಗ್ರಾಮ ಪಂಚಾಯತಿ ಸದಸ್ಯರಾಗಿ ನೇಮಕ ಮಾಡಿಕೊಳ್ಳಲು 2023ರ ಮೇ 30 ರಂದು ಆದೇಶಿಸಿತು.

ನ್ಯಾಯಾಲಯದ ಆದೇಶದಂತೆ ಆರ್.ವಿ. ಉಮೇಶ ಸದಸ್ಯತ್ವನ್ನು ರದ್ದು ಮಾಡಿ, ಎರಡನೇ ಅತಿ ಹೆಚ್ಚು ಮತ ಪಡೆದ ಎಸ್.ಟಿ.ಪುರುಷ ಅಭ್ಯರ್ಥಿಯಾದ ಆರ್.ವಿ. ಪ್ರೇಮಕುಮಾರ ಇವರನ್ನು ಬೀಚನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾಗಿ ಘೋಷಿಸಲಾಯಿತು. ಇದೇ ಸಂದರ್ಭದಲ್ಲಿ ಚುನಾವಣಾ ಶಾಖೆ ಉಪ ತಹಸೀಲ್ದಾರ್ ಕುಮಾರ್ ಇದ್ದರು.

ನಿಧನ

ಪ್ರಕಾಶ್



ಹುಣಸೂರು, ಜೂ.30– ತಾಲೂಕಿನ ಹಳ್ಳದಕೊಪ್ಪಲು ಗ್ರಾಮದ ದೊಡ್ಡೇಗೌಡರ ಮಗ ಕೇಬಲ್ ಅಪರೇಟರ್ ಪ್ರಕಾಶ್(57) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಣ್ಣಮ್ಮ



ಹುಣಸೂರು, ಜೂ.30– ತಾಲೂಕಿನ ಉಂಡವಾಡಿ ಗ್ರಾಮದ ಲೇ.ಕೃಷ್ಣನಾಯ್ಕ ಅವರ ಪತ್ನಿ, ಸಣ್ಣಮ್ಮ(93) ಅವರು ಶುಕ್ರವಾರ ಬೆಳಗ್ಗೆ ನಿಧನರಾದರು.

ಮೃತರು ಓರ್ವ ಪುತ್ರ, ಸೊಸೆ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ನಾಳೆ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವ

ರಾಷ್ಟ್ರಪತಿ ದ್ರೌಪದಿ ಮುರ್ಮು ಸೇರಿ ಮೂವರು ಗಣ್ಯರಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್ ಪದವಿ





ದ್ರೌಪದಿ ಮುರ್ಮು



ಎನ್.ರಾಮಚಂದ್ರಯ್ಯ



ಎಸ್.ಎನ್.ವಿ.ಎಲ್ ನರಸಿಂಹರಾಜು

ಮೈಸೂರು, ಜೂ.30(ಆರ್‌ಕೆ)–ಭಾರತದ ಘನತೆವೆತ್ತ ರಾಷ್ಟ್ರಪತಿ ಶ್ರೀಮತಿ ದ್ರೌಪದಿ ಮುರ್ಮು, ಬೆಂಗಳೂರಿನ ಶ್ರೀ ಲಕ್ಷ್ಮಿ ಸಮೂಹ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಎನ್.ರಾಮಚಂದ್ರಯ್ಯ ಹಾಗೂ ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಎಸ್.ಎನ್.ವೆಂಕಟಲಕ್ಷ್ಮಿ ನರಸಿಂರಾಜು ಅವರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ, ಅಭಿನಂದಿಸುತ್ತಿದೆ.

ಮೈಸೂರಿನ ಮುಕ್ತ ಗಂಗೋತ್ರಿಯ ಘಟಿಕೋತ್ಸವ ಭವನದಲ್ಲಿ ಜುಲೈ 2ರ ಭಾನುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಮುಕ್ತ ವಿಶ್ವವಿದ್ಯಾನಿಲಯದ 18ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ರ ಗೆಹ್ಲೋಟ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಅವರು ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಅಭಿನಂದಿಸುವರು.

ದ್ರೌಪದಿ ಮುರ್ಮು: 2022ರ ಜುಲೈ 25ರಂದು ಭಾರತದ 15ನೇ ರಾಷ್ಟ್ರಪತಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ದ್ರೌಪದಿ ಮುರ್ಮು ಅವರು, ಸಮಾಜದ ಕಟ್ಟಕಡೆಯ ಸಮುದಾಯದ ಸಬಲೀಕರಣಗೊಳಿಸಲು ಹಾಗೂ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಲು ಶ್ರಮಿಸಿದ್ದಾರೆ.

ಒಡಿಶಾದ ಮಯೂರ ಭಂಜ್‌ನ ಉಪರಬೇಡಾ ಗ್ರಾಮದ ಸಂತಾಲಿ ಬುಡಕಟ್ಟು ಕುಟುಂಬದಲ್ಲಿ 1958ರ ಜೂನ್ 20ರಂದು ಜನಿಸಿದ ಮುರ್ಮು ಅವರು ಭುವನೇಶ್ವರದ ರಮಾದೇವಿ ಮಹಿಳಾ ಕಾಲೇಜಿನಲ್ಲಿ ಕಲಾ ಪದವಿ ಗಳಿಸಿ, ಅವರ ಗ್ರಾಮದಲ್ಲಿ ಪದವಿ ಪಡೆದ ಮೊದಲ ಮಹಿಳೆ ಎನಿಸಿದರು. 1979 ರಿಂದ 83ರವರೆಗೆ ಒಡಿಶಾ ಸರ್ಕಾರದ ನೀರಾವರಿ ಮತ್ತು ಇಂಧನ ಇಲಾಖೆಯಲ್ಲಿ ಜೂನಿಯರ್ ಅಸಿಸ್ಟೆಂಟ್ ಆಗಿ, 1994 ರಿಂದ 97ರವರೆಗೆ ರಾಯ್ ರಂಗಪುರನ್ ಶ್ರೀ ಆರೋಬಿಂದೋ ಇಂಟಿಗ್ರಲ್ ಎಜುಕೇಷನ್ ಸೆಂಟರ್‌ನಲ್ಲಿ ಗೌರವ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು.

ನಂತರ 2000ದಲ್ಲಿ ರಾಯ್ ರಂಗಪುರ್ ವಿಧಾನಸಭಾ ಕ್ಷೇತ್ರದ ಸದಸ್ಯರಾಗಿ ಆಯ್ಕೆಯಾದ ದ್ರೌಪದಿ ಮುರ್ಮು ಅವರು, ನಂತರ ವಾಣಿಜ್ಯ ಮತ್ತು ಸಾರಿಗೆ, ಮೀನುಗಾರಿಕೆ ಮತ್ತು ಪಶು ಸಂಪನ್ಮೂಲ ಸಚಿವರಾಗಿ 2004ರವರೆಗೆ ಸೇವೆ ಸಲ್ಲಿಸಿದರಲ್ಲದೇ, ಒಡಿಶಾ ವಿಧಾನಸಭೆಯ ವಿವಿಧ ಸಮಿತಿಗಳ ಸದಸ್ಯರಾಗಿಯೂ ನೇಮಕಗೊಂಡಿದ್ದರು.

ವಿಧಾನಸಭಾ ಸದಸ್ಯರಾಗಿ ಸಲ್ಲಿಸಿದ ಸೇವೆಗೆ 2007ರಲ್ಲಿ ಮುರ್ಮು ಅವರಿಗೆ ಪಂಡಿತ್ ನೀಲ್‌ಕಾಂತ್ ದಾಸ್ ಉತ್ತಮ ಲೆಜಿಸ್ಲೇಟರ್ ಪ್ರಶಸ್ತಿ ನೀಡಲಾಗಿತ್ತು. 2015ರ ಮೇ 18ರಂದು ಜಾರ್ಖಂಡ್ ರಾಜ್ಯಪಾಲರಾಗಿ ನೇಮಕಗೊಂಡಿದ್ದ ಅವರು ಬುಡಕಟ್ಟು ರಾಜ್ಯದ ಪ್ರಥಮ ಮಹಿಳಾ ರಾಜ್ಯಪಾಲರೆಂಬ ಖ್ಯಾತಿಗೂ ಪಾತ್ರರಾಗಿದ್ದರು.

ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಪರೀಕ್ಷಾ ಸುಧಾರಣೆಗಳು ಹಾಗೂ ನೇಮಕಾತಿ ಪ್ರಕ್ರಿಯೆಯಲ್ಲಿ ಬದಲಾವಣೆ ತಂದಿದ್ದರು. ರಾಜಕೀಯ ಪಕ್ಷಗಳ ಮುಖಂಡರ ಪ್ರಶಂಸೆ ಗಳಿಸಿದ್ದ ಮುರ್ಮು ಅವರು, ಒಡಿಶಾದ ಹಲವು ಟ್ರೈಬಲ್ ಸೊಷಿಯೋ ಎಜುಕೇಷನಲ್ ಸಂಸ್ಥೆಯೊಂದಿಗೆ ನಿರಂತರ ಸಂಪರ್ಕ ವಿರಿಸಿಕೊಂಡು ಸಮುದಾಯದ ಏಳ್ಗೆಗೆ ಶ್ರಮಿಸಿದ್ದರು.

ಎನ್.ರಾಮಚಂದ್ರಯ್ಯ: ಬೆಂಗಳೂರಿನ ರೈತಾಪಿ ಕುಟುಂಬದಲ್ಲಿ ಜನಿಸಿದ ಎನ್.ರಾಮಚಂದ್ರಯ್ಯ, ತಮ್ಮ ಮಾನವೀಯ ಗುಣಗಳಿಂದಾಗಿ ಶಿಕ್ಷಣ ಮತ್ತು ಸಾಮಾಜಿಕ ಸೇವಾ ಕ್ಷೇತ್ರಕ್ಕೆ ಧುಮುಕಿದರು. ಸುಂಕದ ಕಟ್ಟೆಯಲ್ಲಿ ಶ್ರೀ ಲಕ್ಷ್ಮಿ ಸಮೂಹ ಸಂಸ್ಥೆ ಆರಂಭಿಸಿ ಧನ್ವಂತರಿ ಎಜುಕೇಷನ್ ಟ್ರಸ್ಟ್ ಅಡಿ ನರ್ಸಿಂಗ್ ಶಾಲೆ, ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್, ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಬಿ–ಫಾರ್ಮಾ ಕಾಲೇಜು ಸೇರಿದಂತೆ ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಆರಂಭಿಸಿದ್ದಾರೆ.

ನರ್ಸಿಂಗ್ ಕಾಲೇಜಿನಲ್ಲಿ 29 ವಿವಿಧ ಕೋರ್ಸುಗಳಲ್ಲಿ 6,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಉನ್ನತ ಶಿಕ್ಷಣಕ್ಕೆ ಆದ್ಯತೆ ನೀಡಲು ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಾ ಬಂದಿರುವ ರಾಮಚಂದ್ರಯ್ಯ, ತಳಮಟ್ಟದ ಹಾಗೂ ಸಾಮಾಜಿಕ ಅಭಿವೃದ್ಧಿ, ಸ್ವಯಂ ಉದ್ಯೋಗ ಕಲ್ಪಿಸುವಲ್ಲಿ ಶ್ರಮಿಸುತ್ತಿರುವ ಅವರಿಗೆ ಹಲವು ಪ್ರಶಸ್ತಿಗಳು ಸಂದಿವೆ.

ಎಸ್.ಎನ್.ವೆಂಕಟಲಕ್ಷ್ಮಿ ನರಸಿಂಹರಾಜು: ಶಿಕ್ಷಣ ತಜ್ಞ, ಸಮರ್ಥ ಆಡಳಿತಗಾರ ಹಾಗೂ ಸಾಮಾಜಿಕ ಕಾರ್ಯಕರ್ತರಾದ ಎಸ್.ಎನ್.ವೆಂಕಟಲಕ್ಷ್ಮಿ ನರಸಿಂಹರಾಜು ಅವರು ಬೆಂಗಳೂರಿನ ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ ಮತ್ತು ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷರಾಗಿದ್ದಾರೆ.

ಸಮಾಜದ ಎಲ್ಲ ವರ್ಗಗಳಿಗೂ ಶಿಕ್ಷಣದಲ್ಲಿ ಸಮಾನ ಅವಕಾಶ ನೀಡುವಲ್ಲಿ ಒಬ್ಬ ಆಡಳಿತಗಾರನಾಗಿ ಶ್ರಮಿಸುತ್ತಿರುವ ಅವರು, ಪ್ರತೀ ವರ್ಷ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಮೆಡಿಕಲ್ ಸೈನ್ಸ್, ಡೆಂಟಲ್, ಫಾರ್ಮಸಿ, ನರ್ಸಿಂಗ್, ಫಿಸಿಯೋ ಥೆರಪಿ, ಇಂಜಿನಿಯರಿಂಗ್, ಆರ್ಕಿಟೆಕ್ಚರ್, ಪಾಲಿಟೆಕ್ನಿಕ್, ಕಾಮರ್ಸ್, ಮ್ಯಾನೇಜ್‌ಮೆಂಟ್, ಕಾನೂನು ವಿಷಯಗಳಲ್ಲಿ ಶಿಕ್ಷಣ ನೀಡುತ್ತಿರುವ ರಾಜು ಅವರಿಗೆ 'ಮಾಡೆಲ್ ಎಂಪವರ್' ಮತ್ತು 'ದಿ ಗಾರ್ಡಿಯನ್ಸ್ ಆಫ್ ಎಜುಕೇಷನ್' ಪ್ರಶಸ್ತಿಗಳು ಸಂದಿವೆ.

8,722 ಮಂದಿಗೆ ವಿವಿಧ ಪದವಿ ಪ್ರದಾನ

ಮೈಸೂರು, ಜೂ. 30 (ಆರ್‌ಕೆ)– ಜುಲೈ 2 ರಂದು ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ (ಕರಾಮುವಿವಿ)ದ 18ನೇ ವಾರ್ಷಿಕ ಘಟಿಕೋತ್ಸವ ಸಮಾರಂಭ ನಡೆಯಲಿದೆ.

ಮುಕ್ತ ಗಂಗೋತ್ರಿಯ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅವರು, ಭಾನುವಾರ ಬೆಳಗ್ಗೆ 11 ಗಂಟೆಗೆ ಮುಕ್ತ ಗಂಗೋತ್ರಿ ಆವರಣದಲ್ಲಿರುವ ಘಟಿಕೋತ್ಸವ ಭವನದಲ್ಲಿ ನಡೆಯಲಿರುವ 18ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಜ್ಯದ ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಪಿಹೆಚ್.ಡಿ, ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡುವರು ಎಂದರು.

ಸಮ ಕುಲಾಧಿಪತಿಗಳಾದ ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಭಾಗವಹಿಸಲಿರುವ ಸಮಾರಂಭ'ದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ಅಶೋಕ್ ಎಸ್. ಕಿಣಗಿ ಘಟಿಕೋತ್ಸವ ಭಾಷಣ ಮಾಡುವರು.

ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಕುಲಸಚಿವ ಪ್ರೊ. ಕೆಎಲ್‌ಎನ್ ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ವ್ಯವಸ್ಥಾಪನಾ ಮಂಡಳಿ ಹಾಗೂ ಶೈಕ್ಷಣಿಕ ಮಂಡಳಿ ಸದಸ್ಯರು ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸುವರು. ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು, ಬೆಂಗಳೂರಿನ ಶ್ರೀ ಲಕ್ಷ್ಮೀ ಗ್ರೂಪ್ ಆಫ್ ಇನ್ಸ್‌ಟಿಟ್ಯೂಷನ್ಸ್ ಸಂಸ್ಥಾಪಕ ಅಧ್ಯಕ್ಷ ಎನ್.ರಾಮಚಂದ್ರಯ್ಯ ಹಾಗೂ ಚಿಲ್ಡ್ರನ್ಸ್ ಎಜುಕೇಷನ್ ಸೊಸೈಟಿ ಮತ್ತು ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್ ಅಧ್ಯಕ್ಷ ಎಸ್.ಎನ್. ವೆಂಕಟಲಕ್ಷ್ಮಿ ನರಸಿಂಹರಾಜು ಅವರಿಗೆ ಮುಕ್ತ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಅಭಿನಂದಿಸಲಾಗುವುದು.

ವಾರ್ಷಿಕ ಘಟಿಕೋತ್ಸವದಲ್ಲಿ 1 ಪಿಹೆಚ್.ಡಿ ಪದವಿ, 44 ಚಿನ್ನದ ಪದಕಗಳು, 27 ನಗದು ಬಹುಮಾನ ಸೇರಿದಂತೆ 8722 ಅಭ್ಯರ್ಥಿಗಳಿಗೆ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಧಾನ ಮಾಡಲಾಗುವುದು. 4281 ಮಹಿಳೆಯರು ಸೇರಿ 7057 ಮಂದಿಗೆ ಸ್ನಾತಕೋತ್ತರ ಪದವಿ, 959 ಮಹಿಳೆಯರು ಸೇರಿ 1664 ಮಂದಿಗೆ ಸ್ನಾತಕ ಪದವಿ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಲಾಗುವುದು.

2021–22ನೇ ಸಾಲಿನಲ್ಲಿ ನಡೆದ ಪರೀಕ್ಷೆಗೆ ಹಾಜರಾಗಿದ್ದ 11,812 ಅಭ್ಯರ್ಥಿಗಳ ಪೈಕಿ ಒಟ್ಟು 8722 ಮಂದಿ ತೇರ್ಗಡೆಯಾಗಿದ್ದು, ಶೇ. 73.84 ರಷ್ಟು ಫಲಿತಾಂಶ ಬಂದಿದೆ. ರಾಜ್ಯಶಾಸ್ತ್ರ ವಿಭಾಗದ ಓರ್ವ ಮಹಿಳಾ ಅಭ್ಯರ್ಥಿಗೆ ಈ ಬಾರಿ ಪಿಎಚ್.ಡಿ ಪದವಿ ನೀಡಲಾಗುತ್ತಿದೆ. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಭಾಷಾ ವಿಷಯಗಳಲ್ಲಿ 1761 ಮಹಿಳೆಯರು ಮತ್ತು 2757 ಮಂದಿ ತೇರ್ಗಡೆಯಾಗಿದ್ದಾರೆ. ಸಮಾಜ ವಿಜ್ಞಾನ ವಿಷಯಗಳಲ್ಲಿ (ಸ್ನಾತಕೋತ್ತರ ಪದವಿ) 2662, ವಾಣಿಜ್ಯ ಶಾಸ್ತ್ರದಲ್ಲಿ 1862, ನಿರ್ವಹಣಾ ಶಾಸ್ತ್ರದಲ್ಲಿ 191, ಶಿಕ್ಷಣ ಶಾಸ್ತ್ರದಲ್ಲಿ 472, ವಿಜ್ಞಾನ, ಗ್ರಂಥಾಲಯ ಮಾಹಿತಿ ವಿಜ್ಞಾನ ವಿಷಯಗಳಲ್ಲಿ 777 ಅಭ್ಯರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ ಕೆಎಲ್‌ಎನ್ ಮೂರ್ತಿ, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ, ಹಣಕಾಸು ಅಧಿಕಾರಿ ಡಾ.ಎ.ಖಾದರ್ ಪಾಷಾ, ಡೀನ್ (ಶೈಕ್ಷಣಿಕ), ಡಾ. ಲಕ್ಷ್ಮೀ (ಡೀನ್) (ಅಧ್ಯಯನ ಕೇಂದ್ರ), ಡಾ. ರಾಮನಾಥ ನಾಯ್ಡು ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

39 ಹೊಸ ಕೋರ್ಸುಗಳಿಗೆ ಯುಜಿಸಿ ಅನುಮತಿ

ಆನ್‌ಲೈನ್‌ನಲ್ಲಿ 13 ಪ್ರೋಗ್ರಾಂ ಶೀಘ್ರ ಆರಂಭ: ಪ್ರೊ. ಶರಣಪ್ಪ ಹಲಸೆ

ಮೈಸೂರು, ಜೂ.30(ಆರ್‌ಕೆ)–ಎ+ನ್ಯಾಕ್ ಮಾನ್ಯತೆ ಪಡೆದಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 13 ಹೊಸ ಕೋರ್ಸ್ ಆರಂಭಿಸಲು ಯುಜಿಸಿ ಅನುಮತಿ ನೀಡಿದೆ ಎಂದು ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ತಿಳಿಸಿದ್ದಾರೆ.

ಮುಕ್ತ ವಿವಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ನಮ್ಮಲ್ಲಿರುವ ಮೂಲ ಸೌಲಭ್ಯಗಳಿಗನುಸಾರ ಪೂರಕ ದಾಖಲೆಗಳೊಂದಿಗೆ 51 ವಿವಿಧ ಪ್ರೋಗ್ರಾಮ್ (ಕೋರ್ಸುಗಳು)ಗಳನ್ನು ಆರಂಭಿಸಲು ಅನುಮತಿಗಾಗಿ ಕೋರಿಕೊಂಡಿದ್ದೆವು. ಪ್ರಸ್ತಾವನೆಯನ್ನು ಪರಿಗಣಿಸಿದ ವಿಶ್ವವಿದ್ಯಾನಿಲಯಗಳ ಅನುದಾನ ಆಯೋಗ (ಯುಜಿಸಿ)ವು 39 ಕೋರ್ಸುಗಳಿಗೆ ಅನುಮೋದನೆ ನೀಡಿದೆ ಎಂದರು.

ಉಳಿದ 12 ಪ್ರೋಗ್ರಾಮ್‌ಗಳಿಗೆ ಕೆಲ ಮಾಹಿತಿಗಳನ್ನು ಕೇಳಲಾಗಿದೆ. ಅವುಗಳನ್ನು ಒದಗಿಸಲು ವಿಶ್ವವಿದ್ಯಾನಿಲಯವು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಇಷ್ಟರಲ್ಲೇ ಅವುಗಳಿಗೂ ಅನುಮತಿ ನಿರೀಕ್ಷಿಸಲಾಗಿದೆ. ಅದೇ ರೀತಿ 3 ಯುಜಿ ಮತ್ತು 10 ಪಿಜಿ ಆನ್‌ಲೈನ್ ಕೋರ್ಸ್‌ಗಳನ್ನು ಶೀಘ್ರ ಆರಂಭಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಅವರು ತಿಳಿಸಿದರು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪದವಿ, ಸ್ನಾತಕ ಪದವಿ ಪಡೆದ ಹಲವು ವಿದ್ಯಾರ್ಥಿಗಳು ಕೆಎಎಸ್, ಐಎಎಸ್ ಅಧಿಕಾರಿಗಳಾಗಿದ್ದಾರೆ. ಹಲವರು ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ವಿವಿಧ ಸರ್ಕಾರಿ ಹುದ್ದೆಗಳನ್ನು ಗಿಟ್ಟಿಸಿಕೊಂಡಿದ್ದಾರೆ ಎಂದ ಅವರು, ಗುಣಮಟ್ಟದ ಉನ್ನತ ಶಿಕ್ಷಣ ನೀಡುತ್ತಿರುವುದು ಈ ಸಾಧನೆಗೆ ಕಾರಣ ಎಂದು ನುಡಿದರು.

ದೂರ ಶಿಕ್ಷಣವನ್ನು ಕೇವಲ ಮುಕ್ತ ವಿಶ್ವವಿದ್ಯಾನಿಲಯ ಮಾತ್ರ ನೀಡಬೇಕೆಂಬ ನಿಯಮ ರೂಪಿಸಿರುವುದರಿಂದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಪಡೆದು ಉನ್ನತ ಶಿಕ್ಷಣ ಪಡೆಯುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. 2021–22ನೇ ಸಾಲಿನಲ್ಲಿ 6,200 ಇದ್ದ ವಿದ್ಯಾರ್ಥಿಗಳ ಸಂಖ್ಯೆ ಈಗ 18,500ಕ್ಕೇರಿದೆ ಎಂದು ಪ್ರೊ. ಹಲಸೆ ತಿಳಿಸಿದರು.

ರಾಜ್ಯದಾದ್ಯಂತ ಎಲ್ಲರಿಗೂ ಉನ್ನತ ಶಿಕ್ಷಣ ಲಭ್ಯವಾಗುವಂತೆ ಮಾಡಲು ಪ್ರತೀ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ ಮತ್ತು ತಾಲೂಕು ಕೇಂದ್ರಗಳಲ್ಲಿ ಅಧ್ಯಯನ ಕೇಂದ್ರ ತೆರೆದು ಲಭ್ಯವಿರುವ ಕೋರ್ಸುಗಳ ಬಗ್ಗೆ ಪ್ರಚಾರ ಮಾಡಿ ಪ್ರವೇಶಾತಿ ಹೆಚ್ಚಿಸಲು ಪ್ರಯತ್ನಿಸುವುದಾಗಿಯೂ ಅವರು ಇದೇ ಸಂದರ್ಭ ತಿಳಿಸಿದರು.

ರಾಷ್ಟ್ರಪತಿಗಳು ಒಂದು ವೇಳೆ ಆಗಮಿಸದಿದ್ದರೆ

ಜು.3ರಂದು ರಾಜಭವನದಲ್ಲಿ ಗೌರವ ಡಾಕ್ಟರೇಟ್ ಪ್ರದಾನ


ಮೈಸೂರು, ಜೂ.30(ಆರ್‌ಕೆ)–ಜುಲೈ 2ರಂದು ಘಟಿಕೋತ್ಸವ ಸಮಾರಂಭಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಗಮಿಸದಿದ್ದಲ್ಲಿ ಜುಲೈ 3ರಂದು ಬೆಂಗಳೂರಿನ ರಾಜಭವನದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅವರು ತಿಳಿಸಿದ್ದಾರೆ.

ಬುಡಕಟ್ಟು ಸಮುದಾಯಕ್ಕೆ ಸಲ್ಲಿಸಿರುವ ಸೇವೆ ಹಾಗೂ ಭಾರತದ ಅತ್ಯುನ್ನತ ಸ್ಥಾನ ಅಲಂಕರಿಸಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಗೌರವ ಡಾಕ್ಟರೇಟ್ ನೀಡಿ ಅಭಿನಂದಿಸಲು ನಮಗೆ ಒಂದು ಅವಕಾಶ ಸಿಕ್ಕಿದೆ. 18ನೇ ಘಟಿಕೋತ್ಸವ ಸಮಾರಂಭಕ್ಕೆ ಅವರನ್ನು ಆಹ್ವಾನಿಸಿದ್ದೇವೆ. ಅದಕ್ಕೆ ಅವರು ಸಮ್ಮತಿಸಿದ್ದಾರೆ. ಆದರೆ ಇನ್ನೂ ಅಧಿಕೃತ ಟಿಪಿ (ಪ್ರವಾಸ ಕಾರ್ಯಕ್ರಮ) ತಲುಪಿಲ್ಲ ಎಂದು ಅವರು ತಿಳಿಸಿದರು. ಒಂದು ವೇಳೆ ಬಾರದಿದ್ದಲ್ಲಿ ಜುಲೈ 3ರಂದು ಬೆಂಗಳೂರಿನ ರಾಜಭವನಕ್ಕೆ ಭೇಟಿ ನೀಡುವ ಕಾರ್ಯಕ್ರಮವಿರುವುದರಿಂದ ನಾವು ಅಲ್ಲಿಗೇ ತೆರಳಿ ರಾಷ್ಟ್ರಪತಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ನಿರ್ಧರಿಸಲಾಗಿದೆ ಎಂದು ಪ್ರೊ. ಹಲಸೆ ಅವರು ನುಡಿದರು.

ಕಬಡ್ಡಿ:ಇರಾನ್ ಮಣಿಸಿ 8ನೇ ಬಾರಿಗೆ ಏಷ್ಯನ್ ಚಾಂಪಿಯನ್ ಪಟ್ಟ ಅಲಂಕರಿಸಿದ ಭಾರತ

ಬುಸಾನ್(ಕೊರಿಯಾ): ಅದ್ಭುತ ಪ್ರದರ್ಶನ ನೀಡಿದ ಭಾರತದ ಪುರುಷರ ಕಬಡ್ಡಿ ತಂಡ ಎಂಟನೇ ಬಾರಿ ಏಷ್ಯನ್ ಚಾಂಪಿಯನ್‌ಶಿಪ್ ಗೆದ್ದಿದೆ. ಕೊರಿಯಾದ ಬುಸಾನ್‌ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ 42–32 ಅಂತರದಿಂದ ಇರಾನ್ ತಂಡವನ್ನು ಸೋಲಿಸಿತು. ಈ ಟೂರ್ನಿಯ ಒಂಬತ್ತು ಆವೃತ್ತಿಗಳಲ್ಲಿ ಭಾರತಕ್ಕೆ ಇದು ಎಂಟನೇ ಪ್ರಶಸ್ತಿಯಾಗಿದೆ.

ಮೊದಲ ಐದು ನಿಮಿಷಗಳಲ್ಲಿ ಇರಾನ್ ವಿರುದ್ಧ ಭಾರತ ತಂಡದ ಸ್ಥಿತಿ ಉತ್ತಮವಾಗಿರಲಿಲ್ಲ. ಆದರೆ 10ನೇ ನಿಮಿಷದಲ್ಲಿ ಎಲ್ಲವೂ ಬದಲಾಯಿತು. ಇರಾನ್ ತಂಡ ಆಲೌಟ್ ಆಯಿತು. ಭಾರತದ ರಕ್ಷಣಾ ತಂಡವು ಕೆಲವು ಟ್ಯಾಕಲ್ ಪಾಯಿಂಟ್‌ಗಳನ್ನು ಬಿಟ್ಟುಕೊಟ್ಟ ನಂತರ ಪವನ್ ಸೆಹ್ರಾವತ್ ಮತ್ತು ಅಸ್ಲಾಮ್ ಇನಾಮದಾರ್ ಯಶಸ್ವಿ ದಾಳಿಗಳ ಮೂಲಕ ಇರಾನ್ ಮೇಲೆ ಒತ್ತಡ ಹೇರಿದರು.



ಕೊನೆಯ ನಿಮಿಷಗಳಲ್ಲಿ ಭಾರತದಿಂದ ಉತ್ತಮ ಪ್ರದರ್ಶನ: ಪಂದ್ಯದಲ್ಲಿ ಇನ್ನೆರಡು ನಿಮಿಷ ಬಾಕಿ ಇರುವಾಗ ಇರಾನ್ ತಂಡ ಕೇವಲ ಏಳು ಅಂಕಗಳ ಹಿಂದೆ ಬಿದ್ದಿತ್ತು. ಭಾರತ 38–31ರಲ್ಲಿ ಮುಂದಿತ್ತು. ಪಂದ್ಯ ಬಿಗುವಿನತ್ತ ಸಾಗಿತು, ಆದರೆ ಒತ್ತಡದಲ್ಲಿ ಉತ್ತಮ ಪ್ರದರ್ಶನ ನೀಡಿದ ಭಾರತ ತಂಡವು 42–32 ರಲ್ಲಿ ಪಂದ್ಯವನ್ನು ಗೆದ್ದುಕೊಂಡಿತು. ಇದಕ್ಕೂ ಮುನ್ನ ನಡೆದ ಪಂದ್ಯಾವಳಿಯ ಲೀಗ್ ಹಂತದಲ್ಲಿ ಭಾರತ 64–20 ಅಂಕಗಳಿಂದ ಹಾಂಕಾಂಗ್ ತಂಡವನ್ನು ಸೋಲಿಸಿತು. ಲೀಗ್ ಸುತ್ತಿನಲ್ಲಿ ಒಂದೇ ಒಂದು ಪಂದ್ಯವನ್ನು ಭಾರತ ಸೋತಿರಲಿಲ್ಲ.

10ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 10 ವರ್ಷಗಳಾದರೂ ನಿಮ್ಮ ನೆನಪು ಸದಾ ಹಸಿರಾಗಿರುತ್ತದೆ. ನಿಮ್ಮ ಆತ್ಮದ ಬೆಳಕು ನಮಗೆಲ್ಲಾ ದಾರಿ ದೀಪವಾಗಿ ಮುನ್ನಡೆಸುತ್ತಿದೆ
ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಕುಟುಂಬವರ್ಗ

ಎಂ.ಎಸ್.ಮುನಿಯಮ್ಮ (ಮೋನಿಕಮ್ಮ)

ಐದನೇ ವರ್ಷದ ಸವಿನೆನಪು



ಶ್ರೀ ಧರ್ಮಲಿಂಗಾಚಾರ್
ನಿಧನ: 1.7.2018
ಸದಾ ನಿಮ್ಮ ನೆನಪಿನಲ್ಲಿರುವ ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು, ಕೆ.ಜಿ.ಕೊಪ್ಪಲು, ಮೈಸೂರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ




ಶ್ರೀ ರಂಗಯ್ಯನವರು
(ನಿವೃತ್ತ ಕಾರ್ಯಪಾಲಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ, ಮೈಸೂರು.)
ಜನನ: 20.09.1960 ಮರಣ: 22.06.2023

ಇವರು ದಿನಾಂಕ: 22.06.2023ನೇ ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 02-07-2023 ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಸಾಲಿಗ್ರಾಮ ತಾಲ್ಲೂಕು, ಹೊನ್ನೇನಹಳ್ಳಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ನಾಗರತ್ನ, ಮಗ, ಸೊಸೆ, ಮಗಳು, ಅಳಿಯ, ಮೊಮ್ಮಕ್ಕಳು, ಮೃತರ ಸಹೋದರ ಹಾಗೂ ಕುಟುಂಬದವರು. | ಭೋಜನ: ಮಧ್ಯಾಹ್ನ 12.30ಗಂಟೆಗೆ

ವೈಕುಂಠ ಸಮಾರಾಧನೆ ಆಹ್ವಾನ



ಶ್ರೀಮಾನ್ ಹನುಮಂತು
ಸರ್ಕಾರಿ ಪಠ್ಯಪುಸ್ತಕ ಮುದ್ರಣಾಲಯ, ಮೈಸೂರು

ಇವರು ದಿ: 20.06.2023 ಮಂಗಳವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ, ತತ್ಸಂಬಂಧ ಮೃತರ ವೈಕುಂಠ ಸಮಾರಾಧನೆಯನ್ನು ದಿ. 1.7.2023 ಶನಿವಾರ ಮಧ್ಯಾಹ್ನ 1 ಗಂಟೆಗೆ, ನಂ.4192, 7ನೇ ಕ್ರಾಸ್, ಗಾಂಧಿನಗರ, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ. ದುಃಖತಪ್ತರು: ಶ್ರೀಮತಿ ಭಾಗ್ಯಮ್ಮ ಹಾಗೂ ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರು ಶ್ರೀಮತಿ ಅಹಲ್ಯಾ ಎಸ್.ಮೂರ್ತಿ ಕೋಂ ಶ್ರೀ ಶ್ರೀಕಂಠಮೂರ್ತಿ.ಪಿ ಎಂಬುವರಿಂದ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಖರೀದಿಸುವ ಇರಾದೆಯನ್ನು ಹೊಂದಿರುತ್ತಾರೆ. ಆದುದರಿಂದ ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರವಿದ್ದಲ್ಲಿ ಅಥವಾ ಸದರಿ ಮಾರಾಟಕ್ಕೆ ಯಾವುದೇ ತಕರಾರು ಇದ್ದಲ್ಲಿ ಅವರುಗಳು ನಮಗೆ ಲಿಖಿತ ನೋಂದಾಯಿತ ಅಂಚೆಯ ಮೂಲಕ ದಾಖಲಾತಿಗಳ ಸಹಿತ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಇರುವ ಹಕ್ಕು ಅಥವಾ ಅಧಿಕಾರ ಅಥವಾ ತಕರಾರಿನ ಸ್ವರೂಪವನ್ನು ಈ ಪ್ರಕಟಣೆಯಾದ ಏಳು ದಿನಗಳೊಳಗಾಗಿ ತಿಳಿಸತಕ್ಕದ್ದು. ಈ ಮೇಲೆ ಹೇಳಿದ ಏಳು ದಿನಗಳೊಳಗೆ ಈ ಪ್ರಕಟಣೆಗೆ ಯಾವುದೇ ಪ್ರತಿಕ್ರಿಯೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಈ ಮೇಲೆ ನಮೂದಿಸಿರುವ ವ್ಯಕ್ತಿಯನ್ನುಳಿದು ಇನ್ನು ಯಾರಿಗೂ ಯಾವುದೇ ತೆರನಾದ ಹಕ್ಕು ಅಥವಾ ಅಧಿಕಾರ ಇರುವುದಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಸದರೀ ಸ್ವತ್ತನ್ನು ಖರೀದಿಸುತ್ತಾರೆ. ಈ ಪ್ರಕಟಣೆಯಾದ ಏಳು ದಿನಗಳ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್: ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರ ಹೋಬಳಿ ತಾಂಡವಪುರ ಗ್ರಾಮದ ಹಳೆ ಅಸೆಸ್‌ಮೆಂಟ್' ಜಂಜರ್ ನಂಬರ್ 933, ಸ್ವತ್ತಿನ ನಂಬರ್ 790 ಹೊಸ ಜಂಜರ್ ನಂಬರ್ 934 ಸ್ವತ್ತಿನ ನಂಬರ್ 791 ರಲ್ಲಿರುವ ನಿವೇಶನ ಸಂಖ್ಯೆ 21 ತಾಂಡವಪುರ ಖಾತಾ ನೆಂಬರ್ 934/791 ಪಿ.ಐ.ಡಿ ನಂಬರ್ 152200503110001404 ರ ಪೂರ್ವ ಪಶ್ಚಿಮ 32.0040 ಮೀಟರ್‌ಗಳು ಮತ್ತು ದಕ್ಷಿಣೋತ್ತರ 30.48 ಮೀಟರ್‌ಗಳ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 32, ಉತ್ತರಕ್ಕೆ : ನಿವೇಶನ ಸಂಖ್ಯೆ 20, ದಕ್ಷಿಣಕ್ಕೆ : ರಸ್ತೆ

ಸಹಿ/– ರೋಹಿತ್ ಸುಬ್ಬಯ್ಯ , ವಕೀಲರು
ನಂ.1230/ಎ, 2ನೇ ಕ್ರಾಸ್, (ಕೃಷ್ಣಮೂರ್ತಿಪುರಂ ರಾಮಮಂದಿರದ ಹಿಂಭಾಗ) ಚಾಮರಾಜ ಮೊಹಲ್ಲ, ಮೈಸೂರು –570004, ಮೊ.9430004999